

ಅಮೃತ ಮಂಥನ

ವಿಶ್ವ ಕೊಂಕಣಿ ಸರದಾರ

ಶ್ರೀ ಬಸ್ತಿ ವಾಮನ ಶೆಣೈ

ಆತ್ಮ ಕಥನ

ಅಮೃತ ಮಂಥನ

ವಿಶ್ವ ಕೊಂಕಣಿ ಸರದಾರ

ಶ್ರೀ ಬಸ್ತಿ ವಾಮನ ಶೆಣೈ

ಆತ್ಮ ಕಥನ

ಪ್ರಕಾಶಕರು : ಬಸ್ತಿ ಪ್ರಕಾಶನ
ಬಸ್ತಿ ಗಾರ್ಡನ್ಸ್
ತುಂಬೆ - 574 170
ಬಂಟವಾಳ (ದ.ಕ.)

ಮೊದಲ ಮುದ್ರಣ : 2010

ಕಲೆ : ಗುರು ಬಾಳಿಗ

ಮುದ್ರಕರು : ಕೋಡ್‌ವರ್ಡ್ ಪ್ರೋಸೆಸ್ ಅಂಡ್ ಪ್ರಿಂಟರ್ಸ್
ಎಯ್ಯಾಡಿ, ಮಂಗಳೂರು
ಫೋನ್ : 9900100818

ಮುಮ್ಮಾತು

ನಾನು ನನ್ನದು ಎಂಬುದನ್ನೇನೂ ಹೇಳಿಕೊಳ್ಳುವ ಮನೋವೃತ್ತಿ ನನ್ನದಲ್ಲ. ಅದು ನನ್ನ ಮಟ್ಟಿಗೆ ಸಾಧುವೂ ಅಲ್ಲ ಎಂಬ ಸತ್ಯವನ್ನೂ ಮನಗಂಡವನು ನಾನು. ನಾನು ನಂಬಿಕೊಂಡು ಬಂದಿರುವ ಇಷ್ಟದೇವರು ಬಂಟವಾಳದ ಅಧಿದೇವತೆ ಶ್ರೀ ತಿರುಮಲ ವೆಂಕಟರಮಣ ಸ್ವಾಮಿ. ನನ್ನ ಜೀವನ ರೂಪಗೊಳ್ಳುವ ಸಂಕ್ರಮಣ ಕಾಲದಲ್ಲಿ ಜೀವನ ಧರ್ಮವನ್ನು ತಮ್ಮ ಪ್ರವಚನಗಳಿಂದ ಬೋಧಿಸಿದ ಶ್ರೀ ಕಾಶೀಮಠದ ಶ್ರೀ ಸುಧೀಂದ್ರ ತೀರ್ಥ ಸ್ವಾಮಿಗಳವರು. ನನ್ನ ಬಾಲ್ಯದಲ್ಲಿ ನನ್ನ ಪೂಜ್ಯ ತಂದೆ ಬಸ್ತಿ (ಮೋಟಾರ) ಮಾಧವ ಶೆಣೈಯವರಿಂದ ಬಳುವಳಿಯಾಗಿ ಬಂದಿರುವ ಧೀಃಶಕ್ತಿ, ತಾಯಿಯವರಿಂದ ಬಂದ ಧಾರ್ಮಿಕತೆ. ನಾನು 'ಅವರಲ್ಲಿ ದೇವರನ್ನು ಕಂಡೆ' ಎಂಬುದಾಗಿ ಹೇಳಿಸಿಕೊಳ್ಳುವ ದಿ। ಶ್ರೀ ಟಿ. ಎ. ಪೈ ಅನಂತರ ಮುನ್ನಡೆಸಿದ ದಿ। ಶ್ರೀ ಕೆ.ಕೆ. ಪೈಯವರು. ನನ್ನ ಕಾರ್ಯಗಳನ್ನು ಮೆಚ್ಚಿ ನನ್ನನ್ನು ವಿಶ್ವಾಸದಿಂದ ಕಾಣುವ 'ಮಾತನಾಡುವ ಮಂಜುನಾಥ' ಧರ್ಮಸ್ಥಳದ ರಾಜರ್ಷಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರು. ಅಲ್ಲದೇ ನನ್ನ ಯೋಜನೆಗಳು ಹಾಗೂ ದರ್ಶನಗಳು ಕಾರ್ಯರೂಪಕ್ಕೆ ಬರುವಲ್ಲಿ ಯಾವಾಗಲೂ ನನ್ನೊಡನಿರುವ ಶ್ರೀ ಬಿ. ಅಹ್ಮದ ಹಾಜೀ ಮೊಹಿಯುದ್ದೀನ, ಶ್ರೀ ಆರ್. ವ್ಹಿ. ದೇಶಪಾಂಡೆ, ಡಾ. ಪಿ. ದಯಾನಂದ ಪೈ ಡಾ. ರೋನಾಲ್ಡ ಕೊಲಾಸೊ ಇವರೆಲ್ಲರ ಆಶೀರ್ವಾದ, ಹರಕೆ, ಮಾರ್ಗದರ್ಶನ, ಅನವರತ ಬೆಂಬಲ ಹಾಗೂ ಪ್ರೋತ್ಸಾಹಗಳಿಂದ ಇಂದು ನಾನಾಗಿರುವ ನಾನು.

ನನ್ನ ಹುಟ್ಟಿದ ಊರು ಬಂಟವಾಳ. ಪಾವನ ಗಂಗೆಯಾಗಿ ಹರಿಯುತ್ತಲಿರುವ ತಾಯಿ ನೇತ್ರಾವತಿ. ಶ್ರೀ ತಿರುಮಲ ವೆಂಕಟರಮಣ ಸ್ವಾಮಿ ದೇವಳ ಮತ್ತು ಶ್ರೀ ಮಹಾಲಿಂಗೇಶ್ವರ ದೇವಳದ ಪರಿಸರ. ನನಗೆ ವಿದ್ಯೆಯನ್ನು ಇತ್ತ ಶ್ರೀ ದೇವಳದ ಶಾಲೆಗಳು. ಆರೋಗ್ಯಯುಕ್ತ ಶರೀರವನ್ನಿತ್ತ ಶ್ರೀ ಯಶವಂತ ವ್ಯಾಯಾಮ ಶಾಲೆ ಮತ್ತು ನನ್ನ ಜೀವನದ ಕೊನೆಯ ಹಂತ ಬಂತು ಎನ್ನುವಷ್ಟರಲ್ಲಿ ಇನ್ನೊಂದೇ ಇನ್ನಿಂಗ್ಸ ಅಥವಾ ಮರುಜೀವನವನ್ನಿತ್ತ ಕೊಂಕಣಿ ಭಾಷೆ ಮತ್ತು 'ವಿಶ್ವ ಕೊಂಕಣಿ ಕೇಂದ್ರ' ದರ್ಶನದ ಕೈಂಕರ್ಯಗಳು ಇವಿಷ್ಟು ಅಥವಾ ಇವೆಲ್ಲವುಗಳ ಫಲವಾಗಿ 'ಕರ್ಣ'ನಂತಿದ್ದ ನಾನು ಇಂದು 'ಇವ ನನ್ನವ. ಇವ ನನ್ನವ' ಎಂದು ಪ್ರೀತಿ, ವಿಶ್ವಾಸ, ಗೌರವಗಳಿಂದ ಕರೆಯಿಸಿಕೊಳ್ಳುವ ಅಂತಸ್ತಿಗೆ ಬಂದಿರುತ್ತೇನೆ. ಇದಕ್ಕಿಂತ ಬೇರೆಯಾಗಿರುವ ಜೀವನ ನನ್ನದಲ್ಲ - ನನಗಿಲ್ಲ. 'ಸ್ವರ್ಗ' ಎನ್ನುವ Concept ಎಂಬುದಿದ್ದರೆ ಅದು ನನಗೆ ಇಲ್ಲಿಯೇ ಸಿಕ್ಕಿದೆ. ಇದು ನನ್ನ ಭಾಗ್ಯ.

ಬಂಟವಾಳ — ಬಸ್ತಿ ವಾಮನ ಶೆಣೈ

ದಿನಾಂಕ 17.01.2010

ನನ್ನ ಊರು ಬಂಟವಾಳ

ನನ್ನ ಕುಟುಂಬದ ಮೇಲೆ ದೀರ್ಘ ಪರಿಣಾಮ ಬೀರಬಹುದಾದ ಬದಲಾವಣೆಯ ದಿನಗಳಲ್ಲಿ ನಾನು ಹುಟ್ಟಿದೆ. ನನ್ನ ತಂದೆಯವರು ನನ್ನ ತಾಯಿ ಮತ್ತು ಪ್ರಾಯದಲ್ಲಿ ಎಳೆಯರೇ ಅನ್ನಬಹುದಾದ ನನ್ನ ಇಬ್ಬರು ಅಕ್ಕಂದಿರನ್ನು ಕರಕೊಂಡು ನಮ್ಮ ಹಿರಿಯರ ಮನೆಯಿಂದ ಹೊರಬಂದು ಬೇರೆ ಒಂದು ಮನೆ ಮಾಡಿದ ನಂತರ ನಾನು ಹುಟ್ಟಿದೆ. ಹೊಸ ಮನೆಯಲ್ಲಿ ಹೊಸ ವಾತಾವರಣದಲ್ಲಿ ನನ್ನ ಹುಟ್ಟು ಆಯಿತು. ಸ್ತ್ರೀ ಸಹಜವಾದ ಅಭಿಲಾಷೆಯಿಂದ ಅಂದರೆ ಒಂದು ಗಂಡು ಮಗು ಬೇಕೆಂದು ಹಂಬಲಿಸುತ್ತಿದ್ದ ದಿನಗಳಲ್ಲಿ ನನ್ನ ತಾಯಿ ಭಾಗೀರಥಿ ಯಾನೆ ಗೌರಿ ಬಾಯಿ ಅನೇಕ ದೇವರುಗಳಿಗೆ ಹರಕೆ ಹೇಳಿಕೊಳ್ಳುತ್ತಲೇ ಇದ್ದ ದಿನಗಳಲ್ಲಿ ಶ್ರೀ ತಿರುಮಲ ವೆಂಕಟರಮಣ ಸ್ವಾಮಿ ಹಾಗೂ ಶ್ರೀ ದತ್ತಾತ್ರೇಯ ದೇವರ ಆಶೀರ್ವಾದದಿಂದ ನಾನು ಹುಟ್ಟಿದೆ'' ಎಂದು ಅವರು ಅತ್ಯಂತ ಭಕ್ತಿಯಿಂದ ಹೇಳಿಕೊಳ್ಳುವಂತೆ ನನ್ನ ಜನ್ಮವಾಯಿತು.

ನಾನು ಹುಟ್ಟಿದ ಊರು ಬಂಟವಾಳ. ಆ ಕಾಲದಲ್ಲಿ ನಾಡಿನಲ್ಲೆಲ್ಲಾ ವ್ಯಾಪಾರ ವಹಿವಾಟುಗಳಿಗೆ, ಬಂಗಾರ ವಜ್ರ ವೈಡೂರ್ಯಗಳಿಗೆ, ಶ್ರೀಮಂತಿಕೆಗೆ, ಸಾಂಸ್ಕೃತಿಕ ಕಲಾ ಚಟುವಟಿಕೆಗಳಿಗೆ ಹೆಸರಾದ ತಾಣವಾಗಿದ್ದ ಪ್ರಸಿದ್ಧ ಒಂದು ಪೇಟೆ. ಮೈಸೂರು ಮಹಾರಾಜರುಗಳ ಕಾಲದಲ್ಲಿ ನಿರ್ಮಾಣವಾಗಿದ್ದ ಮೈಸೂರು ಮಾರ್ಗಕ್ಕೆ ಬಂಟವಾಳ ರಸ್ತೆ ಎಂದೇ ಹೆಸರು. ಅಂತೆಯೇ ಶ್ರೀ ದೇವಳದ ಎದುರಿನಲ್ಲಿರುವ ಗೌಡ ಸಾರಸ್ವತ ಸಮಾಜದ ಪ್ರಮುಖ ಗುರು ಪೀಠಗಳಲ್ಲಿ ಒಂದಾದ ಶ್ರೀ ಕಾಶೀಮಠ ಸಂಸ್ಥಾನದ ಗುರುಗಳ 'ಕುಳಾರ' (ತವರುಮನೆ) ಎಂದೇ ಕರ್ನಾಟಕ ಕೇರಳ ರಾಜ್ಯಗಳಲ್ಲಿ ಗುರುತಿಸಲ್ಪಡುತ್ತಿತ್ತು. ಧರ್ಮಸ್ಥಳದ ಹೆಗ್ಗಡೆಗಳ ಒಲವಿನ ಊರು ಬಂಟವಾಳ. ಹಾಗೆಂದೇ ಹೆಗ್ಗಡೆಗಳು ಬಂದು ತಂಗುತ್ತಿದ್ದ ಹೆಗ್ಗಡೆಗಳ ಭಂಡಸಾಲೆ ಯಿಂದ ಪ್ರಸಿದ್ಧ.

ಲಾರಿ ಯುಗದ ಪ್ರವೇಶಕ್ಕೆ ಮುಂಚಿನ ದಿನಗಳಲ್ಲಿ ಚಾರ್ಮಾಡಿ, ಶಿರಾಡಿ, ಘಾಟಿಗಳ ಮಾರ್ಗವಾಗಿ ಹಾಸನ, ಶಿವಮೊಗ್ಗಗಳಿಂದ ದಿನಕ್ಕೆ ನೂರಾರು ಎತ್ತಿನ ಗಾಡಿಗಳಲ್ಲಿ ಅಕ್ಕಿ, ಭತ್ತ, ದವಸ ಧಾನ್ಯಗಳು ಬಂಟವಾಳಕ್ಕೆ ಬಂದು ನಂತರ ಮಂಗಳೂರಿಗೆ ಮತ್ತು ಇತರ ಪೇಟೆಗಳಿಗೆ ನೇತ್ರಾವತಿ ನದಿಯಲ್ಲಿ ದೋಣಿಗಳಲ್ಲಿ ಮತ್ತು ಎತ್ತಿನ ಗಾಡಿಗಳಲ್ಲಿ ರಫ್ತಾಗುತ್ತಿತ್ತು. ಅಕ್ಕಿ, ಭತ್ತ ಬೆಲ್ಲ ಧಾನ್ಯಗಳಿಗೆ ಆಗಿನ ಕಾಲದಲ್ಲಿ ಬಂಟವಾಳ ಪೇಟೆ 'ಮಾರ್ಕೆಟ್' ಆಗಿರುತ್ತಿತ್ತು ಮತ್ತು ಇಲ್ಲಿಯೇ ರೇಟ್ ಫಿಕ್ಸ್ ಆಗುತ್ತಿತ್ತು.

100 - 200 ವರ್ಷಗಳ ಹಿಂದಿನಿಂದಲೇ ನಮ್ಮ ಪೂರ್ವಜರು ಹೊರಗಿನಿಂದ ಬೀಸುತ್ತಿದ್ದ ಹೊಸ ವಿಚಾರಗಳಿಗೆ, ಬದಲಾವಣೆಗಳಿಗೆ ಕಿಟಕಿ ಬಾಗಿಲುಗಳನ್ನು ಮನಸ್ಸುಗಳನ್ನು ತೆರೆದೇ ಇಟ್ಟಿರುತ್ತಿದ್ದುದರಿಂದ, ಅವರು ರಾಷ್ಟ್ರೀಯ, ಮುಖ್ಯವಾಗಿ 'ಗಾಂಧಿ ವಿಚಾರ

ಧಾರೆ'ಗಳಿಗೆ ತೀವ್ರವಾಗಿ ಸ್ಪಂದಿಸುತ್ತಿದ್ದರು. ಅದರಿಂದಾಗಿ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮುನ್ನುಗ್ಗುತ್ತಿದ್ದವರಲ್ಲಿ ಬಂಟವಾಳದ ಹಿರಿಯರೇ ಮುಂಚೂಣಿಯಲ್ಲಿರುತ್ತಿದ್ದರು. 1920 ರ ಬಳಿಕ ಎದ್ದ ಸ್ವಾತಂತ್ರ್ಯ ಹೋರಾಟದ ಗಾಳಿ ಬಂಟವಾಳದ ನಮ್ಮ ಹಿರಿಯರನ್ನು ಬಡಿದೆಬ್ಬಿಸಿತ್ತು. ಹೀಗಾಗಿ 1930, 1942 ಇಸವಿಗಳಲ್ಲಿ ಭಾರತೀಯ ಕಾಂಗ್ರೆಸ್ ಪಕ್ಷ ಕೊಟ್ಟ ಕರೆಗೆ ನೂರಾರು ಯುವಕರು ಜೈಲಿಗೆ ಹೋಗಿದ್ದರು. 1934 ರಲ್ಲಿ ಬಂಟವಾಳಕ್ಕೆ ಬಂದ ಮಹಾತ್ಮಾ ಗಾಂಧೀಜಿ ಬಂಟವಾಳವನ್ನು ಎರಡನೇ ಬಾರ್ದೋಲಿಯೆಂದೇ ಕರೆದರು. ಪಂಡಿತ ಜವಾಹರ ಲಾಲ ನೆಹರೂ, ಆಚಾರ್ಯ ಕೃಷ್ಣಲಾನಿ ಮುಂತಾದ ಸ್ವಾತಂತ್ರ್ಯ ಸೇನಾನಿಗಳು ಎರಡೆರಡು ಬಾರಿ ಬಂಟವಾಳಕ್ಕೆ ಬಂದು ಭಾಷಣ ಮಾಡಿ ಹೋಗಿದ್ದರು.

ಕರ್ನಾಟಕದವರೇ ಆಗಿದ್ದ ಹುಂಡಿ ವಿಷ್ಣು ಕಾಮತ್ (ಉತ್ತರ ಭಾರತೀಯರಿಗೆ ಹರಿ ವಿಷ್ಣು ಕಾಮತ್), ಉಳ್ಳಾಲ ಶ್ರೀನಿವಾಸ ಮಲ್ಯ ಅವರಲ್ಲದೇ ಹಿರಿಯಡ್ಕ ರಾಮರಾಯ ಮಲ್ಯ ಎನ್.ಎಸ್. ಕಿಲ್ಲೆ, ಕೆ.ಕೆ. ಶೆಟ್ಟಿ, ಹೆಚ್. ನರಸಿಂಗ ರಾವ್ ಮುಂತಾದವರು ಆಗಿಂದಾಗ್ಗೆ ಬಂಟವಾಳಕ್ಕೆ ಬಂದು ಭಾಷಣ ಮಾಡಿ ಹೋಗುತ್ತಿದ್ದರು. ಆದರಿಂದಾಗಿ ಗಾಂಧೀಜಿಯವರ ಪ್ರಮುಖ ಉದ್ದೇಶಗಳಾದ ಖಾದಿ ಗ್ರಾಮೋದ್ಯೋಗ ಕೇಂದ್ರ ಮತ್ತು ಹರಿಜನರ ದೇವಾಲಯ ಪ್ರವೇಶಗಳಿಗೆ ನಾಡಿನಲ್ಲಿಯೇ ಪ್ರಸಿದ್ಧಿಯನ್ನು ಪಡೆದಿತ್ತು. ಪ್ರತಿಯೊಬ್ಬರ ಮನೆಯಲ್ಲಿಯೂ ಚರಕವೊಂದಿರುತ್ತಿತ್ತು ಅದರಲ್ಲಿ ತೆಗೆದ ನೂಲಿನಿಂದ ಖಾದಿ ಕೇಂದ್ರದಲ್ಲಿ ನೇಯ್ದ 'ಖದ್ದರ'ನ್ನೇ ಶೇಕಡಾ 95 ರಷ್ಟು ಜನರು ಉಟ್ಟುಕೊಳ್ಳುವವರಾಗಿದ್ದರು.

ದ.ಕ. ಜಿಲ್ಲೆಯಲ್ಲಿಯೇ ಪ್ರಥಮವಾಗಿ ಬಂಟವಾಳದಲ್ಲಿ ಶ್ರೀ ತಿರುಮಲ ವೆಂಕಟರಮಣ ಸ್ವಾಮೀ ದೇವಾಲಯಕ್ಕೆ ಹರಿಜನರ ಪ್ರವೇಶವಾಗಿತ್ತು. ಸಾಯಂಕಾಲ, ಹರಿಜನರನ್ನು ನೇತ್ರಾವತಿ ನದಿಯಲ್ಲಿ ಮೀಯಿಸಿ, ಬಳಿಕ ಮೆರವಣಿಗೆಯಲ್ಲಿ ಪೇಟೆಗೆ ಸುತ್ತು ಹಾಕಿಸಲಾಗಿತ್ತು ಅದರ ನೇತೃತ್ವ ವಹಿಸಿದ್ದ ನನ್ನ ತಂದೆ ಶ್ರೀ ಬಸ್ತಿ ಮಾಧವ ಶೆಣೈಯವರು ಪ್ರಥಮವಾಗಿ ನಮ್ಮ ಹೋಟೆಲಿಗೇ ಹರಿಜನರ ಪ್ರವೇಶ ಮಾಡಿಸಿ, ತಿಂಡಿ ಕಾಫಿ ಚಾ ನೀಡಿ ಮುಂದೆ ಶ್ರೀ ದೇವಾಲಯ ಪ್ರವೇಶ ಮಾಡಲಾಗಿತ್ತು. ನಂತರ ಶ್ರೀ ಸೀತಾರಾಮ ದೇವಾಲಯ ಪ್ರವೇಶವೂ ಜರುಗಿತು. ಶ್ರೀ ಎನ್.ಎಸ್. ಕಿಲ್ಲೆ, ಡಾ. ಉಳ್ಳಾಲ ಪದ್ಮನಾಭ ಮಲ್ಯಾ, ಕೆ.ಕೆ. ಶೆಟ್ಟಿ ಮುಂತಾದವರು ಭಾಷಣ ಮಾಡಿ ಬಂಟವಾಳವನ್ನು ಬಾಯಿ ತುಂಬಾ ಹೊಗಳಿದ್ದರು.

ಅಲ್ಲದೇ ಆಗತಾನೇ ಸಂಘಟನೆಗೊಳ್ಳುತ್ತಿದ್ದ ಭಾರತ ಕಮ್ಯೂನಿಷ್ಟ ಪಕ್ಷಕ್ಕೂ ಬಂಟವಾಳ ಮುಖ್ಯ ಕೇಂದ್ರವೆನಿಸಿತ್ತು. ಶ್ರೀ ಎಸ್.ಎನ್.ಹೊಳ್ಳ, ಕಾಂ. ಬಿ.ವಿ. ಕಕ್ಕಿಲಾಯ, ಕಾಮ್ರೇಡ ಶಾಂತಾರಾಮ ಪೈ ಅಲ್ಲದೇ ಬಂಟವಾಳದವರೇ ಆಗಿದ್ದ ಕಾಂ. ಅಮ್ಮು ಶೆಟ್ಟಿಯವರು ಬಂದು ಬಡ್ಡಕಟ್ಟೆ ಗಾಡಿ ಗದ್ದೆಯಲ್ಲಿ ಜರುಗುವ ಅವರ ಭಾಷಣ ಕೇಳಲು ನಾನು ಹೋಗುತ್ತಿದ್ದೆ. ಬಂಡವಾಳಶಾಹಿಗಳ ವಿರುದ್ಧ 'ಬೆಂಕಿ' ಉಗುಳುತ್ತಿದ್ದ ಆ ಪ್ರಭೃತಿಗಳ ಭಾಷಣ ಕೇಳುವುದು

ವಿಶೇಷವಾದ ಒಂದು ಅನುಭವವನ್ನು ಕೊಡುತ್ತಿತ್ತು. ಗಾಂಧೀಜಿಯವರ ಸ್ವಾತಂತ್ರ್ಯ ಹೋರಾಟ ಕಾಲದ 'ಹರತಾಳ' ಪ್ರಭಾತಫೇರಿಯ ದಿನಗಳ ಬಳಿಕ ಬೀಡಿ ಕಂಪೆನಿಗಳ ಮತ್ತು ಬಂಡವಾಳ ಶಾಹಿಗಳ ವಿರುದ್ಧ ಕಾರ್ಮಿಕ ಮುಷ್ಕರ (Strikes) ಪದಬಳಕೆಗೆ ಮೊದಲಾದದ್ದು ಬಂಟವಾಳದಲ್ಲಿಯೇ ಎಂಬುದಾಗಿ ಹೇಳಿದರೆ ಅತಿಶಯೋಕ್ತಿಯಾಗಲಾರದು. ಹೀಗೆ ರಾಜಕೀಯ ಕ್ಷೇತ್ರದಲ್ಲಿಯೂ ಬಂಟವಾಳ ಹೊಸ ವಿಚಾರಗಳಿಗೆ ಸ್ಪಂದಿಸುವ ಒಂದು ಪ್ರಮುಖ ಪಟ್ಟಣವಾಗಿತ್ತು.

ಬಂಟವಾಳ ಶ್ರೀ ವೆಂಕಟರಮಣ ಸ್ವಾಮಿಗೆ ತಾಳಮದ್ದಲೆ ಮತ್ತು ಮಂಗಳೂರು 'ಕಸ್ತೂರಿ ಮೊಗ್ಗಾರೆ' ಎಂದರೆ ಪ್ರೀತಿಯೆಂದು ಪ್ರತೀತಿಯಿದೆ. ಅದಕ್ಕೆ ಉದಾಹರಣೆ ನೂರೈವತ್ತು ವರ್ಷಗಳಿಂದ ಶ್ರೀ ದೇವಾಲಯದ ಅಂಬಲಗಳಲ್ಲಿ ಪ್ರತಿ ವರುಷದ ಶ್ರಾವಣ ಮಾಸದಲ್ಲಿ ಒಂದು ತಿಂಗಳ ಕಾಲ ಅನೂಚಾನವಾಗಿ ನಡೆದುಕೊಂಡು ಬರುತ್ತಿರುವ ಶ್ರಾವಣ ಮಾಸದ ತಾಳಮದ್ದಲೆ. ಹಾಗೆಯೇ 1920 ರಲ್ಲಿ ಪ್ರಥಮವಾಗಿ ತುಳು ಭಾಷೆಯಲ್ಲಿ ತಾಳಮದ್ದಳೆ ಜರುಗಿದ್ದು ಬಂಟವಾಳದಲ್ಲಿಯೇ. ತೆಕ್ಕಟ್ಟೆ ಬಾಬಣ್ಣ ಶಾನಭಾಗ, ಎನ್.ಎಸ್. ಕಿಲ್ಲೆ ಮುಂತಾದ ಮಾತಿನ ಮಲ್ಲರು ನಿರರ್ಗಳವಾಗಿ ನುಡಿಯುತ್ತಿದ್ದ ತರ್ಕವಿತರ್ಕಗಳು ಶಬ್ದಜಾಲಗಳು ಮಾತಿನ ಮಂಟಪಗಳನ್ನೇ ನಿರ್ಮಿಸುತ್ತಿದ್ದುವೆಂದರೆ ತಪ್ಪಾಗದು. ಹಲವಾರು ತುಳು ಕೊಂಕಣಿ ಜಾನಪದಗಳಲ್ಲಿಯೂ ಬಂಟವಾಳ ಊರಿನ, ಜನಸಾಮಾನ್ಯರ ಉಲ್ಲೇಖಗಳು ಕಂಡುಬರುತ್ತಿವೆ.

1912ರಲ್ಲಿ ಬಂಟವಾಳದ ದಿವಂಗತ ಶ್ರೀ ಬೋಳಂತೂರು ಕೃಷ್ಣ ಪ್ರಭುಗಳು ಕೊಂಕಣಿಯಲ್ಲಿ ಬರೆದು ಪ್ರಕಟಿಸಿದ 'ಚಂದ್ರಹಾಸ' ನಾಟಕದ ಪದ್ಯಗಳು ರೇಡಿಯೋ, ಟಿ.ವಿ. ಮಾಧ್ಯಮಗಳಿಲ್ಲದ ಆ ದಿನಗಳಲ್ಲಿಯೂ ಕೇರಳದ ಕೊಚ್ಚಿಯಿಂದ ಉತ್ತರ ಕನ್ನಡ ಜಿಲ್ಲೆಯ ಕಾರವಾರದವರೆಗೆ ಜನರ ನಾಲಗೆಗಳಲ್ಲಿ ಜನಜನಿತವಾಗಿದ್ದವು ಎಂದರೆ ಅವುಗಳ ಅಂತಃಸತ್ವದ ಅರಿವಾಗಬಹುದು. ನಾಟಕದ 'ನಾಣ್ಣು' ಖ್ಯಾತಿಯ ಎನ್.ಆರ್. ಬಂಟವಾಳಕಾರ ಅವರು ಆಗಿನ ಕಾಲದ ಪ್ರಸಿದ್ಧ ನಟ, ಗಾಯಕ, ದಿಗ್ದರ್ಶಕರಾಗಿದ್ದು, ಡಾ. ಶಿವರಾಮ ಕಾರಂತರೊಡಗೂಡಿ ನಾಟಕ ಕಂಪೆನಿಯನ್ನು ಹುಟ್ಟು ಹಾಕಿ ಮೈಸೂರು ಪ್ರಾಂತ್ಯದಲ್ಲಿ ನಾಟಕಗಳನ್ನಾಡಿಸಿದ್ದನ್ನು, ಡಾ. ಕಾರಂತರು ತಮ್ಮ 'ಹುಚ್ಚುಮನಸ್ಸಿನ ಹತ್ತು ಮುಖಗಳು' ಪುಸ್ತಕದಲ್ಲಿ ಬರೆದಿದ್ದಾರೆ.

ಕನ್ನಡ ಕೊಂಕಣಿ ನಾಟಕಗಳನ್ನು ಬರೆದು, ದಿಗ್ದರ್ಶಿಸುತ್ತಿದ್ದವರು ಗಾಯನಗಂಧರ್ವ ಎನ್.ಆರ್. ಬಂಟವಾಳಕಾರ್. ಅವರು ರಾಗ ಸಂಯೋಜನೆ ಮಾಡಿ ಹಾಡಿದರೆಂದರೆ ಕೇಳುಗರನ್ನು ಮಂತ್ರ ಮುಗ್ಧರನ್ನಾಗಿ ಮಾಡುತ್ತಿದ್ದರು. ತಮ್ಮ ಸಂಭಾಷಣೆ, ನಟನೆಗಳಿಂದ ಶ್ರೋತೃಗಳಲ್ಲಿ ಭಾವನೆಗಳನ್ನು ಬಡಿದೆಬ್ಬಿಸುತ್ತಿದ್ದ ನಟ ಸಾಮ್ರಾಟರೂ ಬಂಟವಾಳದಲ್ಲಿ ಇದ್ದರು.

ಹಿಂದೂಸ್ಥಾನೀ ಮತ್ತು ಕರ್ನಾಟಕೀ ಸಂಗೀತ ಎರಡಕ್ಕೂ ಬಂಟವಾಳ ಹೆಸರಾಗಿತ್ತು ಮಂಗಳೂರಿಗೆ ಬರುತ್ತಿದ್ದ ರಾಷ್ಟ್ರೀಯ ಪ್ರಾಂತೀಯ ಖ್ಯಾತಿಯ ಸಂಗೀತಗಾರರು ಬಂಟವಾಳಕ್ಕೆ ಬಂದು ಸಂಗೀತ ಕಾರ್ಯಕ್ರಮಗಳನ್ನು ನೀಡದೇ ಹೋಗುತ್ತಿರಲಿಲ್ಲ. ಅದಕ್ಕೆಲ್ಲಾ ಸೂತ್ರದಾರರು ನಾಟಕದ ನಾಣ್ಣು ಅಥವಾ ಕಾಮತರು.

"ತನ್ನ ಎಳೆಯ ಪ್ರಾಯದಲ್ಲಿ ತಾನು ಹರಿಕಥೆ ಮಾಡಲು ಪ್ರಾರಂಭಿಸಿದಾಗ ತನಗೆ ಆಸರೆಕೊಟ್ಟು ಬಂಟವಾಳದಲ್ಲಿ ಮತ್ತು ಪರಿಸರದಲ್ಲಿ ತಿಂಗಳುಗಟ್ಟಲೇ ಹರಿಕಥೆ ಕಾರ್ಯಕ್ರಮಗಳನ್ನು ಮಾಡುವ ಅವಕಾಶ ಕೊಟ್ಟು ಮೇಲೆ ತಂದವರು ನಾಟಕದ ನಾಣ್ಣು ಮಾಮರವರು" ಎಂದು ಅಮೇರಿಕದಲ್ಲಿ ನೆಲೆಸಿ ಹಲವು ವರ್ಷಗಳ ಬಳಿಕ ಸ್ವದೇಶಕ್ಕೆ ಮರಳಿದ ಸಂತ ಭದ್ರಗಿರಿ ಕೇಶವದಾಸಜೀಯವರು 1977ರಲ್ಲಿ ಒಮ್ಮೆ ಬಂಟವಾಳಕ್ಕೆ ಬಂದಾಗ ಸಾರ್ವಜನಿಕ ಸಭೆಯಲ್ಲಿ ಹೇಳಿದ್ದರು. "ತಾನು ಇದೇ ನೇತ್ರಾವತಿಯಲ್ಲಿ ಮಿಂದು, ಶ್ರೀ ದೇವಳದ ಅಗ್ರಸಾಲೆಯನ್ನು ಉಂಡು ಸುತ್ತಲಿನ ಊರುಗಳಲ್ಲಿ ನಾಣ್ಣುಮಾಮರವರು ಏರ್ಪಡಿಸಿದ ಹರಿಕಥಾ ಕಾಲಕ್ಷೇಪಗಳನ್ನು ಜರುಗಿಸಿ ರಾತ್ರಿ ಇದೇ ದೇವಳದ ಅಂಬಲಗಳಲ್ಲಿ ಮಲಗಿ ಹರಿದಾಸರ ಜೀವನ ಪ್ರಾರಂಭಿಸಿದೆ" ಎಂದು ಮುಕ್ತಕಂಠದಿಂದ ಹೊಗಳಿದ್ದರು. ಅಂದರೆ ಸಾಂಸ್ಕೃತಿಕ ಕಲೆಗಳಿಗೆ, ಕಲಾಕಾರರಿಗೆ ಉದಾರ ಆಶ್ರಯ ನೀಡುತ್ತಿದ್ದವರು ಬಂಟವಾಳದ ಹಿರಿಯರು ಎಂಬುದೊಂದು ನನಗೆ ಸ್ವಾಭಿಮಾನದ ವಿಷಯ. ಇಂತಹ ಹಲವು ಕಾರ್ಯಕ್ರಮಗಳಿಗೆ ಮುಂದಾಳಾಗಿದ್ದವರು ನನ್ನ ತಂದೆ ಮೋಟಾರ ಮಾಧವ ಶೆಣೈ ಎಂದು ಪ್ರಖ್ಯಾತರಾಗಿದ್ದ ಬಸ್ತಿ ಮಾಧವ ಶೆಣೈಯವರು.

ಕಲೆ ಸಾಮಾನ್ಯ ಜನರಲ್ಲೂ ರಕ್ತಗತವಾಗಿತ್ತೆಂದು ಹೇಳಬೇಕು. ನವರಾತ್ರಿ ದಿನಗಳಲ್ಲಿ ಹಾಕುವ ಹುಲಿವೇಷದ ಕುಣಿತ ಎಷ್ಟೊಂದು ನೈಜವಾಗಿತ್ತೆಂದರೆ, ಹುಲಿಗಳ ಚಲನವಲನಗಳ ಎಲ್ಲಾ ಗತ್ತುಗಳನ್ನು ಹುಲಿವೇಷ ಹಾಕುವವರು ತಮ್ಮ ಕುಣಿತಗಳಲ್ಲಿ ಕಾಣಿಸುತ್ತಿದ್ದರು. ಅವರ ಪೈಕಿ ಬಂಟವಾಳದ ಬಾಬು (ಕೆಪ್ಪ ಬಾಬು) ಎಂಬ ಹುಲಿವೇಷಧಾರಿಗೆ ಮಂಗಳೂರಿನ ರಥಬೀದಿಯ ವೆಂಕಟರಮಣ ಸ್ವಾಮಿ ದೇವಾಲಯದ ಶ್ರೀ ಶಾರದಾ ದೇವಿಯ ವಿಗ್ರಹದ ಮೆರವಣಿಗೆಯ ಸ್ಪರ್ಧೆಗಳಲ್ಲಿ 'ಶಾರದಾ ಹುಲಿ' ಬಂಗಾರದ ಪದಕ ಸಿಗುತ್ತಿತ್ತು. ಈಗ ಅಂತಹ ಮೈಮುರಿದು ನರ್ತಿಸುವ ಹುಲಿವೇಷಗಳಿಲ್ಲ. ಈಗ ಏನಿದ್ದರೂ ಅದರ ಪಳೆಯುಳಿಕೆ ಮಾತ್ರ.

ಬಂಟವಾಳದ ನಮ್ಮ ಹಿರಿಯರು ಆಧುನಿಕ ಶಿಕ್ಷಣದ ಗಾಳಿ ದೇಶದೆಲ್ಲೆಡೆ ಬೀಸುತ್ತಿದ್ದಾಗ, ಅದಾಗಲೇ ಬಂಟವಾಳದಲ್ಲಿ ಬಾಸೆಲ್ ಮಿಶಿನನವರು ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಿ, ಬಳಿಕ ಕಾರಣಾಂತರಗಳಿಂದ ಮುಂದೆ ನಡೆಸಲು ಸಾಧ್ಯವಾಗದ ಕಾಲದಲ್ಲಿ ಶಾಲೆಯನ್ನು ಮುಚ್ಚಿದಾಗ, 1892ರಲ್ಲಿ ಬಂಟವಾಳದ ಶ್ರೀ ತಿರುಮಲ ವೆಂಕಟರಮಣ ಸ್ವಾಮೀ ದೇವಳದ ಭಂಡಾರದಿಂದ ಅದನ್ನು ಮುನ್ನಡೆಸಿದವರು ನಮ್ಮ ಬಂಟವಾಳದ ಹಿರಿಯರು. ಅದೇ ವರ್ಷ ಮಂಗಳೂರಿನಲ್ಲಿ ಹಿರಿಯ ವಕೀಲರಾಗಿದ್ದ

ಸಾಮಾಜಿಕ ಮುಂದಾಳು ಶ್ರೀ ಅಮ್ಮೆಂಬಳ ಸುಬ್ಬರಾವ್ ಪೈಗಳು ಕೆನರಾ ಹೈಸ್ಕೂಲನ್ನು ಸ್ಥಾಪಿಸಿ, 1894 ರಲ್ಲಿ ಕೆನರಾ ಹೆಣ್ಣು ಮಕ್ಕಳ ಶಾಲೆಯನ್ನು ಪ್ರಾರಂಭಿಸಿ, ಮಹಿಳೆಯರ ಶಿಕ್ಷಣಕ್ಕೆ ಜಿಲ್ಲೆಯಲ್ಲಿ ನಾಂದಿ ಹಾಡಿದ್ದರು.

ಮುಂದೆ ನವ ಶಿಕ್ಷಣದ ಆಗತ್ಯ ಕಂಡ ಬಂಟವಾಳ ಶ್ರೀ ದೇವಳದ ಆಡಳ್ತ ಮೊಕ್ತೇಸರ ಶ್ರೀ ಬಾಬಾ ಕಾಂಮ್ತಿಯವರು 1932 ಬಂಟವಾಳದಲ್ಲಿ ಶ್ರೀ ದೇವಳದ ವತಿಯಿಂದಲೇ ಶ್ರೀ ವೆಂಕಟರಮಣ ಸ್ವಾಮಿ ಹೈಸ್ಕೂಲನ್ನು ಪ್ರಾರಂಭಿಸುವ ದಿಟ್ಟ ಹೆಜ್ಜೆಯನ್ನಿಟ್ಟರು. ಇದರಿಂದಾಗಿ ಬಂಟವಾಳ ಮತ್ತು ಸುತ್ತಲಿನ ಪುತ್ತೂರು, ಬೆಳ್ತಂಗಡಿ ತಾಲೂಕುಗಳ ವಿದ್ಯಾಕಾಂಕ್ಷಿ ಬಾಲಕ ಬಾಲಕಿಯರು ಇಲ್ಲಿಗೆ ಬಂದು ಶಿಕ್ಷಣ ಪಡೆದು ಮುಂದೆ ತಮ್ಮ ಜೀವನವನ್ನು ಬೆಳಗಿಸಿದರು.

ಹೀಗೆ ನನ್ನ ಊರು ಬಂಟವಾಳ ಪೇಟೆ ವ್ಯಾಪಾರ ವಹಿವಾಟುಗಳ ಮಾರುಕಟ್ಟೆಗಳಿಂದಾಗಿ, ಶ್ರೀಮಂತಿಕೆ ಯಿಂದಾಗಿ, ಶೈಕ್ಷಣಿಕ, ಸಾಂಸ್ಕೃತಿಕ, ರಾಜಕೀಯ ಕ್ಷೇತ್ರಗಳಿಗೆ ಸಮೃದ್ಧ ನೆಲೆಯಾಗಿ ಬೆಳೆದು ಬಂದದ್ದು ವಿಶೇಷವೇನೂ ಆಗಿರಲಿಲ್ಲ. ಅಂತಹ ವಾತಾವರಣದಲ್ಲಿ ಬೆಳೆದ ಪೇಟೆಯ ಜನರು ಜಾತಿ ಮತ ಧರ್ಮಗಳ ಬೇಧವಿಲ್ಲದೇ ಸಹಬಾಳ್ವೆಯ ಶಾಂತಿಯುತ ವಾತಾವರಣದಲ್ಲಿ ಜೀವಿಸುತ್ತಿದ್ದರು.

ಬಸ್ತಿ ಮಾಧವ ಶೆಣೈ

ನನ್ನ ತಂದೆ ಬಸ್ತಿ ಮಾಧವ ಶೆಣೈಯವರದ್ದು (ಮೋಟಾರ ಮಾಧವ ಶೆಣೈ) ಭವ್ಯ, ಉದಾರ ದೃಷ್ಟಿಯ, ಧೈರ್ಯ ಸ್ಥೈರ್ಯಗಳಿಗೆ, ಮಾನವೀಯ ಸಂಬಂಧಗಳಿಗೆ, ಆದರ್ಶವೆನಿಸುವಂತಹ ಒಂದು ಉನ್ನತ ಜೀವನ. ಅವರಿಗೆ ಎರಡನೇಯ ದರ್ಜೆಯೆನ್ನಿಸುವ ಯಾವುದೇ ವಿಚಾರಗಳಿರಲಿಲ್ಲ. ಅದನ್ನು ಅವರು ಸಹಿಸುತ್ತಲೂ ಇರಲಿಲ್ಲ. ಎಲ್ಲವೂ ಸ್ವಚ್ಛ ತಾನು ತೊಡುವ ಬಿಳಿ ಖಾದಿ ಜುಬ್ಬಾ, ಗಂಜಿ ಫ್ರಾಕ್, ಮುಂಡು, ಹೆಗಲ ಮೇಲೆ ಯಾವಾಗಲೂ ಇರುತ್ತಿದ್ದ ಶಾಲು (ಬೈರಾಸು), ಎಲ್ಲವೂ ಅವರೇ ಸಾಬೂನು ಹಾಕಿ ತೊಳೆಯುತ್ತಿದ್ದುದ್ದು, ನನ್ನ ಬಟ್ಟೇನೂ ಅವರೇ ತೊಳೆದಿಡುತ್ತಿದ್ದರು.

ಅವರದು ಭೀಮಗಾತ್ರ. ತುಂಬಾ ಅಗಲವಾದ ಎದೆ, ಅದಕ್ಕೆ ಸರಿಯಾಗಿ ಎದ್ದುತೋರುವ ದೊಡ್ಡ ಹೊಟ್ಟೆ. ಕೈ ಕಾಲುಗಳು ಕಂಭಗಳ ಹಾಗೆ ಸುಪುಷ್ಟ. ಎಂತಹ ಧೈರ್ಯಶಾಲಿಯೂ ಪುಂಡ ಪೋಕರಿಗಳೂ ಅವರೆದುರು ತಲೆತಗ್ಗಿಸುವಂತಹ ಒಂದು ಭವ್ಯ ವ್ಯಕ್ತಿತ್ವ ಅವರದ್ದು. ಊರಿನ ಯಾವುದೇ ಕಲಹಗಳು, ವೈರತ್ವಗಳೂ ಅವರಿಂದಾಗಿ ಶಾಂತವಾಗಿ ಮುಗಿದುಬಿಡುತ್ತಿದ್ದವು.

ಮಹಾತ್ಮಾ ಗಾಂಧೀಜಿಯವರ ಅನುಯಾಯಿಯಾಗಿದ್ದ ನನ್ನ ತಂದೆ ಸ್ವಾತಂತ್ರ್ಯ ಹೋರಾಟಕ್ಕೆ ಆಗಿನ ಕಾಲದ ಯುವಕರನ್ನು ಹುರಿದುಂಬಿಸಿ ಜೈಲುವಾಸಕ್ಕೂ ಮುನ್ನುಗ್ಗುವಂತೆ ಮಾಡುತ್ತಿದ್ದರು. ಖಾದಿ, ಹರಿಜನ ಉದ್ಧಾರ ಅವರ ಮೆಚ್ಚಿನ ವಿಷಯಗಳು ಅವರ

ಮುಂದಾಳ್ತನದಲ್ಲಿಯೇ ಜಿಲ್ಲೆಯಲ್ಲಿ ಪ್ರಥಮವಾಗಿ ಬಂಟವಾಳದಲ್ಲಿ ಹರಿಜನರಿಗೆ ಹೋಟೆಲ ಪ್ರವೇಶ (ನಮ್ಮದೇ ಹೋಟೆಲಿನಲ್ಲಿ) ಶ್ರೀ ವೆಂಕಟರಮಣ ದೇವಾಲಯದಲ್ಲಿ ಪ್ರವೇಶ ಸಿಗುವಂತಾಗಿತ್ತು. ಅವರು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಸದಸ್ಯರಾಗಿದ್ದರು. ಬಂಟವಾಳದ ಖಾದಿ ಕೇಂದ್ರ (ಮಗ್ಗದ ಕಾರ್ಖಾನೆ) ಆಗಿನ ಕಾಲದಲ್ಲಿ ಪ್ರಸಿದ್ಧವಾಗಿತ್ತು. ಮೇಲ್‌ಜಾತಿಯುವರನ್ನು ಕೆಳಜಾತಿಯುವರನ್ನೂ ಅಥವಾ ಕ್ರೈಸ್ತ ಮುಸಲ್ಮಾನ ಸಮಾಜದವರನ್ನೂ ತನ್ನವರೇ ಎಂದು ತಿಳಿಯುತ್ತಿದ್ದ ಅವರು ಎಲ್ಲ ಸಮಾಜದವರಿಂದ ಮರ್ಯಾದೆ ಪಡೆಯುತ್ತಿದ್ದರು. ಎಷ್ಟೋ ಬಾರಿ ಬಂಟವಾಳ ಕೆಳಗಿನ ಪೇಟೆಯ ಮುಸ್ಲಿಂರ ಮದುವೆ ಸಮಾರಂಭಗಳಿಗೆ, ನಾನು ಬಾಲಕನಾಗಿದ್ದಾಗ, ಅವರೊಟ್ಟಿಗೆ ನನ್ನನ್ನೂ ಕರೆದುಕೊಂಡು ಹೋಗುತ್ತಿದ್ದರು.

ಅವರೊಟ್ಟಿಗೆ ಬಂಟವಾಳದ ಆ ಕಾಲದ ಯುವಕರು ಅವರ ತಂಡದಲ್ಲಿದ್ದು, ಅವರ ನೇತೃತ್ವದಲ್ಲಿ ಶ್ರೀ ದೇವಳದ ಮತ್ತು ಊರಿನ ಎಲ್ಲಾ ಕೆಲಸ ಕಾರ್ಯಗಳಲ್ಲಿ ಸ್ವಯಂ ಸೇವಕರಾಗಿ ದುಡಿಯಲು ಹೆಮ್ಮೆ ಪಡುತ್ತಿದ್ದರು. ಕುಡಿತದ ಚಟ ಇರುವವರನ್ನು, ಹೆಂಗಸರ ಚಾಳಿ ಇರುವವರನ್ನು ಅವರು ಸಹಿಸುತ್ತಿರಲಿಲ್ಲ. ಶ್ರೀ ದೇವಳದ ಎಲ್ಲಾ ಆಗುಹೋಗುಗಳು ಅವರ ಆದೇಶದಿಂದಲೇ ನಡೆದುಹೋಗುವುದಿದ್ದರೂ ಬಂಟವಾಳ ರಥೋತ್ಸವದ ದಿನಗಳಲ್ಲಿ ಅವರು ದೇವಳ ಹೊರಗಿನ "ಲ್ಯಾಟಾಚೆ ಕೂಡ" (Petromax Room) ನಲ್ಲಿದ್ದು ಅಲ್ಲಿಂದಲೇ ದೇವಳದ ಒಳಗೆ ಮತ್ತು ಹೊರಗಿನ ಆಗುಹೋಗುಗಳನ್ನು ನಿಯಂತ್ರಿಸುತ್ತಿದ್ದರು. ಅವರಲ್ಲಿದ್ದಾಗ ಯಾವ ಗೊಂದಲ ಜಗಳಗಳೂ ಇರುತ್ತಿರಲಿಲ್ಲ. ಅಂತಹ ಒಬ್ಬ ಅನಭಿಷಕ್ತ ದೊರೆಯಾಗಿದ್ದರು ಅವರು. 1924ರಲ್ಲಿ ಸ್ಥಾಪಿತವಾದ ಸಿ.ಪಿ.ಸಿ. ಮೋಟಾರ ಕಂಪೆನಿ ಪ್ರಥಮವಾಗಿ ಮಂಗಳೂರು ಬಂಟವಾಳ ರಸ್ತೆಯಲ್ಲಿ ಬಸ್ಸು ಹೊರಡಿಸಿದಾಗ ಅವರು ಪ್ರಥಮ ಬಸ್ ಎಜೆಂಟರಾಗಿ ನೇಮಕವಾಗಿದ್ದರು. ಅವರ ಕೊನೆಯುಸಿರಿನ ತನಕವೂ ಕಂಪೆನಿಯ ಜನವಾಗಿಯೇ ಇದ್ದರು.

ನಾನು ಸಣ್ಣವನಿದ್ದಾಗ 1944ರಲ್ಲಿ ತಂದೆಯವರು, ಅವರ ಭಾವನೆಂಟ ಗುರುಪುರ ಸರ್ವೋತ್ತಮ ಪ್ರಭುಗಳವರ ಪಾಲುದಾರಿಕೆಯಲ್ಲಿ 'ಮೋಡರ್ನ್ ಕಾಫಿ ಹೌಸ್' ಎಂಬ ಹೋಟೆಲನ್ನು ಪ್ರಾರಂಭ ಮಾಡಿದರು. ಮಂಗಳೂರಿನಿಂದ ಶ್ರೀ ರಾಮಕೃಷ್ಣಾಶ್ರಮದ ಆಗಿನ ಸ್ವಾಮಿಗಳು ಆಗಮಿಸಿ, ದೀಪ ಬೆಳಗಿಸಿ ಉದ್ಘಾಟನೆ ಮಾಡಿದ್ದರು ಮತ್ತು ಖ್ಯಾತ ಉಪಾಧ್ಯಾಯರಾಗಿದ್ದ ಬಂಟವಾಳ ಅಚ್ಚುತ ಬಾಳಿಗಾ (ಗಾಂಧೀವಾದಿ) ಎಂಬ ಹಿರಿಯರು ಅಂದು ಉಪಸ್ಥಿತರಿದ್ದರೆಂಬ ನೆನಪು ನನಗೆ ಇದೆ. ಆ ಕಾಲದಲ್ಲಿ ಉತ್ತಮ ಕಾಫಿ ತಿಂಡಿಗಳಿಗೆ 'ಮೋಡರ್ನ್ ಕೆಫೆ' ಜಿಲ್ಲೆಯಾದ್ಯಂತ ತುಂಬಾ ಹೆಸರುವಾಸಿಯಾಗಿತ್ತು. ನನ್ನ ತಂದೆಯವರೇ ಬಸ್ಸ್ ಏಜೆಂಟರಾಗಿದ್ದರಿಂದ ಮಂಗಳೂರು ಮತ್ತು ಕಡೂರು ಚಾರ್ಮಾಡಿಗಳಿಂದ ಬಂದು ಹೋಗುತ್ತಿದ್ದ ಬಸ್ಸುಗಳು ಅಲ್ಲಿ ನಿಂತು ಪ್ರಯಾಣಿಕರು ಇಳಿದು ಹೋಟೆಲಿನಲ್ಲಿ ಕಾಫಿ ತಿಂಡಿ ಮುಗಿಸಿ ಹೋಗುವುದು ಸಾಮಾನ್ಯವಾಗಿತ್ತು. ನಾನು 8-9 ಕ್ಲಾಸಿಗೆ ಹೋಗುತ್ತಿರುವಾಗ ರಜೆಯಲ್ಲಿ ಗಲ್ಲದಲ್ಲಿ (Cashier) ಆಗಿ ಕೂತುಕೊಳ್ಳುತ್ತಿದ್ದೆ.

ಆ ದಿನಗಳಲ್ಲಿ ನಮ್ಮ ಊರಿನಲ್ಲಿ ಒಬ್ಬ ಜಮೀನುದಾರರ ಮನೆಯಲ್ಲಿ ಮಾತ್ರ ಒಂದು ಹಳೇಯ ರೇಡಿಯೊ ಇತ್ತು. ಅಲ್ಲಿ ಮೇಲಂತಸ್ತಿನವರಿಗೆ ಮಾತ್ರ ಶ್ರವಣ ಭಾಗ್ಯ. ಬಾಕಿ ಸಾಮಾನ್ಯರು ಅವರ ಮನೆಯ ಹೊರಗಿನಿಂದ ನಿಂತು ಒಳಗೆ ಇಣುಕಲಷ್ಟೇ ಭಾಗ್ಯವಂತರು. ಆಗ ನಮ್ಮ ಹೋಟೆಲಿನಲ್ಲಿ ಭರಾಟೆಯ ವ್ಯಾಪಾರವಿದ್ದರಿಂದ ನನ್ನ ತಂದೆಯವರು Zenith Radio (American) ಒಂದನ್ನು ಮುಂಬಯಿಗೆ ಹೋಗಿ ಆಗ ಬಹುಶಃ ರೂ. 200/- ಕೊಟ್ಟು ತಂದಿದ್ದರು. ದೊಡ್ಡ ಗಾತ್ರದ ರೇಡಿಯೋ ಅದು. ಆಗಿನ ಕಾಲದಲ್ಲಿ ರೇಡಿಯೋ ಎಂಬುದೇ ಆತ್ಯಾಕರ್ಷಕ ವಿಷಯ. ರೇಡಿಯೋ ತಂದ ರಾತ್ರಿ (ಗಂ. 8.00ಕ್ಕೆ ಇರಬೇಕು) ಅದನ್ನು ಪ್ರಥಮವಾಗಿ ಚಾಲನೆ ಮಾಡಿದಾಗ ಹರ್ಷದ ಹೊನಲು ಹರಿದಿತ್ತು. ಬಹುಶಃ ರಥೋತ್ಸವದ ಸಮಯದಲ್ಲಿ ಸೇರುವಷ್ಟು ಜನರು ಸುತ್ತಮುತ್ತಲಿನಿಂದ ಬಂದು ಸೇರಿದ್ದರು. ಆಗಿನ ಕಾಲದಲ್ಲಿ ಅದೊಂದು ಬಹು ದೊಡ್ಡ ಕೌತುಕದ ವಿಷಯವಾಗಿತ್ತು. ಹೊನಪ್ಪ ಭಾಗವತರ್, ಸುಬ್ಬುಲಕ್ಷ್ಮೀ, ನೂರಜಹಾನ, ಸೈಗಲ ಪಂಕಜಮಲಿಕ, ಅಶಿತ ಬರಾನ್ ಮುಂತಾದ ಸಿನೇಮಾರಂಗದ ನಕ್ಷತ್ರಗಳ ಹಾಡುಗಳನ್ನು ಕೇಳುವುದು ದೊಡ್ಡ ಭಾಗ್ಯವೆಂದು ತಿಳಿಯುತ್ತಿದ್ದ ಕಾಲ ಅದು.

ಅದರಲ್ಲೂ 1947 ಆಗೋಸ್ಟ್ 15 ರಂದು ಪ್ರಧಾನಮಂತ್ರಿ ಪಂ. ಜವಾಹರಲಾಲ ನೆಹರೂ ಅವರ Tryst with destiny ಭಾಷಣ, 1948 ಜನವರಿ 30 ರಂದು ಭಾರತ ಪಿತ ಮಹಾತ್ಮ ಗಾಂಧೀಜಿಯವರ ಮರಣದ ವಾರ್ತೆಸಾರುವ ಮತ್ತು ಮರುದಿನ ಮಧ್ಯಾಹ್ನದಿಂದ ಮಹಾತ್ಮರ ಶವಶರೀರದ ಮೆರವಣಿಗೆಯನ್ನು ತನ್ನ ಅಮೋಘಕಂಠದಿಂದ Commentary ಕೊಡುತ್ತಿದ್ದ ಮೆಲ್ವಿನ ಡಿ'ಮೆಲ್ಲೊರವರ ಚಿನ್ನದ ಸ್ವರ, ಕೇಳುಗರ ಕಿವಿಗೆ ಅಮೃತವನ್ನು ಸುರಿದಂತಾಗುತ್ತಿತ್ತು. ಹೃದಯದಿಂದ ಭಾವನೆಗಳು ಉಮ್ಮಳಿಸಿ ಕಣ್ಣಲ್ಲಿ ನೀರು ತರುತ್ತಿತ್ತು. ಬಳಿಕ ಭಾರತದಲ್ಲೆಲ್ಲಾ 1952 ಜರುಗಿದ ಪ್ರಥಮ ಚುನಾವಣೆಯ ಫಲಿತಾಂಶಗಳನ್ನು ತಿಳಿದುಕೊಳ್ಳಲು ಸಾವಿರಾರು ಜನರು ನಮ್ಮಲ್ಲಿ ಆಕಾಶವಾಣಿ ಆಲಿಸಲು ಬಂದು ಸೇರುತ್ತಿದ್ದುದು ನನ್ನ ಕಣ್ಣುಗಳ ಮುಂದೆ ನಿನ್ನೆ ನಡೆದ ಘಟನೆಗಳೇ ಎನ್ನುವಷ್ಟು ಈಗಲೂ ಮೂಡಿಬರುತ್ತಿದೆ.

ಬೆಳಿಗ್ಗೆ ಗಂ. 5.00 ಕ್ಕೆ ತಂದೆಯವರು ಎದ್ದು ಬಸ್ ಆಫೀಸಿಗೆ ಹೋಗುವುದು ರೂಢಿಯಾಗಿತ್ತು. ಅವರ ಕೈಯಲ್ಲಿ ಒಂದು ಉದ್ದದ 'ಎವರೆಡಿ' ಟಾರ್ಚ್ ಅಥವಾ ಒಂದು ಲಾಟಾನು ಇರುವುದು ಸಾಮಾನ್ಯವಾಗಿತ್ತು. ಅವರ ದೇಹದ ಭಾರವನ್ನು ಹೊತ್ತ ಕಾಲಿನ ಮೆಟ್ಟುಗಳನ್ನು (ಸ್ಪೆಷಲ್ ಆಗಿ ಆಗಿನ ಕಾಲದಲ್ಲಿ ಸಾಮಾನ್ಯವಾಗಿದ್ದಂತೆ ದಪ್ಪ ಮತ್ತು ಎತ್ತರದ ಚರ್ಮದಿಂದಲೇ ಹೊಲಿದವು) ಕಾಲಿಗಿಕ್ಕಿ ನಡೆಯುತ್ತಿರುವಾಗ 'ಚೊರ್ ಚೊರ್' ಎಂಬ ಶಬ್ದ ದೂರದಿಂದಲೇ ಅವರು ಬರುವ ಸೂಚನೆ ಕೊಡುತ್ತಿದ್ದವು. ಎಂತಹ ಮಧ್ಯರಾತ್ರಿಯ ಕತ್ತಲಲ್ಲೂ ಎಲ್ಲಿಗೆ ಹೋಗುವಾಗಲೂ ಭೂತ ಪ್ರೇತಗಳ ಬಗ್ಗೆ ಹಿಂಸಾಮೃಗಗಳ ಬಗ್ಗೆ ಅಥವಾ ಕಳ್ಳ ಕಾಕರು ಗೂಂಡಾಗಳ ಬಗ್ಗೆ ಅವರಿಗೆ ಹೆದರಿಕೆಯೆಂಬುದೇ ಇರಲಿಲ್ಲ. ಅವರು ಧೈರ್ಯಕ್ಕೆ ಇನ್ನೊಂದು ಅನ್ವರ್ಥನಾಮರಾಗಿದ್ದರು.

ಎಂತಹ ಕಷ್ಟಗಳಿಗೂ ಹೆದರದ, ಸರಕಾರದ ದೊಡ್ಡ ಪದವಿಯಲ್ಲಿರುವವರ ಅಥವಾ ಶ್ರೀಮಂತರೆನ್ನಿಸುವವರ ಬೆದರಿಕೆಗಳಿಗೆ ಬಗ್ಗದ ಮನೋಧರ್ಮವುಳ್ಳವರಾಗಿದ್ದರು. ನ್ಯಾಯಕ್ಕಾಗಿ ಹೋರಾಡುವ ಎದೆಗಾರಿಕೆ ಅವರಲ್ಲಿತ್ತು. ಸತ್ಯ ಧರ್ಮಗಳ ದಾರಿಯಲ್ಲಿ ಮುನ್ನಡೆಯುವ ಮತ್ತು ಇತರರನ್ನೂ ಮುನ್ನಡೆಸುವ ಛಾತಿ ಅವರಲ್ಲಿತ್ತು. ಹಾಗಾಗಿಯೇ ಊರ ಪರಊರುಗಳ ಬಡವ ಬಲ್ಲಿದರ ದೃಷ್ಟಿಯಲ್ಲಿ ಎತ್ತರದ ವ್ಯಕ್ತಿತ್ವವನ್ನು ಅವರು ಗಳಿಸಿಕೊಂಡಿದ್ದರು. ನಾನು ಸಣ್ಣವನಾಗಿದ್ದಾಗಿನಿಂದ ಅವರ ನೇರ ನಡೆ ನುಡಿಗಳನ್ನು ತಿಳಿದುಕೊಂಡಿದ್ದ ನನಗೆ ಅವರ ಧಿಃಶಕ್ತಿ ಬಗ್ಗೆ ಅಪಾರ ಗೌರವ. ಈಗಲೂ ಅದುವೇ ನನ್ನನ್ನು ಮುನ್ನಡೆಸುತ್ತಲಿದೆ ಎಂದರೆ ತಪ್ಪಾಗದು. ಅವರ ಧೈರ್ಯ ಸ್ಥೈರ್ಯಗಳ ಬಗ್ಗೆ ಜಿಲ್ಲೆಯಲ್ಲಿ ಆ ಕಾಲದಲ್ಲಿ ಅವರು ಒಂದು ದಂತಕತೆಯಾಗಿದ್ದರು.

1923 ರಲ್ಲಿ ನೇತ್ರಾವತಿ ನದಿಯಲ್ಲಿ ದೊಡ್ಡ ನೆರೆ ಬಂದಾಗ ನನ್ನ ತಂದೆಯವರು ಅವರ ಸಂಗಾತಿಗಳೊಂದಿಗೆ ಕೆಳಗಿನ ಸ್ತರದಲ್ಲಿದ್ದವರನ್ನು ಲೋರೆಟ್ಟೊಪದವು, ಪೊನ್ನಂಗಿಲ ಚರ್ಚ್ ಕಡೆ ಅಂದರೆ ಸುರಕ್ಷಿತ ಜಾಗಗಳಿಗೆ ಸಾಗಿಸುವ ಕೆಲಸ ಮಾಡಿದ್ದರಂತೆ. ಅಂತೆಯೇ ಹೊಳೆಯಲ್ಲಿ ತೇಲಿ ಬಂದ ಪಾತ್ರೆ ಪಗಡಿಗಳನ್ನು ಸಂಗ್ರಹಿಸಿ ನೆರೆ ಇಳಿದ ಬಳಿಕ ಅವುಗಳ ವಾರಸುದಾರರ ಕೈಗೊಪ್ಪಿಸಿದ್ದನ್ನು ಜನರು ಆಡಿಕೊಳ್ಳುತ್ತಿದ್ದರು.

ಆಗಿನ ಕಾಲದಲ್ಲಿ ಮೋಟಾರು ಅಥವಾ ಕಾರುಗಳನ್ನು ಬಿಡುವ ಡ್ರೈವಿಂಗ್ ಲೈಸನ್ಸ್ ಇದ್ದವರು ಅತೀ ಕಡಿಮೆ ಸಂಖ್ಯೆಯಲ್ಲಿದ್ದರು. ನನ್ನ ತಂದೆಯವರಿಗೆ ಡ್ರೈವಿಂಗ್ ಲೈಸನ್ಸ್ ಇತ್ತು. ಹೀಗಾಗಿ ಬಂಟವಾಳದಲ್ಲಿ ಪ್ರತೀ ವರುಷ ಮಳೆಗಾಲದಲ್ಲಿ ಹರಕೆ ಹೊತ್ತಂತೆ ಬರುತ್ತಿದ್ದ ನೆರೆಯ ದಿನಗಳಲ್ಲಿ ತಗ್ಗು ಜಾಗಗಳಲ್ಲಿ ನೆಲೆಸುತ್ತಿದ್ದ ಜನರನ್ನು, ಅಲ್ಲದೇ ಬಸ್ಸುಗಳಲ್ಲಿ ಮಣಿಹಳ್ಳ ಜಕ್ರಿಬೆಟ್ಟುಗಳವರೇಗೆ ಬಂದು ಸಿಕ್ಕಿಹಾಕಿಕೊಂಡ ಪ್ರಯಾಣಿಕರನ್ನು ಬಸ್ಸಿನಲ್ಲಿ ಪೇಟೆಗೆ ಕರಕೊಂಡು ಬಂದು ಅವರಿಗೆ ಉಳಕೊಳ್ಳುವುದಕ್ಕೆ ಸಿ.ಪಿ.ಸಿ ಆಫೀಸಿನ ಮಾಳಿಗೆಯಲ್ಲಿ ವ್ಯವಸ್ಥೆ ಮಾಡುವುದಕ್ಕೆ ಅವರೇ ಬಸ್ಸು ಚಾಲಕರಾಗಿ ಹೋಗುತ್ತಿದ್ದರು.

ಆ ಕಾಲದಲ್ಲಿ ಧರ್ಮಸ್ಥಳವನ್ನು ನಮ್ಮ ಹಿರಿಯರು (ಕೊಂಕಣಿಗಳು) ಹೆಸರೆತ್ತಿ ಹೇಳುತ್ತಿರಲಿಲ್ಲ. 'ವ್ಹಳಕಡೆ' ಅಂದರೆ ದೊಡ್ಡಕಡೆ ಎಂದೇ ಕರೆಯುವ ವಾಡಿಕೆ. ಅಷ್ಟು ಭಕ್ತಿ ಮತ್ತು ಭಾವನೆ. ಶ್ರೀ ಕ್ಷೇತ್ರದ ಲಕ್ಷದೀಪೋತ್ಸವಕ್ಕೆ ನಮ್ಮ ತಂದೆಯವರು ಸಿ.ಪಿ.ಸಿ. ಮತ್ತು ಇತರ ಕಂಬೈಂಡ ಬುಕ್ಕಿಂಗ್ ಏಜನ್ಸಿಯ (ಸಹ ಕಂಪೆನಿಗಳ) ಬಸ್ಸುಗಳ ಮೇಲ್ವಿಚಾರಕರಾಗಿ ಹೋಗಿಬರುವ ಕ್ರಮವಿತ್ತು. ಆ ಕಾಲದಲ್ಲಿ ಲಕ್ಷದೀಪೋತ್ಸವಕ್ಕೆ ಬಂಟವಾಳದಿಂದ ಕಮ್ಮಿಯಲ್ಲಿ 50 ಬಸ್ಸು ಟ್ರಿಪ್‌ಗಳಲ್ಲಿ ಆಸುಪಾಸಿನ (ಬಂಟವಾಳ ತಾಲೂಕಿನ) ಭಕ್ತಾದಿಗಳು ಬಂಟವಾಳಕ್ಕೆ ಬಂದು ಧರ್ಮಸ್ಥಳ ಸ್ಪೆಷಲ್ ಬಸ್ಸುಗಳಲ್ಲಿ ಹೋಗಿ ಬರುತ್ತಿದ್ದರು. ಅಲ್ಲದೇ ಅಲ್ಲಿ ಗೌಡ ಸಾರಸ್ವತರಿಗೆ ಪ್ರತ್ಯೇಕ ಛತ್ರದ ವ್ಯವಸ್ಥೆ ಮಾಡಬಹುದಾಗಿತ್ತು. ಅದರ ಮುತುವರ್ಜಿಯೂ ನನ್ನ

ತಂದೆಯವರದ್ದೇ. ಶ್ರೀ ದೇವಳದಿಂದ ಅಗತ್ಯವಾದ ಬೇಳೆ ಧಾನ್ಯ ತೆಂಗಿನೆಣ್ಣೆ, ತರಕಾರಿ ಸರಬರಾಜು ಆಗುತ್ತಿತ್ತು.

ಮುಂದೆ ನಾನು 13-14 ವರ್ಷದವನಾಗಿದ್ದಾಗಿನಿಂದ ನನಗೆ ನೆನಪಿನಲ್ಲಿದ್ದಂತೆ ಪ್ರತೀ ವರ್ಷ ಶ್ರೀ ಕ್ಷೇತ್ರದಲ್ಲಿ ಲಕ್ಷದೀಪೋತ್ಸವ ಸಮಯದಲ್ಲಿ ಶ್ರೀ ಯಶವಂತ ವ್ಯಾಯಾಮ ಶಾಲೆಯ ತಂಡದಿಂದ ವ್ಯಾಯಾಮ ಪ್ರದರ್ಶನ, ಮಲ್ಲಕಂಭ ಯೋಗಾಸನಗಳು ಪ್ರದರ್ಶನವೇರ್ಪಡಿಸಲಾಗುತ್ತಿತ್ತು. ಆಗಿನ ಧರ್ಮಾಧಿಕಾರಿ, ಮಹಾನ್ ತಪಸ್ವಿ ಶ್ರೀ ಮಂಜಯ್ಯ ಹೆಗ್ಗಡೆಯವರು ಶ್ರೀ ಯಶವಂತ ವ್ಯಾಯಾಮ ಶಾಲೆ ಬಗ್ಗೆ ವಿಶೇಷ ಮಮಕಾರ ಹೊಂದಿದ್ದರು. 1950 - 52 ರಲ್ಲಿ ಶ್ರೀ ಯಶವಂತ ವ್ಯಾಯಾಮ ಶಾಲೆಯ ಹೊಸ ಕಟ್ಟಡ ಕಟ್ಟುವಾಗ ಬೇಕಾಗಿದ್ದ ಎಲ್ಲಾ ಮರ ಮಟ್ಟುಗಳನ್ನು ಶ್ರೀ ಮಂಜಯ್ಯ ಹೆಗ್ಗಡೆಯವರು ಉದಾರವಾಗಿ ಕೊಟ್ಟಿದ್ದರು ಎಂದು ಹಿರಿಯರು ಹೇಳುತ್ತಿದ್ದರು.

ಆಗಿನ ಕಾಲದಲ್ಲಿ ಬಂಟವಾಳ ಶ್ರೀ ಕಾಶೀಮಠದಲ್ಲಿ ಮೊಕ್ಕಾಂ ಮಾಡಲು ಬಿಜಯಂಗೈಯುತ್ತಿದ್ದ ಗುರುಗಳನ್ನು ಕಾರಿನಲ್ಲಿ ಬಂಟವಾಳಕ್ಕೆ ಕರೆದುಕೊಂಡು ಬಂದು ನಂತರ ಇಲ್ಲಿಂದ ಹೊರಡುವಾಗ ಮುಂದಿನ ಮೊಕ್ಕಾಮಿಗೆ ಕಾರಿನಲ್ಲಿ ಬಿಟ್ಟು ಬರುವ ಪಾಳಿಯೂ ನನ್ನ ತಂದೆಯವರದ್ದೇ ಆಗಿತ್ತು. ಹೆಚ್ಚಿನ ಯಾರ ಕಡೆಯೂ ಕಾರು ವಾಹನಗಳಿಲ್ಲದ ಆ ದಿನಗಳಲ್ಲಿ ಸಿ.ಪಿ.ಸಿ. ಕಂಪನಿಯ ಮೆನೆಜಿಂಗ್ ಡೈರೆಕ್ಟರ್ ಶ್ರೀ ಪಿ.ಎಸ್. ಕುಡ್ವರು ಅವರ ಕಾರನ್ನು ನಮ್ಮ ತಂದೆಯವರಿಗೆ ಶ್ರೀ ಸ್ವಾಮಿಜಿಗಳ ಪ್ರಯಾಣಕ್ಕಾಗಿ ಕೊಡುತ್ತಿದ್ದರು.

1957ರಲ್ಲಿ ಅವರ ಕೊನೆಗಾಲದ ದಿನಗಳಲ್ಲಿ ಅವರ ಅನಾರೋಗ್ಯದ ಬಗ್ಗೆ ತಿಳಿದುಕೊಂಡ ಉಳ್ಳಾಲ ಶ್ರೀನಿವಾಸ ಮಲ್ಯರು ಮಂಗಳೂರಿಗೆ ಬಂದಾಗ ನಮ್ಮ ಮನೆಗೆ ಬಂದು ನೋಡಿಕೊಂಡು ಹೋಗಿದ್ದರು. ಶ್ರೀ ವೈಕುಂಠ ಬಾಳಿಗರಂತಹ ನಾಯಕರುಗಳೂ ಬಂದು ಹೋಗಿದ್ದರು.

ಸ್ವಾತಂತ್ರ್ಯ ಸಮರದ ಆ ದಿನಗಳಲ್ಲಿ ಪಟಾಕಿ ಪರದೇಶಗಳಿಂದ ಬರುತ್ತಿದ್ದುದ್ದರಿಂದ ಪಟಾಕಿ ಹೊಡೆಯುವುದಕ್ಕೆ ಬಂಟವಾಳದಲ್ಲಿ ಸ್ವಯಂ ನಿಷೇಧ ಸಾರಲಾಗಿತ್ತು. ಎಲ್ಲಿಂದಲೋ ಸಿಕ್ಕ ಪಟಾಕಿಯನ್ನು ನಾನು ಹೊಡೆಯುತ್ತಿದ್ದಾಗ ನನ್ನ ಚಿಕ್ಕ ತಂದೆ ವಾಸು ಬಾಪ್ಪನವರು ನನ್ನಲ್ಲಿದ್ದ ಪಟಾಕಿಗಳನ್ನು ಹೊಸೆದುಹಾಕಿ ನನ್ನ ಕೈ ಬೆರಳುಗಳ ಗಂಟಿಗೆ ಹೊಡೆದ ಆ ದಿನಗಳ ನಂತರ ಮುಂದೆಯೂ ಪಟಾಕಿ ಹೊಡೆಯುವುದಕ್ಕೆ ಈಗಲೂ ನನಗೆ ಕೈಮುಂದೆ ಬರುವುದಿಲ್ಲ.

ಇಂತಹ ಧಾರ್ಮಿಕ ಸಾಮಾಜಿಕ, ರಾಷ್ಟ್ರೀಯ ಕ್ಷೇತ್ರಗಳಲ್ಲಿ ಅನುಪಮ ಸೇವೆಯನ್ನಿತ್ತು ಬಡವ ಬಲ್ಲಿದರೆಲ್ಲರಿಂದ, ವಿದ್ಯಾವಂತ ಅವಿದ್ಯಾವಂತರಿಂದ, ಮಾನ ಮರ್ಯಾದೆ ವಿಶ್ವಾಸಗಳನ್ನು ಗಳಿಸಿಕೊಂಡು ಮೆರೆದ ಶ್ರೀಮಂತ ಹೃದಯವಂತಿಕೆಯನ್ನು ಹೊಂದಿದ್ದ, ಮಾತಾಪಿತೃರುಗಳ ಮಗನಾಗಿ ಹುಟ್ಟಿದ್ದು ನನ್ನ ಭಾಗ್ಯವೆನ್ನಬೇಕು. ಅವರು ನನಗೆ "ಹಾಗೆಯೇ

ಮಾಡಬೇಕು'', "ಹೀಗೆಯೇ ನಡೆದುಕೊಳ್ಳಬೇಕೆಂದು'' ಹೇಳುತ್ತಿರಲಿಲ್ಲ. ಆದರೆ ತಾವೇ ಹಾಗೆ ಉನ್ನತ ಜೀವನವನ್ನು ಬಾಳಿ, ನನಗೆ ದಾರಿದೀಪದ ಬೆಳಕನ್ನು ತೋರಿಸಿದರು. ಅವರು ಸವೆಸಿದ ಹಾದಿಯಲ್ಲಿ ನಡೆದು ಈಗ ಅವರು ಸ್ವರ್ಗದಲ್ಲಿದ್ದರೂ ಅವರು ನನ್ನನ್ನು ಮೆಚ್ಚುವಂತಹ ಬಾಳನ್ನು ಬಾಳಿದ್ದೇನೆ, ಬದುಕಿದ್ದೇನೆ ಎಂಬ ಸಂತೋಷ ಮತ್ತು ಗೌರವ ನನ್ನಲ್ಲಿದೆ.

ನನ್ನಮ್ಮ ಗೌರಿ ಯಾನೆ ಭಾಗೀರಥಿ ಬಾಯಿ

ತಂದೆಯವರ ಧಿರೋದಾತ್ರ ಗುಣಗಳಿಗೆ, ಇನ್ನೊಂದೇ ರೀತಿಯಲ್ಲಿ ನಿಜ ಅರ್ಥದಲ್ಲಿ ಸಹಧರ್ಮಿಣಿಯಾಗಿದ್ದವರು ನನ್ನಮ್ಮ ಶ್ರೀಮತಿ ಗೌರಿ ಯಾನೆ ಭಾಗೀರಥಿ. ಅವರು ಧರ್ಮಭೀರು. ಎಂತಹ ಕಷ್ಟಗಳಲ್ಲಿಯೂ ಶ್ರೀ ವೆಂಕಟರಮಣ ಸ್ವಾಮಿಯ ಮತ್ತು ನಮ್ಮ ಮನೆಯ ಹತ್ತಿರವಿದ್ದ ಶ್ರೀ ಮಹಾಲಿಂಗೇಶ್ವರ ದೇವರ ಮೇಲಿನ ವಿಶ್ವಾಸವನ್ನು ಅವರು ಕಳೆದುಕೊಳ್ಳುತ್ತಿರಲಿಲ್ಲ. ಅಷ್ಟೇ ಅಲ್ಲ ಸಾಧು ಸಂತರ ಮೇಲೆ ಅವರಿಗೆ ಅಪಾರ ಗೌರವ. ಅಂತೆಯೇ ಮನೆ ಬಾಗಿಲಿಗೆ ಬರುವ ಭಿಕ್ಷುಕರಿಗೆ, ಭಿಕಾರಿಗಳಿಗೆ, ಎಳೆಯರಾಗಿದ್ದ ನನ್ನ ಮತ್ತು ತಂಗಿಯಂದಿರ, ತಮ್ಮಂದಿರ ಕೈಗಳಿಂದಲೇ ಅವರು ಭಿಕ್ಷೆ ಹಾಕಿಸುತ್ತಿದ್ದರು. ಮುಂದೆ ನಮ್ಮಲ್ಲಿ ಧಾನಧರ್ಮದ ಬುದ್ಧಿ ಬೆಳೆಯಬೇಕೆಂಬುದಾಗಿ ಮತ್ತು ಮನೆ ಬಾಗಿಲಿಗೆ ಸಹಾಯ ಯಾಚಿಸಿ ಬಂದವರಿಗೆ ದಾನಧರ್ಮ ಮಾಡುವ ಶಕ್ತಿ ಮತ್ತು ಸಂಸ್ಕೃತಿ ಸಂಸ್ಕಾರಗಳು ನಮ್ಮಲ್ಲಿ ಬರಲಿ ಎಂಬ ಆಶೆ ಆಕಾಂಕ್ಷೆ ಅವರದ್ದಾಗಿತ್ತು ಎಂದು ನನ್ನ ಭಾವನೆ.

ಬೆಳಿಗ್ಗೆ ನಮ್ಮನ್ನು (ಎಳೆಯವನಾಗಿದ್ದ ನಾನು, ನನ್ನ ತಂಗಿ ಶಾಲಿನಿ, ಎಳೆಯ ಪ್ರಾಯದಲ್ಲಿ ತೀರಿಹೋದ ನನ್ನ ತಂಗಿ ನಿರುಪಮಾ) ಹಾಸಿಗೆಯಿಂದ ಎಬ್ಬಿಸಿ, ಸ್ನಾನ ಮುಗಿಸಿದ ಬಳಿಕ ನಾವು ಮೂವರೂ ತೀರ್ಥದ ತಟ್ಟೆ ತೆಗೆದುಕೊಂಡು ಶ್ರೀ ವೆಂಕಟರಮಣ ದೇಫಳಕ್ಕೆ ಹೋಗಿ, ಪ್ರಾರ್ಥನೆ ಮಾಡಿ ತೀರ್ಥ ಪ್ರಸಾದ ತರಬೇಕು, ಆ ಮೇಲೆಯೇ ನಮಗೆ ಗಂಜಿ ಊಟ. ಸಂಜೆಯೂ ಹಾಗೆಯೇ ಶಾಲೆಯಿಂದ ಮತ್ತು ಆಟದ ಮೈದಾನ ಅಥವಾ ನಾನು ವ್ಯಾಯಾಮ ಶಾಲೆಗೆ ಹೋಗಿ ಬಂದ ಕೂಡಲೇ ಕೈಕಾಲು ತೊಳೆದು, ದೇವರ ಕೋಣೆ ಸೇರಿ ಭಜನೆ ಮಾಡಲೇಬೇಕು. ಇದು ಅವರ ಕಟ್ಟುನಿಟ್ಟು. ಅವರಿಗೆ ಸೋಮವಾರ (ಈಶ್ವರ ದೇವಳ ದಿವಸ) ಮತ್ತು ಗುರುವಾರ (ಗುರುಗಳ ದಿವಸ) ಒಂದೇ ಊಟ. ನಮಗೆ ಕೂಡಾ ಹಾಗೆಯೇ. ಅಂದರೆ ಆ ದಿನಗಳಲ್ಲಿ ನಮಗೆ ನೀರುಳ್ಳಿ ಅಥವಾ ಬೆಳ್ಳುಳ್ಳಿ ಒಗ್ಗರಣೆಗಳು ಇಲ್ಲದ ಅಥವಾ ಮೀನಿನ ಪದಾರ್ಥಗಳಿಲ್ಲದ ಊಟ, ತಿಂಡಿ ಇತ್ಯಾದಿ ಮತ್ತು ಎಲ್ಲಾ ಹಬ್ಬ ಹರಿದಿನಗಳಲ್ಲಿಯೂ ಅವರದೇ ಒಂದು ನಿಯಮಾನುಸಾರ ಆಚರಣೆಗಳು, ಪೂಜೆ ಪುನಸ್ಕಾರಗಳು, ಅವರ ಕೈಯ ಅಡುಗೆ, ತಿಂಡಿ ಇತ್ಯಾದಿಗಳು, ಅದರಲ್ಲೂ ಮೀನಿನ ಘಶಿ, ಫಣ್ಣಾಪ್ಕರಿ, ಎಣ್ಣೆಯಲ್ಲಿ ಕರಿದ ಮೀಖಿನ ಭಕ್ಷಗಳು ತುಂಬಾ ಫೇಮಸ್. ನನ್ನ ಹಿರಿಯ ಅಕ್ಕಂದಿರು, ತಂಗಿಯರಿಗೆ ಮಾತ್ರವಲ್ಲ ಜೀವಮಾನದಲ್ಲಿಯೇ ಮೀನನ್ನು ತಿನ್ನದ ನನ್ನ ಹೆಂಡತಿ ಸಾವಿತ್ರಿಗೂ ಆ ರುಚಿ ಶುಚಿಗಳು, ತಾಯಿಯವರ ಕೈಗುಣಗಳು, ಬಳುವಳಿಯಾಗಿ ಬಂದದ್ದು ನನ್ನ ಭಾಗ್ಯವೇ ಸರಿ.

ಹಾಗೆಂದು ಅವರು ಬೇರೆ ದೇವಸ್ಥಾನಗಳಿಗೆ ಹೋಗುವ ಮನೋವೃತ್ತಿಯವರಲ್ಲ ಎಂದಲ್ಲ. ನಮ್ಮ ಮನೆ ಬಂಟವಾಳದಲ್ಲಿ ನೇತ್ರಾವತಿ ತೀರದ ಮೇಲಿತ್ತು. ಅಲ್ಲಿಯೇ ಹತ್ತಿರದಲ್ಲಿ ಮೇಲೆ ಶ್ರೀ ಮಹಾಲಿಂಗೇಶ್ವರ ದೇವರ ದೇವಸ್ಥಾನ. ಅವರಿಗೆ ಆ ದೇವರ ಮೇಲೆ ವಿಶೇಷ ಭಕ್ತಿ. ಆ ಕಾಲದಲ್ಲಿ ಆ ದೇವಸ್ಥಾನದ ಆಡಳಿತ ಉತ್ತಮ ಸ್ಥಿತಿಯಲ್ಲಿ ಇರಲಿಲ್ಲ. ಅರ್ಚಕರಾಗಿ ಹಿರಿಯರಾದ ಸೋಮಯಾಜಿಗಳಿದ್ದರು. ಅಲ್ಲಿಗೆ ದೇವರಿಗೆ, ದೀಪಗಳಿಗೆ ಎಣ್ಣೆ, ತೆಂಗಿನಕಾಯಿ ಕೊಟ್ಟು ಬರಲು ನಮ್ಮನ್ನು ಕಳುಹಿಸುವುದಿತ್ತು. ಅಲ್ಲದೇ ಮನೆಯಲ್ಲಿ ಮಕ್ಕಳಿಗೆ ಅಥವಾ ನಮ್ಮ ಕೊಟ್ಟಿಗೆಯಲ್ಲಿದ್ದ ಎಮ್ಮೆ ದನ ಕರುಗಳಿಗೆ ಏನಾದರೂ ರೋಗ ರುಜಿನ ಬಂದರೆ ಅವರು ಮೊರೆ ಹೋಗುತ್ತಿದ್ದುದ್ದು ಆ ಮಹಾಲಿಂಗೇಶ್ವರನಿಗೆ. ಅವರು ವರ್ಷ, ಎರಡು ವರ್ಷಗಳಿಗೊಮ್ಮೆ ಧರ್ಮಸ್ಥಳ ಸಂದರ್ಶಿಸುವ ಆಶೆಯನ್ನು ವ್ಯಕ್ತಿಪಡಿಸುತ್ತಿದ್ದರು ಮತ್ತು ಕೆಲವು ಬಾರಿ ನಮ್ಮನ್ನು ಕರೆದುಕೊಂಡು ಹೋದದ್ದೂ ಇದೆ. ಅಂತಹ ಒಂದು ಭಕ್ತಿ.

ನನ್ನ ತಾಯಮ್ಮನವರಿಗೆ ಪೂಜೆ ಪುರಸ್ಕಾರಗಳಲ್ಲಿ ವಿಶೇಷ ಅಭಿರುಚಿ, ಅಭಿಮಾನ. ಗೌಡ ಸಾರಸ್ವತರಲ್ಲಿ ಕಾರ್ತಿಕ ಮಾಸದಲ್ಲಿ 'ಪಶ್ಚಿಮ ಜಾಗರಣೆ' ಎಂಬ ವಿಶೇಷವಾದ ಸಂಪ್ರದಾಯವಿದೆ. ಕಾರ್ತಿಕ ಮಾಸದಲ್ಲಿ ಬೆಳಿಗ್ಗೆ 4.30 ರೊಳಗೆ ಎದ್ದು, ನದಿಗಳಿದ್ದಲ್ಲಿ ನದಿಸ್ನಾನ ಮಾಡಿ, ದೇವಳಕ್ಕೆ ಹೋಗಿ ಅಲ್ಲಿ ಸೇರಿದವರೆಲ್ಲರೂ ರಾಮಾಯಣಂ ಹರಿ ರಾಮಾಯಣಂ, ರಾಮಾಯಣಂ ಹರಿ ರಾಮಾಯಣಂ, ಅಚ್ಯುತಂ ಕೇಶವಂ ರಾಮ ನಾರಾಯಣಂ....... ಹೀಗೆ ಭಜನೆ ಹೇಳುತ್ತ ದೇವಳದ ತುಳಸಿ ಕಟ್ಟೆಯ ಸುತ್ತಲೂ ಬರುವುದು ಮತ್ತು 5.00 ಕ್ಕೆ ಜರಗುವ ದೇವರ ಆರತಿ ನೋಡಿ ಮನೆಗಳಿಗೆ ತೆರಳುವುದು. ಇನ್ನು ಕೆಲವರು ಗಂಡಸರು ಗುಂಪಾಗಿ ನಗರಭಜನೆಗೆ ಹೊರಡುವುದು ಕಾರ್ಯಕ್ರಮ.

ತಾಯಮ್ಮನವರು ನಮ್ಮನ್ನು 4.00 ಕ್ಕೆ ಎಬ್ಬಿಸಿ ಶ್ರೀ ದೇವಳದ ಬಳಿ ಹರಿಯುತ್ತಿರುವ ನೇತ್ರಾವತಿ ನದಿಗೆ ಕೊಂಡು ಹೋಗಿ ನಾವೆಲ್ಲರೂ ಮೀಯಬೇಕು ಬಳಿಕ ಭಜನೆಯಾಗಿ ದೇವರ ಆರತಿ ನೋಡಿ ಮನೆಗೆ ಬರುವುದು ವಾಡಿಕೆ. ಚಿಕ್ಕವರಿರುವಾಗ ಕಾರ್ತಿಕ ಮಾಸದ ಚಳಿಯಲ್ಲಿ ನಡುಗುತ್ತಲೇ ಪಶ್ಚಿಮ ಘಟ್ಟಗಳಿಂದ ಹರಿದು ಬರುವ ನೇತ್ರಾವತಿಯ ಹಿಮದಂತಹ ನೀರಿನಲ್ಲಿ ಚಳಿಗೆ ಕಟಕಟ ಹಲ್ಲು ಕಡಿಯುತ್ತ, ಕಣ್ಣಿನಿಂದ ನೀರು ಇಳಿಯುತ್ತಿದ್ದಾಗಲೇ ನದಿಯಲ್ಲಿ ಮೀಯುವುದು ಆಗ ಒಂದು ಶಿಕ್ಷೆಯೆಂದೇ ಅನಿಸುತ್ತಿತ್ತು. ಆದರೆ ತಾಯಮ್ಮನವರ ಮಾತಿಗೆ ಅಡ್ಡ ಹೇಳದೇ ಅವರನ್ನು ಅನುಸರಿಸಿ ನದಿ ಬಳಿ ತೆರಳುತ್ತಿದ್ದವು. ಇಷ್ಟು ವರ್ಷದ ಮೇಲೂ ನನಗೆ 'ರಾಮಾಯಣಂ ಹರಿ ರಾಮಾಯಣಂ' ಭಜನೆ ನಾಲಗೆಯಲ್ಲಿದೆ ಮತ್ತು ಅಂತದೇ ಹಿತಭಾವನೆ ಮನಸ್ಸಿನಲ್ಲಿ ಮರುಕಳಿಸುತ್ತಲಿದೆ.

ಆ ಕಾಲದಲ್ಲಿ ಹೆಣ್ಣುಮಕ್ಕಳಿಗಾಗಿ ಶಾಲೆಗಳೇ ಇರುತ್ತಿಲ್ಲವಾದುದರಿಂದ ತಾಯಮ್ಮನಿಗೆ ಶಾಲೆಗೆ ಹೋಗಿ ವಿದ್ಯೆ ಕಲಿಯುವ ಅವಕಾಶವಿದ್ದಿಲ್ಲ. ಆದರೂ ಅವರು ಕನ್ನಡ ಓದುವುದು ಮತ್ತು ಸಾಧಾರಣವಾಗಿ ಬರೆಯುವುದೆಲ್ಲ ಮಾಡುತ್ತಿದ್ದರು. ವಿಶೇಷವೇನೆಂದರೆ, ಅವರು

ಮರಾಠಿ ಧಾರ್ಮಿಕ ಪುಸ್ತಕಗಳನ್ನು ಓದುತ್ತಿದ್ದರು. ನಾನು ಸಣ್ಣವನಿರುವಾಗ ಆಚೀಚಿನ ಮಹಿಳೆಯರು ಮಧ್ಯಾಹ್ನ 3.30 ಗಂಟೆ ಹೊತ್ತಿಗೆ ನಮ್ಮ ಮನೆಗೆ ಬಂದು ಕೂಡಿದಾಗ ತಾಯಿಯವರು ಮರಾಠಿ ಭಾಷೆಯಲ್ಲಿದ್ದ ಜ್ಞಾನೇಶ್ವರನ ಪುಸ್ತಕಗಳನ್ನು ಓದುತ್ತ ಕೊಂಕಣಿಯಲ್ಲಿ ಅದರ ಭಾವಾನುವಾದವನ್ನು ವಿವರಿಸುವುದನ್ನು ನಾನೂ ಕೇಳುತ್ತಿದ್ದ ನೆನಪಿದೆ.

ಮರಾಠಿ ಅಭಂಗಗಳನ್ನು ಅವರೊಟ್ಟಿಗೆ ಇತರ ಹೆಂಗಸರೂ ಹಾಡುತ್ತಿದ್ದುದರಿಂದ ನನಗೂ ಅಂದಿನಿಂದಲೇ ಮರಾಠಿ ಅಭಂಗಗಳನ್ನು ಪುರಂದರದಾಸರ ಕನಕದಾಸರ ಭಜನೆಗಳನ್ನು ಹೇಳುವ ಅಭ್ಯಾಸ ಬಂದಿತ್ತು. ಅದರಿಂದಾಗಿ ನಮ್ಮ ಮನೆಯಲ್ಲಿ ಶ್ರದ್ಧಾ ಭಕ್ತಿಗಳುಳ್ಳ ಧಾರ್ಮಿಕ ವಾತಾವರಣವಿತ್ತು ಎಂದು ನನಗೆ ಈಗಲೂ ಅನಿಸುವುದು ಇದೆ.

ನನ್ನ ಬಾಲ್ಯ

1934 ನೇ ಇಸವಿ ನವಂಬರ 6 ರಂದು ಮಂಗಳವಾರ ಮುಂಜಾವು ನರಕ ಚತುರ್ದಶಿಯಂದು ದೀಪಾವಳಿ ದಿನದಂದು ನಾನು ಹುಟ್ಟಿದೆ. ಭಾರತೀಯ ಪುರಾಣ ರಿತ್ಯಾ ಶ್ರೀ ವಿಷ್ಣು ಪರಮಾತ್ಮನು ಲೋಕಕಲ್ಯಾಣಕ್ಕಾಗಿ ವಾಮನಾವತಾರವನ್ನು ಎತ್ತಿದ ದಿನ. ಹಾಗೆಂದೇ ಅಂದಿನ ಕಾಲದ ಪ್ರಖ್ಯಾತ ವೈದಿಕ ಮನೆತನದ ಹಿರಿಯ ಶ್ರೀ ವಾಮನ ಭಟ್ಟರು ಸೂಚಿಸಿದಂತೆ ನನಗೆ 'ವಾಮನ'ನೆಂದು ಹೆಸರಿಟ್ಟರಂತೆ. ಜಗತ್ತಿನಲ್ಲೆಲ್ಲಾ ಬಡವ ಶ್ರೀಮಂತರೆನ್ನದೆ ಜನರು ದೀಪಗಳ ಹಬ್ಬದ ಸಂಭ್ರಮದಲ್ಲಿ ತೇಲುತ್ತಿದ್ದ ದಿನಗಳವು. ನನ್ನ ಅಕ್ಕ ಅನುಸೂಯ ಈ ಸಂತೋಷದ ಭರದಲ್ಲಿ ಊರಿನ ಎಲ್ಲಾ ಮನೆಗಳಿಗೆ ಸಕ್ಕರೆ ಪೊಟ್ಟಣ ಹಂಚಿ ಬಂದರಂತೆ.

ಸಣ್ಣವನಿರುವಾಗ ತುಂಬಾ ಭಯಭೀರುವಾಗಿದ್ದೆ. ನನ್ನ ನೆರಳನ್ನೇ ಕಂಡು ಭಯಪಡುವಷ್ಟು ಪುಕ್ಕ. ಮೈಯಲ್ಲೂ ಅಷ್ಟು ಸುಪುಷ್ಟನಾಗಿರಲಿಲ್ಲ ಪೀಚು ಎನ್ನುವಷ್ಟು. ತಂದೆಯವರೊಟ್ಟಿಗೆ ನಾನು ನಡೆಯುತ್ತಿರುವಾಗ ಆನೆಯ ಬಳಿ ಆಡು ಹೋಗುವಂತಿತ್ತು. ಹಾಗೆಂದು ತಿನ್ನಲಿಕ್ಕೆ ಉಣ್ಣಲಿಕ್ಕೆ ನಾನೇನೂ ಕಮ್ಮಿಯವನಾಗಿರಲಿಲ್ಲ. ರಾತ್ರಿ ಹೊತ್ತು ಮನೆಯಿಂದ ಹೊರಗೆ ಹೋಗುವುದಿರಲಿ, ಮನೆಯ ಒಳಗಾದರೂ ಒಬ್ಬನೇ ಇರಲಾರೆ ಎನ್ನುವಷ್ಟು ಅಂಜುಬುರುಕ. ನನ್ನ ತಂದೆಯವರ ತದ್ವಿರುದ್ಧ ಮನೋಬಲ ನನ್ನದು. ಆದರೆ ಭಜನೆ, ಸಂಗೀತವೆಂದರೆ ತುಂಬಾ ಇಷ್ಟಪಡುತ್ತಿದ್ದೆ. ತುಂಬಾ ಅಂತರ್ಮುಖಿ (Introvert) ಆಗಿದ್ದೆ. ಯಾರೊಡನೆಯೂ ಬೆರೆಯಲಿಕ್ಕೆ ಹಿಂಜರಿಯುತ್ತಿದ್ದೆ. ನಾನಾಗಿಯೇ ಮೈಮೇಲೆ ಬಿದ್ದು ಮಾತನಾಡುವಷ್ಟು ಛಾತಿಯಿರಲಿಲ್ಲ. ತಾಯಿಯವರ ಮತ್ತು ಅಕ್ಕಂದಿರ ಮುದ್ದಿನವನಾಗಿದ್ದೆ. ಅಂತೆಯೇ ಕುಟುಂಬದವರು ಮತ್ತು ಇಷ್ಟಮಿತ್ರರೆಲ್ಲರಿಗೂ. ತಾಯಿಯವರು ಹಾಕಿಕೊಟ್ಟ ನೇಮದಂತೆ ದೇವಸ್ಥಾನಕ್ಕೆ ಹೋಗುವುದೆಂದರೆ ಅದೇನೋ ಸಂತೋಷ. ಆದರೆ ಭೂತದ ಗುಡಿಯ ಸಮೀಪವೂ ಹೋಗಲಾರದಷ್ಟು ಅಂಜಿಕೆ. ಕ್ಲಾಸಿನಲ್ಲಿ ಮುಂದಿನ ಬೆಂಚಿನಲ್ಲಿ ಕೂತುಕೊಳ್ಳುವಷ್ಟು ಅಷ್ಟೇನೂ ಜಾಣ ಆಗಿರಲಿಲ್ಲ.

ಪ್ರಥಮವಾಗಿ ಬಂಟವಾಳ ಶ್ರೀ ವೆಂಕಟರಮಣ ಸ್ವಾಮಿ ದೇವಾಲಯದ ಎಲಿಮೆಂಟರಿ ಶಾಲೆಗೆ ಒಂದರಿಂದ ಮೂರನೇ ಕ್ಲಾಸು ಅಲ್ಲಿಂದ 4ನೇ ಕ್ಲಾಸಿಗೆ ಎಸ್.ವಿ.ಎಸ್. ಹೈಸ್ಕೂಲ್‌ಗೆ ಹೋಗಬೇಕಾಗುತ್ತಿತ್ತು. ಮುಂದೆ 5ನೇ ಕ್ಲಾಸಿಗೆ ಪುನಃ ಎಲಿಮೆಂಟರಿ ಶಾಲೆಗೆ ಬರುವುದಾಯ್ತು. ಅದೇ ವರ್ಷದಿಂದ ಸಂಜೆ ಶ್ರೀ ಯಶವಂತ ವ್ಯಾಯಾಮ ಶಾಲೆಗೂ (ಗೋದೆ ಶಾಲೆ) ತಂದೆಯವರು ನನ್ನನ್ನು ಕಳುಹಿಸಿದ್ದರು. ಬಹುಶಃ ಆ ದಿನಗಳಲ್ಲಿಯೇ ನನ್ನಲ್ಲಿ ಶಾರೀರಿಕ ಮತ್ತು ಮಾನಸಿಕ ಬದಲಾವಣೆಗಳು ಅರಳಿದವು ಎಂದು ನನಗೆ ಭಾಸವಾಗುತ್ತದೆ. ಹೊರಗಿನ ಯಾರೊಡನೆಯೂ ಬೆರೆಯದೇ ಇರುತ್ತಿದ್ದ ನಾನು, ಶಾಲೆ ಮತ್ತು ಗೋದೆ ಶಾಲೆಯ ಬಾಲಕರೊಟ್ಟಿಗೆ ಬೆರೆತು ಮಕ್ಕಳಾಟಿಕೆಯ ದಿನಗಳ ನಗೆ, ಸಂತೋಷಗಳನ್ನು ಭರಪೂರ ಅನುಭವಿಸುವುದಕ್ಕೆ ಪ್ರಾರಂಭಿಸಿದೆ.

ಗೋದೆಶಾಲೆಯಲ್ಲಿನ ನಿಯಮಿತ ವ್ಯಾಯಾಮ - ಆಗ ಶ್ರೀ ಜಕ್ರಿಬೆಟ್ಟು ವಾಸುದೇವ ಪೈ ನಂತರ ಶ್ರೀ ಅನಂತರಾಮಯ್ಯ ವ್ಯಾಯಾಮ ಶಾಲೆಯ ಮಾಸ್ತರರಾಗಿದ್ದರು - ಸರ್ವಾಂಗ ಸುಂದರ ವ್ಯಾಯಾಮ, ದಂಡ ಬೈಠಕ್, ವಾಂಡ್ಸ್, ಯೋಗಾಸನ, ಲೋಜಿಮ್, ಡಂಬೆಲ್, ನಂತರ ದೊಡ್ಡವನಾದ ಮೇಲೆ ಲಾಠಿ, ಜಾಂಬಿಯಾ, ಖಡ್ಗ ಕದನ, ಬರ್ಚಿ, ಬೆಂಕಿಯಾಟ, ಭಾರ ಎತ್ತುವಿಕೆ (Weight lifting) ಮಲ್ಲಯುದ್ಧ (wrestling) ಮತ್ತು ಇಡೀ ಕರ್ನಾಟಕದಲ್ಲಿ ಬಂಟವಾಳ ವ್ಯಾಯಾಮ ಶಾಲೆಗೆ ಹೆಸರು ತಂದ ಮಲ್ಲಕಂಭ, ಹೆಂಗಿಂಗ್ (ನೇತಾಡುವ) ಮಲ್ಲಕಂಭ ಈ ಎಲ್ಲಾ ವ್ಯಾಯಾಮ ಪ್ರಕಾರಗಳಲ್ಲಿ ಪಾಲ್ಗೊಳ್ಳುತ್ತಿದ್ದೆ.

ಇದಲ್ಲದೇ ಬೆಳಿಗ್ಗೆ ನೇತ್ರಾವತಿ ನದಿಯಲ್ಲಿ ಉಲ್ಲಾಸದಿಂದ ಈಜುವ ಕ್ರೀಡೆಯೂ ಇತ್ತು. ನನಗೆ 3-4 ವರ್ಷವಿನ್ನುವಾಗಲೇ ನನ್ನ ತಂದೆಯವರು ದೇವಾಲಯದ ಹತ್ತಿರದ ನೇತ್ರಾವತಿ ನದಿಯಲ್ಲಿ ನನ್ನನ್ನು ಮೀಯಲು, ಕೊಂಡು ಹೋಗುವುದಿತ್ತು. ನದಿಯಲ್ಲಿ ಈಜುವುದು ಒಂದು ಉತ್ತಮ ವ್ಯಾಯಾಮವೇ ಆಗುತ್ತಿತ್ತು.

ಅಷ್ಟಲ್ಲದೇ ಶಾಲೆಯಲ್ಲಿಯೂ ಆಟದ ಪಿರಿಯಡಗಳಿದ್ದವು. ಹೈಸ್ಕೂಲಿನ ಪ್ರಖ್ಯಾತ ಪ್ಲೆಗ್ರೌಂಡ್ (ಆಟದ ಮೈದಾನ)ನಲ್ಲಿಯೂ ಫುಟ್‌ಬಾಲ್, ವಾಲಿಬಾಲ್, ಹಾಕಿ, ಕಬಡ್ಡಿ, ಬೆಡಮಿಂಟನ, ರಿಂಗಟೆನ್ನಿಸ್ ಅಲ್ಲದೇ "ಆಟಗಳ ರಾಜ" ಕ್ರಿಕೆಟ್ ಸಾಂಘಿಕವಾಗಿ ಆಡುವುದಲ್ಲದೇ ಆಗಿನ ಕಾಲದಲ್ಲಿ ಬಂಟವಾಳದಲ್ಲಿ ಪ್ರಚಲಿತವಿದ್ದ ವಿಕ್ಕರಿ, ಉಪ್ಪು (ತರುವುದು) ಪೋಲವೋಲ್ಪ ಇಂತಹ ದೇಶೀಯ, ಪರದೇಶೀಯ ಕ್ರೀಡೆಗಳಲ್ಲಿ ಭಾಗವಹಿಸುವುದರೊಂದಿಗೆ ನನ್ನದೇ ಟೀಮನ್ನು ಶುರುಮಾಡಿದ್ದೆ ಮತ್ತು ನಾಯಕನಾಗಿಯೇ ಮೂಡಿ ಬಂದಿದ್ದೆ. ಹೀಗಾಗಿ ನನ್ನಲ್ಲಿ ನಾಯಕತ್ವ ಗುಣ ತಾನಾಗಿಯೇ (ನನ್ನ ತಂದೆಯವರ ಬಳುವಳಿ) ಬೆಳೆದು ಬಂದಿತ್ತು.

ಅಲ್ಲದೇ ಸರಿಯಾಗಿ ತಿಂದುಂಡು ಬೆಳೆಯಲಿಕ್ಕೆ ನಮ್ಮ ಹೋಟೆಲೂ ಇತ್ತು ಮತ್ತು ಮನೆಯಲ್ಲೂ ಉತ್ತಮ, ಶುಚಿರುಚಿಯಾದ ತಿಂಡಿ, ಊಟ. ಅದಕ್ಕಿಂತಲೂ ಹೆಚ್ಚಾಗಿ ನನ್ನ

ತಂದೆಯವರಿಗೆ ದಿನಾಲೂ ಬೇಕಾಗುತ್ತಿದ್ದ ಮೀನು ಪದಾರ್ಥಗಳೂ ಇದ್ದುದರಿಂದ ಎಷ್ಟು ಆಟೋಟ ವ್ಯಾಯಾಮ ಈಜು ಮಾಡಿದರೂ ಕರಗಿಸುವಷ್ಟು ಆಹಾರ ಮೆಲಕಾಡಲು ಸಿಗುತ್ತಿತ್ತು.

ಆಗಿನ ಕಾಲದಲ್ಲಿ ಹೆಚ್ಚಿನ ಹಿರಿಯರು ತಮ್ಮ ಮಕ್ಕಳು 98, 99 ಶೇಕಡಾ ಮಾರ್ಕು ಪಡೆಯಬೇಕೆಂದು ಪೀಡಿಸುತ್ತಿರಲಿಲ್ಲವೋ ಏನೋ? ನನ್ನ ತಂದೆಯವರಂತೂ ಶಾಲಾ Progress Report ನಲ್ಲಿ ನನ್ನ ಹಾಜರಿ ಸರಿಯಾಗಿದೆ ಮತ್ತು ಯಾವುದೇ ಸಬ್ಜೆಕ್ಟಿನಲ್ಲಿ ಕೆಂಪುಗೆರೆ ಇಲ್ಲದಿರುವುದನ್ನು ಕಂಡೇ ಸಂತೋಷವಾಗಿ ತಮ್ಮ ಸಹಿ ಹಾಕುತ್ತಿದ್ದರು.

ಶಾಲೆಯಲ್ಲಿ ನಮಗೆ ಅನಂತ್ ಕಾಮತ್, ದಾಸ್ ಕಾಮತ್ ಮಾಸ್ತರ್, ನಾಟಕದ ತರಬೇತಿಯನ್ನು ಕೊಡುತ್ತಿದ್ದರು (ಪುಕ್ಕಟೆಯಾಗಿ). ಸಂಗೀತದ ಗೀಳೂ ನನಗಿದ್ದುದರಿಂದ ಮತ್ತು ಗಂಭೀರ ಕಂಠವಿದ್ದುದರಿಂದ ನಾಟಕಗಳಲ್ಲಿ Hero ನಾನೇ ಆಗಿರುತ್ತಿದ್ದೆ. ಅದಕ್ಕೆ ಬೇಕಾದ ಶರೀರ ಮತ್ತು ಶಾರೀರ, ರೂಪ, ನನಗೆ ತಂದೆ ತಾಯಿಯರಿಂದ ಬಂದಿದ್ದವು ಮತ್ತು ಅವರಿಂದಲೇ ನನಗೆ ಸಂಗೀತ ನಾಟಕಗಳ ಗೀಳು ಸಣ್ಣವನಾಗಿದ್ದಾಗಿನಿಂದಲೇ ಬಂದಿದ್ದವು. ಅದಕ್ಕೆ ಹುಲುಸಾದ ವಾತಾವರಣವೂ ನಾನು ಹುಟ್ಟಿದ ಬಂಟವಾಳದಲ್ಲಿ ಇತ್ತು. ನನ್ನ ಹಿರಿಯರಿಂದಲೂ ಮತ್ತು ಊರವರಿಂದಲೂ ಬೆನ್ನು ಚಪ್ಪರಿಕೆ ಸಾಂಗವಾಗಿ ಬರುತ್ತಿದ್ದವು.

ನಾನು ಸಣ್ಣವನಿರುವಾಗಿನಿಂದಲೂ ಅಂದರೆ 4ನೇ, 5ನೇ ಕ್ಲಾಸಿನಲ್ಲಿರುವಾಗಿನಿಂದಲೇ ಪತ್ರಿಕೆಗಳನ್ನು ಓದಲು ಶುರುಮಾಡಿದ್ದೆ. ಆಗ ಕನ್ನಡ ದಿನಪತ್ರಿಕೆಯೆಂದರೆ 'ಸಂಯುಕ್ತ ಕರ್ನಾಟಕ' ಒಂದೇ. ಅದೂ ಹುಬ್ಬಳ್ಳಿಯಲ್ಲಿ ಪ್ರಕಟವಾಗಿ ಬಸ್ಸಿನಲ್ಲಿ ಬಂಟವಾಳ ಮಂಗಳೂರಿಗೆ ಬರುತ್ತಿತ್ತು. ನಿನ್ನೆಯ, ಮೊನ್ನೆಯ ಪತ್ರಿಕೆ ಇಂದು ಸಿಗುವುದು. ಅದು ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟದ ಕಾಲ. ಸಂಯುಕ್ತ ಕರ್ನಾಟಕ ರಂಗನಾಥ ರಾವ್ ದಿವಾಕರ, ಮೊಹರೆ ಹನುಮಂತರಾಯರವರಿಂದ ಪ್ರಕಾಶನಗೊಳ್ಳುತ್ತಿತ್ತು. ಸ್ವಾತಂತ್ರ್ಯ ಹೋರಾಟದ ವರದಿಗಳು ಹಾಗೂ 2ನೇ ಮಹಾಯುದ್ಧದ ಕಾಲದ ರೋಚಕ ಬಾತ್ಮಿಗಳು ಅದರಲ್ಲಿ ಒದಗುತ್ತಿದ್ದವು. ನನ್ನ ಅಜ್ಜ ವೆಂಕಟೇಶ ಶೆಣೈ ಹಾಗೂ ಅವರ ತಮ್ಮಂದಿರಾಗಿದ್ದ ಬಸ್ತಿ ಶ್ರೀನಿವಾಸ ಶೆಣೈ ಮುಂತಾದ ಹಿರಿಯರು ಬೆಳಿಗ್ಗೆ 11 ಗಂಟೆಗೆ ನಮ್ಮ ಹೋಟೆಲಿಗೆ ಬಂದು ಕಾಫಿ ತಿಂಡಿ ಮುಗಿಸಿ ಪತ್ರಿಕೆಯನ್ನು ಓದಲು ಕೈಗೆತ್ತಿಕೊಂಡರೆಂದರೆ ಪತ್ರಿಕೆಯ ಶೀರ್ಷಿಕೆಯಿಂದ ---------- ಮುದ್ರಿಸಲ್ಪಟ್ಟಿತ್ತು ಎನ್ನುವವರೆಗೆ ಒಂದೊಂದು ಗಂಟೆ ಕಾಲ ಪತ್ರಿಕೆಯನ್ನು ಓದಲು ತೆಗೆದುಕೊಳ್ಳುತ್ತಿದ್ದರು. ಆಗಿನ ಕಾಲದ ಮುದುಕರು ಶಾಲೆಗೆ ಹೋಗಿದ್ದರೊ ಎಂದು ಗೊತ್ತಿಲ್ಲ. ಆದರೆ ಖಂಡಿತವಾಗಿಯೂ ದೇಶದಲ್ಲಿ, ಪ್ರಪಂಚದಲ್ಲಿ ನಡೆಯುತ್ತಿದ್ದ ಮಹತ್ತರ ಘಟನೆಗಳ ಬಗ್ಗೆ, ಭೂಗೋಳದ ಬೇರೆ ಬೇರೆ ಖಂಡಗಳ ಅಸ್ತಿತ್ವದ ಬಗ್ಗೆ ಮುಖ್ಯವಾಗಿ ಗಾಂಧೀಜಿಯವರ ನೆಹರೂರವರ ವಿಚಾರಗಳ ಬಗ್ಗೆ ಸ್ಪಷ್ಟ ಧೋರಣೆಯಿಂದ ಚರ್ಚಿಸುತ್ತಿದ್ದರು ಎಂದು ನಾನು ಹೇಳಬಲ್ಲೆ. ಬ್ರಿಟಿಶ್ ಸರಕಾರದ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮವನ್ನು ಮೆಟ್ಟಿ ಹಾಕುವ ಧೋರಣೆಯಿಂದ ಸಂಯುಕ್ತ

ಕರ್ನಾಟಕ ಪತ್ರಿಕೆ ಮೇಲೆ ಮುಟ್ಟುಗೋಲು ಹಾಕಿದಾಗ ಅದು ಬೇರೆ ಬೇರೆ ಹೆಸರುಗಳಿಂದ ಪ್ರಕಟವಾಗಿ ಬರುತ್ತಿತ್ತು.

ಬಂಟವಾಳಕ್ಕೆ ದಿ ಹಿಂದೂ ಮತ್ತು ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಗಳೂ ಬರುತ್ತಿದ್ದವು. ನೈಜ ಹಾಗೂ ಅನುಪ್ರೇಕ್ಷಿತ ವರದಿಗಳಿಗೆ ಆಗಿನಿಂದಲೂ ಹೆಸರಾಗಿದ್ದ 'ದಿ ಹಿಂದೂ' ಪತ್ರಿಕೆಯನ್ನು ಅಂದಿನಿಂದ ಈಗಲೂ ನಾನು ಓದುತ್ತಲಿದ್ದೇನೆ. ಅದರ ರಾಷ್ಟ್ರೀಯ, ಉದಾರ ನೀತಿ ಧೋರಣೆಗಳಿಗೆ ನಾನು ಒಗ್ಗಿದ್ದೇನೆ. ಸ್ವಾಮೀ ವಿವೇಕಾನಂದ, ಮಹಾತ್ಮಾಗಾಂಧೀ, ಪಂ. ಜವಾಹರಲಾಲ್ ನೆಹರೂರವರ ಉದಾತ್ತ ವಿಚಾರಧಾರೆಗಳು, ಶಿವರಾಮ ಕಾರಂತರ ಕಾದಂಬರಿಗಳು ಮತ್ತು ದಿ ಹಿಂದೂ ಪತ್ರಿಕೆಯ ಓದು ನನ್ನ ವಿಚಾರಧಾರೆಗಳನ್ನು ರೂಪಿಸಿವೆಯೆಂದರೆ ತಪ್ಪಾಗಲಾರದು.

ಶಾಲಾದಿನಗಳು

ಶಾಲಾದಿನಗಳಲ್ಲಿ ದೇವಳದ ಶಾಲೆಗಳಲ್ಲಿ ನಮಗೆ ಉತ್ತಮ ಶಿಕ್ಷಣ ಸಿಗುತ್ತಿತ್ತು. ಅದರೊಂದಿಗೆ ಮಾನಸಿಕ, ಬೌದ್ಧಿಕ, ಸಾಮಾಜಿಕ ಜೀವನ ಕ್ರಮಗಳ ಬಗ್ಗೆ ತರಬೇತಿಯೂ ಒದಗಿಬರುತ್ತಿತ್ತು. ಕುದ್ಕಿ ಮಾಧವ ಶೆಣೈ, ಬಿ. ಮಾಧವ ಬಾಳಿಗಾ, ಪಾಂಡುರಂಗ ಬಾಳಿಗಾ, ಶ್ರೀಮತಿ ಸುಶೀಲಾ ಬಾಯಿ, ಜಿ. ರಘುನಾಥರಾವ್, ಬಿ. ವಾಸುದೇವ ಸೋಮಯಾಜಿ (ಡ್ರಿಲ್ ಮಾಸ್ತರ್) ಮುಂತಾದ ಶಿಕ್ಷಕ ವೇತ್ತರಿಂದ ನನ್ನ ವಿದ್ಯಾರ್ಥಿ ಜೀವನ ಸಂಪನ್ನವಾಯಿತು. ನಾನು ನನ್ನ ಇತರ ಚಟುವಟಿಕೆಗಳಿಂದಾಗಿ ಹೆಚ್ಚಿನ ಮಾರ್ಕುಗಳನ್ನು ಪಡೆಯುತ್ತಿರಲಿಲ್ಲವೆಂಬುದೇನೋ ನಿಜ. ಆದರೆ 6 ರಿಂದ 11 ನೇ ಕ್ಲಾಸ್ ಅಂದರೆ ಮೆಟ್ರಿಕ್ (ಆಗಿನ ಕಾಲದಲ್ಲಿ ಹೈಸ್ಕೂಲ್ ಶಿಕ್ಷಣ 6 ವರ್ಷಗಳು) ಪರೀಕ್ಷೆ ಪಾಸಾಗುವಾಗ ಒಬ್ಬ ಸುದೃಢ, ಯಾವ ಕಷ್ಟಕಾಲದಲ್ಲಿಯೂ ಅಥವಾ ಎಂತಹ ಆಹ್ವಾನಗಳು ಬಂದರೂ ಎದುರಿಸಲ್ಲು ಬೇಕಾದ ನೈತಿಕ, ಧೃಡತೆಯ ಮನೋಭೂಮಿಕೆ ಪಡೆದವನಾಗಿ ಶಾಲೆಯಿಂದ ಹೊರ ಬಿದ್ದಿದ್ದೆ.

ಅದಕ್ಕೆ ಪೂರಕವಾಗಿ ಆಗ ನಮ್ಮ ಹೈಸ್ಕೂಲಿನ ಹಳೇ ವಿದ್ಯಾರ್ಥಿ ಈಗ ಕನ್ನಡ ನಾಡಿನ ಸಾಹಿತ್ಯ ಕ್ಷೇತ್ರದಲ್ಲಿ ಹಿರಿಯ ಹೆಸರಾಗಿ ಪ್ರಸಿದ್ಧಿ ಪಡೆದಿರುವ ಶ್ರೀ ಪರ್ಯ ಲಕ್ಷ್ಮೀನಾರಾಯಣ ಆಳ್ವರು ಆಗಿನ ಕಾಲದಲ್ಲಿ ಅವರ ಸಂಗಡಿಗರಾಗಿದ್ದ ಜನಾರ್ಧನ ಶೆಟ್ಟಿ (ಜನ್ನ ಶೆಟ್ಟಿ) ನಾವೂರಿನ ಧರ್ಮಪಾಲ ಶೆಟ್ಟಿ (ನಂತರ ಅವರು ಜಿಲ್ಲಾ ಬೋರ್ಡ್ ಸದಸ್ಯರಾಗಿ ಕಾಂಗ್ರೆಸ್ ಪಕ್ಷದಿಂದ ಆರಿಸಿ ಬಂದಿದ್ದರು) ಮುಂತಾದವರೊಂದಿಗೆ ಹೈಸ್ಕೂಲಿಗೆ ಬಂದು ನಮಗಾಗಿ 'ಸಾಂಸ್ಕೃತಿಕ ಸಂಘ' ಎಂಬ ಸಂಘವನ್ನು ಕಟ್ಟಲು ನಮ್ಮನ್ನು ಪ್ರೇರೇಪಿಸಿದರು. ಅದರಿಂದಾಗಿ ನನಗೆ ಕನ್ನಡ ಸಾಹಿತ್ಯ ಓದುವ ಮತ್ತು ಲೇಖನ ಕತೆ ಇತ್ಯಾದಿಗಳನ್ನು ಬರೆಯುವ ತರಬೇತಿ ಸಿಕ್ಕಿತು. ಭಾಷಣ ಮಾಡುವ ಕಲೆಗೆ ಬುನಾದಿಯಾಯಿತೆನ್ನಬೇಕು. ಅಂದಿನಿಂದ ಇಂದಿನ ವರೇಗೂ ಶ್ರೀ ಆಳ್ವರು ನನಗೆ ಸಲಹೆ ಮಾರ್ಗದರ್ಶನ ಮಾಡಿ ಕೊಟ್ಟು ಹಲವಾರು ಸಾಹಿತ್ಯಿಕ, ಸಾಮಾಜಿಕ, ಧಾರ್ಮಿಕ ಕಾರ್ಯಗಳನ್ನು ಬಂಟವಾಳ ಮತ್ತು ಆಸುಪಾಸಿನಲ್ಲಿಯೂ ಮಾಡಿಸಿದ್ದಾರೆ. ಅವರನ್ನು ನಾನು ಗುರುಗಳು ಎಂದೇ ಈಗಲೂ ಸಂಬೋಧಿಸುವುದು.

ಶ್ರೀ ಏರ್ಯ ಲಕ್ಷ್ಮೀನಾರಾಯಣ ಆಳ್ವರ ಸಲಹೆಯಿಂದಾಗಿ ನಾನು ಬಹುಶಃ 9ನೇ ಕ್ಲಾಸಿನಲ್ಲಿರುವಾಗಲೇ ನನ್ನ ನಿಕಟವರ್ತಿಯಾಗಿ ಗಳಸ್ಯ ಕಂಠಸ್ಯರಾಗಿದ್ದ ಶ್ರೀ ಬಿ. ಸರ್ವೋತ್ತಮ ಭಂಡಾರಿಯವರ ಸಹಸಂಪಾದಕತ್ವದಲ್ಲಿ 'ಶಶಿಕಿರಣ' ಎಂಬ ಕನ್ನಡ ಕೈಬರಹದ ಮಾಸಿಕ ಪತ್ರಿಕೆಯನ್ನು ಶಾಲಾ ವಿದ್ಯಾರ್ಥಿಗಳಿಗಾಗಿ ಪ್ರಕಟಿಸುತ್ತಿದ್ದೆವು. ಕತೆ ಲೇಖನಗಳ ಸಂಗ್ರಹ ಕಾರ್ಯವನ್ನು ನಾನು ಮಾಡುತ್ತಿದ್ದರೆ, ಸರ್ವೋತ್ತಮ ಭಂಡಾರಿಯವರ ಸುಂದರ ಕೈಬರಹಗಳಿಂದಾಗಿ ಮತ್ತು ವರ್ಣಚಿತ್ರಗಳಿಂದಾಗಿ 'ಶಶಿಕಿರಣ' ಆಕರ್ಷಣೀಯವಾಗಿ ಹೊರಬರುತ್ತಿತ್ತು. ಶಶಿಕಿರಣದಲ್ಲಿ ಚಕ್ರಬಂಧ, ಕವನ, ಲೇಖನ, ಸಣ್ಣಕತೆ, ನಗೆ ಬರಹ, ಚುಟುಕುಗಳು ನಮ್ಮ ವಿದ್ಯಾರ್ಥಿಗಳಿಂದ ರಾಶಿರಾಶಿಯಾಗಿ ಬರುತ್ತಿದ್ದವು ಅಷ್ಟು ಜನಪ್ರಿಯ ಪತ್ರಿಕೆಯಾಗಿ ಹೊರಹೊಮ್ಮಿತ್ತು ಶಶಿಕಿರಣ. ಶಾಲಾ ಉಪಾಧ್ಯಾಯರುಗಳೂ, ಊರಿನ ಹಿರಿಯರು ಕೂಡಾ ಶಶಿಕಿರಣವನ್ನು ತಮ್ಮ ಮಕ್ಕಳಿಂದ ಮನೆಗೆ ತರಿಸಿಕೊಂಡು ಓದಿ ಮೆಚ್ಚುಗೆ ಸೂಚಿಸುತ್ತಿದ್ದರು. ಆಗಿನ ದಿನಗಳಲ್ಲಿ ಬಂಟ್ವಾಳದ ಲೋಕಲ್ ಆಸ್ಪತ್ರೆಯ ವೈದ್ಯಾಧಿಕಾರಿಗಳಾಗಿದ್ದ ಡಾ. ಮೂಲ್ಕಿ ರಾಮಣ್ಣ ಶೆಟ್ಟಿ (ಅವರು ಬಂಟವಾಳ ತಾಲೂಕಿನಲ್ಲಿಯೇ ಜನಾನುರಾಗಿ ವೈದ್ಯಾಧಿಕಾರಿಗಳಾಗಿದ್ದರು ಅಲ್ಲದೇ ಅವರು ಭಾರತ ದೇಶದಲ್ಲಿಯೇ ತಾಂತ್ರಿಕ ಶಿಕ್ಷಣದ ಹೆಸರುವಾಸಿ ಕುಲಪತಿಗಳಾಗಿರುವ ಡಾ. ಎನ್. ರಮಾನಂದ ಶೆಟ್ಟಿಯವರ ತಂದೆ) ಅವರೊಮ್ಮೆ ಶಶಿಕಿರಣದಲ್ಲಿ ಬಂದ ಚಕ್ರಬಂಧವನ್ನು ನೋಡಿ ಅದರಲ್ಲಿ ಸ್ಪರ್ಧೆಯನ್ನು ಏರ್ಪಡಿಸಲು ಹೇಳಿ ವಿಜೇತರಿಗೆ ರೂ. 5/-ನ್ನು ಪಾರಿತೋಷಕವಾಗಿ ಇನಾಮು ಕೊಡಲು ತಾವೇ ಮುಂದಾಗಿ ಬಂದಿದ್ದರು.

ನಮ್ಮ ತಂದೆಯವರು ಹೋಟೆಲಿಗಾಗಿ ತಂದ 'ಜೆನಿತ್' (Zenith) ರೇಡಿಯೊದಲ್ಲಿ ಬರುವ ಸೈಗಲ, ಪಂಕಜ ಮಲ್ಲಿಕ, ನಂತರ ಜನಪ್ರಿಯ ಗಾಯಕರಾಗಿ ಮೂಡಿಬಂದ ಮುಖೇಶ್, ಮಹಮ್ಮದ್ ರಫಿ, ಕಿಶೋರ ಕುಮಾರ, ಹೇಮಂತ ಕುಮಾರ, ಮನ್ನಾಡೇ ಮುಂತಾದವರ ಹಾಡುಗಳನ್ನು ಅಲ್ಲದೇ ಪಂಡಿತ ಭೀಮಸೇನ ಜೋಶಿ, ಉಸ್ತಾದ ಬಡೇ ಗುಲಾಂ ಅಲಿ ಖಾನ, ಪಂ. ಓಂಕಾರನಾಥ ಠಾಕೂರ, ಶ್ರೀಮತಿ ಸುಬ್ಬುಲಕ್ಷ್ಮೀಯವರ ಶಾಸ್ತ್ರೀಯ ಸಂಗೀತ ಕಾರ್ಯಕ್ರಮಗಳನ್ನು ಕೇಳುತ್ತು ಕೇಳುತ ನಾನು ಹಾಡಲು ಶುರು ಮಾಡಿದ್ದೆ. ಶಾಲಾ ವಾರ್ಷಿಕೋತ್ಸವಗಳಲ್ಲಿ ನಡೆಯುವ ಸಂಗೀತ ಸ್ಪರ್ಧೆಗಳಲ್ಲಿ ಮತ್ತು ನಾಟಕಗಳಲ್ಲಿ ನಾಯಕ ನಟನಾಗಿ ಮಾತ್ರವಲ್ಲ ಒಬ್ಬ ಗಾಯಕನಾಗಿಯೂ ಆರಿಸಲ್ಪಡುತ್ತಿದ್ದೆ. ಅಂದಿನ ಸಿನೇಮಾ ಹಾಡುಗಳನ್ನು ಈಗಲೂ ನಾನು ಯಾವಾಗಲೂ ಗುಣಗುಣಿಸುತ್ತಿರುವುದನ್ನು ಕೇಳಿ ಮನೆಯಲ್ಲಿ ನನ್ನ ಮೊಮ್ಮಗಳು ತುಳಸಿ 'ಎನಜ್ಜಾ ನಿನಗೆ ಹಾಡು ಹೇಳದೇ ಇರಲಿಕ್ಕಾಗುವುದಿಲ್ಲವೊ?' ಎಂದು ಕೇಳುವುದುಂಟು.

ಅಂತೂ ಶಾಲಾ ದಿನಗಳಲ್ಲಿಯೇ ನನಗೆ ನಾಟಕ, ಸಂಗೀತ, ಸಾಹಿತ್ಯ ಮತ್ತು ಬರವಣಿಗೆಗಳಲ್ಲಿಯೂ ನಮ್ಮ ಉಪಾಧ್ಯಾಯರುಗಳಿಂದ ಭರಪೂರ ತರಬೇತಿ ಸಿಕ್ಕಿದುದಲ್ಲದೇ, ಊರ ಹಿರಿಯರಿಂದ ಉತ್ತಮ ಮಾರ್ಗದರ್ಶನ, ಪ್ರೋತ್ಸಾಹಗಳ ಮಹಾಪೂರವೇ

ಹರಿದುಬಂದುದರಿಂದ ನನ್ನ ಮಾತೃಸಂಸ್ಥೆ ಎಸ್.ವಿ.ಎಸ್. ಹೈಸ್ಕೂಲಿನಲ್ಲಿ ಶಿಕ್ಷಣ ಹೊಂದಿ ನಾನೊಬ್ಬ ಮರಿ ಕಲಾವಿದ ಸಾಹಿತಿಯಾಗಿಯೇ ಹೊರಬಂದಿದ್ದೆಯೆಂದು ನಾನು ಹೇಳಿಕೊಳ್ಳುವುದಿದೆ.

ಹಳೇ ವಿದ್ಯಾರ್ಥಿಯಾಗಿಯೂ ಹಲವು ವರ್ಷಗಳ ಕಾಲ ನಾಟಕಗಳಲ್ಲಿ ನಟನಾಗಿ, ನಿರ್ದೇಶಕನಾಗಿ, ಸಂಘಟಕನಾಗಿ, ಶಾಲೆಯ ಸಾಮಾಜಿಕ, ಸಾಂಸ್ಕೃತಿಕ ಸಾಹಿತ್ಯಿಕ ಕೆಲಸಗಳಲ್ಲಿ ಅತೀ ಹತ್ತಿರದ ಸಂಬಂಧವನ್ನಿಟ್ಟುಕೊಂಡಿದ್ದೆ. ಬಳಿಕ ಎಸ್.ವಿ.ಎಸ್. ಹೈಸ್ಕೂಲ್ ಹಳೇ ವಿದ್ಯಾರ್ಥಿ ಸಂಘ ಸ್ಥಾಪನೆಯಾದಾಗ ಅಧ್ಯಕ್ಷನಾಗಿ ಮಾತೃಸಂಸ್ಥೆಯ ಸಂಪರ್ಕವನ್ನಿಟ್ಟಿದ್ದೆ.

ಮುಂದೆ ಕೆಲವು ವರ್ಷಗಳ ಬಳಿಕ ಶಾಲಾ ಆಡಳಿತ ಮಂಡಳಿಯ ಸದಸ್ಯನಾಗಿ ನಂತರ 1977-78 ಇಸವಿಯಲ್ಲಿ ಹತ್ತು-ಹನ್ನೊಂದು ತಿಂಗಳ ಕಾಲ (ನಾನು ಬಂಟವಾಳ ಸಿಂಡಿಕೇಟ್ ಬ್ಯಾಂಕ್ ಮೆನೇಜರ್ ಆಗಿದ್ದ ಅವಧಿಯಲ್ಲಿ) ಶಾಲಾ ಕರಸ್ಪೊಂಡೆಂಟ್ ಆಗಿಯೂ ಕಾರ್ಯ ನಿರ್ವಹಿಸಿದ್ದೆ. ಆ 10-11 ತಿಂಗಳ ಅವಧಿಯಲ್ಲಿಯೇ ಶಾಲೆಯ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಶಾಲಾ ಉಪಾಧ್ಯಾಯರುಗಳ ಸಲಹೆಯಂತೆ ವಿಸ್ತಾರವಾದ 3 ಶಾಲಾ ಕೊಠಡಿಗಳನ್ನು ಮತ್ತು ಮೇಲಂತಸ್ತಿನಲ್ಲಿ ಒಂದು ಬೃಹತ್ ವಾಚನಾಲಯ (Library) ಯನ್ನು ಊರುಪರವೂರುಗಳಲ್ಲಿ ವಾಸಿಸುತ್ತಿದ್ದ ಹಳೇ ವಿದ್ಯಾರ್ಥಿಗಳ ನೆರವಿನಿಂದ ಕಟ್ಟಿಸಿದೆ. ಇದು ಬಹುಶಃ ನನ್ನ ಮಾತೃಸಂಸ್ಥೆಗೆ ನಾನು ಕಿರಿದಾಗಿ ಋಣ ಸಂದಾಯ ಮಾಡಿದ ಕೃತಜ್ಞತಾಭಾವದಿಂದ ಹೇಳುತ್ತಲಿದ್ದೇನೆ.

ಶ್ರೀ ಯಶವಂತ ವ್ಯಾಯಾಮ ಶಾಲೆ

1939 ಇಸವಿ ಜೂನ್ ತಿಂಗಳಲ್ಲಿ ಬಂಟವಾಳದ ನಮ್ಮ ಹಿರಿಯರು ಬಂಟವಾಳದ ಎಳೆಯರಿಗೆ ಮತ್ತು ಯುವಕರಿಗೆ ದೇಶೀಯ ಪದ್ಧತಿಯ ವ್ಯಾಯಾಮ ಶಿಕ್ಷಣ ಮತ್ತು ಶಿಸ್ತು ಸಂಯಮಗಳ ಬಗ್ಗೆ ತಿಳುವಳಿಕೆ, ದೈಹಿಕ ಆರೋಗ್ಯ ಮತ್ತು ಮಾನಸಿಕ ದೃಢತೆ ಸಿಗಬೇಕೆಂಬ ಮಹತ್ ಉದ್ದೇಶಗಳಿಂದ ಶ್ರೀ ಯಶವಂತ ವ್ಯಾಯಾಮ ಶಾಲೆಯನ್ನು ಪ್ರಾರಂಭಿಸಿದರು. ಮೊದಲು ಶಾಲೆಯಲ್ಲಿ ಡ್ರಿಲ್ ಮಾಸ್ತರರಾಗಿದ್ದ ಜೆ.ವಾಸುದೇವ ಪೈಗಳವರು ಇಲ್ಲಿಯೂ ಶಿಕ್ಷಕರಾಗಿದ್ದರು. ಬಳಿಕ ಬರೋಡಾ ರಾಜ್ಯದ ಜುಮ್ಮಾದಾದಾ ವ್ಯಾಯಾಮ ಶಾಲೆಯಲ್ಲಿ ಉನ್ನತ ವ್ಯಾಯಾಮ ಶಿಕ್ಷಣ ಪಡೆದು ಮಂಗಳೂರಿಗೆ ಹಿಂತಿರುಗಿದ ಶ್ರೀ ಯು. ವಾಸುದೇವ ಕಿಣಿಯವರು ಮಂಗಳೂರಿನಿಂದ ಬಂಟವಾಳಕ್ಕೆ ವಾರಕ್ಕೆ ಎರಡಾವರ್ತಿ ಬಂದು ಹಿರಿಯ ವಿದ್ಯಾರ್ಥಿಗಳಿಗೆ ಕತ್ತಿ ವರಸೆ, ಖಡ್ಗ ಯುದ್ಧ, ಭಾಲಾ, ಬರ್ಜಿ, ಲಾಠಿ, ಮಲ್ಲಯುದ್ಧ ವಿದ್ಯೆ ಮತ್ತು ಮುಖ್ಯವಾಗಿ ಸಂಸ್ಥೆಗೆ ಹೆಸರು ತಂದ 'ಮಲ್ಲಕಂಭ' ಮತ್ತು ಯೋಗಾಸನಗಳ ಬಗ್ಗೆ ವ್ಯಾಯಾಮ ತರಬೇತಿ ಕೊಡಲು ಪ್ರಾರಂಭಿಸಿದರು. ಅವರನ್ನು ನಾವು ವ್ಯಾಯಾಮ ಶಾಲೆಯ ಸ್ಥಾಪಕರಲ್ಲೊಬ್ಬರೆಂದು ನಮಿಸುತ್ತೇವೆ. ಮತ್ತು 1989 ರ ವ್ಯಾಯಾಮ ಶಾಲೆಯ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ನಾನು ಅಧ್ಯಕ್ಷನಾಗಿದ್ದ ಸಮಯದಲ್ಲಿ ಅವರ ಹೆಸರಿನಲ್ಲಿ

ವ್ಯಾಯಾಮ ಶಾಲೆಗೆ ಒಂದು ಸಭಾಮಂಟಪವನ್ನು ಕಟ್ಟಿಸಿದ್ದೆ. ವ್ಯಾಯಾಮ ಶಾಲೆಯ ಮೇಲೆ ವಿಶೇಷ ಅಭಿಮಾನವಿರುವ ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆಯವರು ಮಾಡಿಗೆ ಅವಶ್ಯವಿದ್ದ ಉಕ್ಕಿನ ಎಲ್ಲಾ ಟ್ರೆಸಸ್‌ಗಳನ್ನು ತುಂಬಾ ಖುಷಿಯಿಂದ ದಾನ ಮಾಡಿದ್ದರು.

ನಾನು 4-5 ಕ್ಲಾಸಿನಲ್ಲಿರುವಾಗಲೇ ಅಂದರೆ ನನ್ನ 11 ನೇ ವರ್ಷ ಬಾಲ್ಯದಿಂದಲೇ ವ್ಯಾಯಾಮ ಶಾಲೆಯ ತರಗತಿಗಳಿಗೆ ಹೋಗುತ್ತಿದ್ದೆ. ವ್ಯಾಯಾಮ ಶಾಲೆಯ ವಿದ್ಯಾರ್ಥಿಗಳು ದೇಶಾದ್ಯಂತ 'ಮಲ್ಲಕಂಭ ಪ್ರದರ್ಶನ' ಕೊಟ್ಟು ಹೆಸರುಗಳಿಸಿದ್ದಾರೆ. 1944 ರಿಂದಲೇ ಮೈಸೂರು, ಮದ್ರಾಸ್, ಮಡಿಕೇರಿ, ಕೊಚ್ಚಿ ರಾಜರುಗಳ ಸಂಸ್ಥಾನಗಳಲ್ಲಿ ವ್ಯಾಯಾಮ ಪ್ರದರ್ಶನ ಮತ್ತು ಮಲ್ಲಕಂಭ ಪ್ರದರ್ಶನ ಕೊಟ್ಟು ಬಂದಿದ್ದರು ಅಲ್ಲದೇ ಕರ್ನಾಟಕದ ಎಲ್ಲಾ ಪ್ರಮುಖ ಪಟ್ಟಣಗಳಲ್ಲಿಯೂ ಅಲ್ಲಲ್ಲಿಯ ಜನರ ಬೇಡಿಕೆಯಂತೆ ಮಲ್ಲಕಂಭ ಪ್ರದರ್ಶನ ಕೊಟ್ಟು ಜನಮನ್ನಣೆ ಗಳಿಸಿರುತ್ತಾರೆ. ಅದರಿಂದ ಬಂಟವಾಳ ಪೇಟೆಗೂ ಹೆಸರು ಬಂದಿದೆ.

ಮುಂದೆ 1980 ದಶಕದಲ್ಲಿ ನಾನು ಅಧ್ಯಕ್ಷನಾದ ಮೇಲೆ ವ್ಯಾಯಾಮ ಶಾಲೆಯಲ್ಲಿ ಯೋಗಾಸನ ತರಬೇತಿ, ಧಾರ್ಮಿಕ ಸಾಂಸ್ಕೃತಿಕ ಕಾರ್ಯಕ್ರಮಗಳ ಒಟ್ಟಿಗೆ ಜನಸಾಮಾನ್ಯ ವೈದ್ಯಕೀಯ ನೆರವು ನೀಡಲು ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ವೈದ್ಯರ ತಂಡದಿಂದ ಪ್ರತೀ ಗುರುವಾರ ಶಿಬಿರಗಳನ್ನು ಏರ್ಪಡಿಸಲಾಗುತ್ತದೆ.

1944ರಲ್ಲಿ ಮುಲ್ಕಿಯಲ್ಲಿ ಕಾಶೀಮಠದ ಗುರುಗಳಾಗಿದ್ದ ಶ್ರೀ ಸುಕೃತೀಂದ್ರ ತೀರ್ಥ ಸ್ವಾಮೀಜಿಯವರು ಶ್ರೀ ಸುಧೀಂಧ್ರತೀರ್ಥರನ್ನು ಶಿಷ್ಯರನ್ನಾಗಿ ಸ್ವೀಕರಿಸುವ ಸಂದರ್ಭದಲ್ಲಿ ನಮ್ಮ ವ್ಯಾಯಾಮ ಶಾಲೆಯಿಂದ ನಾವು ಸುಮಾರು 100 ಮಕ್ಕಳು, ಯುವಕರು ದೋಣಿಗಳಲ್ಲಿ ಪ್ರಯಾಣ ಮಾಡಿ ಮುಲ್ಕಿಗೆ ಹೋಗಿ ಅಲ್ಲಿ ವ್ಯಾಯಾಮ ಪ್ರದರ್ಶನ ನೀಡಿದ್ದೆವು. ನಂತರ 1989 ರಲ್ಲಿ ಶ್ರೀ ಸುಧೀಂಧ್ರತೀರ್ಥ ಸ್ವಾಮೀಜಿಯವರು ಶ್ರೀ ಕಾಶಿ ಕ್ಷೇತ್ರದಲ್ಲಿ ಶಿಷ್ಯನನ್ನು ಸ್ವೀಕಾರ ಮಾಡುವ ಸಮಾರಂಭಕ್ಕೂ ನಾವು ವ್ಯಾಯಾಮ ಶಾಲೆಯ ತಂಡವನ್ನು ಕೊಂಡುಹೋಗಿ ಮಲ್ಲಕಂಭ ಇತ್ಯಾದಿ ಪ್ರದರ್ಶನ ಕೊಟ್ಟು ನಂತರ ದೆಹಲಿಗೆ ತೆರಳಿ ಅಲ್ಲಿಯೂ ಪ್ರದರ್ಶನ ನೀಡಿ ಬಂದಿದ್ದೆವು.

ಅಲ್ಲದೇ ರಾಷ್ಟ್ರದ ಸ್ವಾತಂತ್ರ್ಯ ಚಳುವಳದಲ್ಲಿ ಭಾಗಿಯಾಗುವ ಯುವಕರನ್ನು ಇಲ್ಲಿ ತರಬೇತು ಗೊಳಿಸಲಾಗುತ್ತಿತ್ತು. ಅದರಿಂದಾಗಿ ಬ್ರಿಟಿಷ್ ಸರಕಾರದ ಕಾಲದಲ್ಲಿ ಪೋಲೀಸರು 2-3 ಬಾರಿ ವ್ಯಾಯಾಮ ಶಾಲೆಗೆ ದಾಳಿ ಮಾಡಿದ್ದರು. ಅಲ್ಲದೇ ಹಲವಾರು ಯುವಕರು 1942ರ ಕ್ವಿಟ್ ಇಂಡಿಯಾ ಚಳವಳದ ಸಮಯದಲ್ಲಿ ಜೈಲಿಗೆ ಹೋಗಿದ್ದರು ಮತ್ತೆ ಕೆಲವರು ತಂತಿ ಸರಿಗೆಗಳನ್ನು ಕತ್ತರಿಸುವುದು ಪೋಲಿಸ್ ಠಾಣೆಯ ಮೇಲೆ ದಾಳಿಮಾಡುವ ಕಾರ್ಯ ಕೈಗೊಂಡು ಭೂಗತರಾಗಿದ್ದರು.

ಅಲ್ಲದೆ 1987ರಲ್ಲಿ ತುಳುನಾಡ ಕೇಸರಿ ಕುಸ್ತಿ ಪಂದ್ಯಾಟಗಳನ್ನು 198‾ ಇಲ್ಲಿ ದ.ಕ. ಜಿಲ್ಲಾ ಕುಸ್ತಿ ಸಂಘದ ಅಧ್ಯಕ್ಷ ಹೆಸರಾಂತ ಕುಸ್ತಿ ಪಟು ಮಾಜಿ ಎಂ.ಎಲ್. ಎ. ಶ್ರೀ ಎಮ್. ಲೋಕಯ್ಯ ಶೆಟ್ಟಿ, ನಗರ ನಾರಾಯಣ ಶೆಣೈ ಮತ್ತು ಶ್ರೀ ಸಂಜೀವ ಶೆಟ್ಟಿಯವರು ಬಂಟವಾಳದಲ್ಲಿ ಆ ವರ್ಷದ 'ತುಳುನಾಡ ಕೇಸರಿ' ಕುಸ್ತಿ ಪಂದ್ಯಾಟಗಳನ್ನು ಏರ್ಪಡಿಸುವಂತೆ ಕೇಳಿಕೊಂಡರು. ನಾನು ಕೂಡಲೇ 'ಸೈ' ಎಂದು ಹೇಳಿ ಶ್ರೀ ಯಶವಂತ ವ್ಯಾಯಾಮ ಶಾಲೆಯ ವತಿಯಿಂದ 3 ದಿನಗಳ ಕಾಲ ಬಂಟವಾಳದಲ್ಲಿ ಕುಸ್ತಿ ಪಂದ್ಯಾಟಗಳನ್ನು ಜರಗಿಸಲು ಒಪ್ಪಿಕೊಂಡೆ. ಆ ಕಾರ್ಯಕ್ರಮ ಬಹು ದೊಡ್ಡ ಪ್ರಮಾಣದಲ್ಲಿ ಜರಗಿತು. ಸುಮಾರು 560 ಮಲ್ಲರು ಬಂದು ಉತ್ಸಾಹದಿಂದ ಮತ್ತು ಶಾಂತತೆ ಕಾಪಾಡಿಕೊಂಡು ಭಾಗವಹಿಸಿದ್ದರು. ಈ ಕಾರ್ಯಕ್ರಮದ ಬಗ್ಗೆ ಏರ್ಪಡಿಸಿದ ಸಮಿತಿಯ ಗೌರವ ಅಧ್ಯಕ್ಷರಾಗಿ ಶ್ರೀ ಕೆ. ಕೆ. ಪೈಯವರು ನಮ್ಮೊಡನಿದ್ದು ಪ್ರೋತ್ಸಾಹಿಸಿದ್ದರು. ಬಂಟವಾಳ ಶಾಸಕ ಶ್ರೀ ಬಿ. ರಮಾನಾಥ ರೈ, ಸಾಮಾಜಿಕ ಮುಂದಾಳು ಶ್ರೀ ಬರಂಗರೆ ಸದಾನಂದ ಪೂಂಜಾ ಮುಂತಾದವರು ನಮ್ಮ ಕೆಲಸ ಕಾರ್ಯಗಳಲ್ಲಿ ತುಂಬು ಹೃದಯದ ಸಹಾಯ ಮಾಡಿದರು.

ಅದೇ ವರ್ಷ ದ.ಕ. ಜಿಲ್ಲಾ ತುಳು ಕೂಟದ ಅಧ್ಯಕ್ಷರಾಗಿದ್ದ ನನ್ನ ಮಿತ್ರ ಶ್ರೀ ಎ.ಸಿ. ಭಂಡಾರಿಯವರು ಬಂಟವಾಳದಲ್ಲಿ ತುಳುಕೂಟದ ಶಾಖೆಯನ್ನು ಪ್ರಾರಂಭ ಮಾಡಬೇಕೆಂದು ಹೇಳಿದಾಗ ನಾವು ಕೆಲವರು ಕೂಡಿ ತುಳು ಭಾಷೆಯ ಮೇಲಿನ ಅಭಿಮಾನದಿಂದ ತುಳುಕೂಟವನ್ನು ಪ್ರಾರಂಭಿಸಿವು. 1922ರಲ್ಲಿ ಪ್ರಥಮ ತುಳು ಯಕ್ಷಗಾನ ತಾಳಮದ್ದಳೆ ಬಂಟವಾಳದಲ್ಲಿಯೇ ಜರಗಿತು. ಹಾಗಾಗಿ ಕನ್ನಡ-ತುಳು-ಕೊಂಕಣಿ ಭಾಷೆಗಳ ಕಾರ್ಯಕ್ರಮಗಳಿಗೆ ಎಂದಿನಿಂದಲೂ ಪ್ರೋತ್ಸಾಹಿಸುವ ಬಂಟವಾಳದಲ್ಲಿ ಸಹಜವಾಗಿ ತುಳಗು ಕೂಟ ಸ್ಥಾಪನೆಗೆ ಎಲ್ಲರಿಂದಲೂ ಸಹಕಾರ ಸಿಕ್ಕಿತು.

ನನ್ನ ಸಹಪಾಠಿಗಳು

ಶಾಲಾದಿನಗಳಲ್ಲಿ ಕೆಲವು ನನಗೆ ಅತೀ ಆತ್ಮೀಯ ಸಹಪಾಠಿಗಳು ಸಿಕ್ಕಿದರು. ಅವರುಗಳನ್ನು ಇಂದಿಗೂ ಮರೆಯಲಾಗದಷ್ಟು ನನ್ನ ಜೀವನದ ಒಂದು ಅಂಗವಾಗಿಯೇ ನನ್ನೊಂದಿಗೆ ಬೆಳೆದರು. ನಾವು ಒಬ್ಬರನ್ನೊಬ್ಬರು ಪರಸ್ಪರ ಅರಿತುಕೊಂಡು ಬೆಳೆದವು. ಆಟಪಾಠಗಳಲ್ಲಿಯೂ, ಪಠ್ಯೇತರ ಚಟುವಟಿಕೆಗಳಲ್ಲಿಯೂ ಒಂದಾಗಿದ್ದೆವು. ದಿ. ಅಚ್ಯುತ ಪೈಗಳ (ಗಾಬ್ಬೊ ಅಚ್ಯುತ ಪೈ) ಮಗ ಪದ್ಮನಾಭ. ಅವರ ಮನೆ ನನ್ನ ಮನೆಯ ಹತ್ತಿರವೇ ಇತ್ತು. ಹೀಗಾಗಿ ಶಾಲೆಯಲ್ಲಿಯೂ, ಆಟದ ಮೈದಾನದಲ್ಲಿಯೂ ನೇತ್ರಾವತಿ ನದಿಯಲ್ಲಿಯೂ ಒಟ್ಟಿಗೆ ಮೀಯುತಲಿದ್ದೆವು. ದುರ್ದೈವದಿಂದ ಬಂಟವಾಳ ರಥೋತ್ಸವದ ಸಮಯದಲ್ಲಿಯೇ ರಾತ್ರಿ ಆಟವಾಡುತ್ತವಾಡುತ್ತ ತೇರಿನಿಂದ ಜಿಗಿದಾಗ ಮಾರ್ಗದಲ್ಲಿ ಹೋಗುತ್ತಿದ್ದ ಲಾರಿ ಅವನ ಕಾಲ ಮೇಲೆ ಹರಿದು, ಅವನ ಕಾಲನ್ನು ಕತ್ತರಿಸಬೇಕಾಗಿ ಬಂತು. ಆ ದಿನಗಳಲ್ಲಿ ಪೆನ್ಸಿಲಿನ್ ಮುಂತಾದ ಎಂಟಿಬಾಯಟಿಕ್ಸ್‌ಗಳ ಶೋಧನೆಯಾಗಿರದ್ದರಿಂದ ಅವು ಲಭ್ಯವಿರಲಿಲ್ಲ.

ಅವನಿಗೆ ಮಂಗಳೂರಿಗೆ ಕೊಂಡು ಹೋಗಿ ಕಾಲನ್ನು ಕತ್ತರಿಸಬೇಕಾಗಿ ಬಂತು. ಸ್ವಲ್ಪ ಗುಣವಾದ ಮೇಲೆ ಮದ್ರಾಸಿಗೂ ಕೊಂಡು ಹೋಗಿ ತೋರಿಸಿಕೊಂಡು ಅವನ ಅಣ್ಣ ಸುಬ್ರಾಯ ಪೈ (ಅವರು ಶಾಲೆಯಲ್ಲಿ ನಮಗೆ ಮಾಸ್ತರರಾಗಿದ್ದರು) ಬಂದಿದ್ದರು. ಆದರೆ ಅವನು ಮುಂದೆ ಈ ಊನವನ್ನು ತೋರಿಸಿಕೊಡುತ್ತಿರಲಿಲ್ಲ. ಅವನಿಗೆ ಕಂಕುಳಲ್ಲಿ ಊರಿ ಮೈಭಾರ ಹಾಕಿ ನಡೆಯಲು ಸಹಾಯ ಮಾಡಲು 'ಹಂಸಪಾದ' ಎಂಬುದನ್ನು ಮಾಡಿಕೊಟ್ಟಿದ್ದರು. ಅವನು ನನ್ನೊಟ್ಟಿಗೆ ಹಿಂದಿನ ದಿನಗಳಂತೆಯೇ ಮೀಯಲು ಈಜಲು ಬರುತ್ತಿದ್ದ. ಅವನು ನನ್ನೊಂದಿಗೆ ಸೈಕಲು ಬಿಡಲೂ ಕಲಿತ. ಬೆಡ್‌ಮಿಂಟನ್, ಶಟಲ್‌ಕಾಕ್, ಟೇಬಲ ಟೆನ್ನಿಸ್ (ಆಗ ಪಿಂಗಪೊಂಗ ಎಂದೇ ಕರೆಯುವ ವಾಡಿಕೆ) ಆಡುತ್ತಿದ್ದೆವು. ಅವನು ಇಂತಹ ಕ್ರೀಡೆಗಳಲ್ಲದೇ ಕಲಿಯುವುದರಲ್ಲೂ ಬಹಳ ಮುಂದಿದ್ದ. ಶಾಲೆಯಲ್ಲಿ ಕಲಿಯುವಾಗಲೇ ಅವನ ಇಂಗ್ಲೀಷ್ ಮೇಲ್ಮಟ್ಟದ್ದಾಗಿತ್ತು. ಮುಂದೆ ಮದ್ರಾಸ್‌ನಲ್ಲಿ ಪ್ರಖ್ಯಾತ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಪ್ರೊಫೆಸರಾಗಿದ್ದ ಅವನ ಅಣ್ಣ ಡಾ. ಬಿ. ರಾಮ ಪೈಯವರು ಅವನನ್ನು ಮದ್ರಾಸಿಗೆ ಕರೆಸಿ ಲೊಯೆಲಾ ಕಾಲೇಜ್ ಮತ್ತು ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಕಲಿಸಿದರು. ಅವನು ನನಗೆ ಇಂಗ್ಲೀಷಿನಲ್ಲಿಯೇ ಪತ್ರ ಬರೆದು ನನಗೆ ಕಲಿಕೆಯಲ್ಲಿ ಮತ್ತು ಉತ್ತಮ ಇಂಗ್ಲೀಷ್ ಸಾಹಿತ್ಯ ಓದಲು ಪ್ರೇರೆಪಿಸುತ್ತಿದ್ದ. ಇದರಿಂದಾಗಿ ನನಗೆ ಶೇಕ್ಸಪಿಯರ್ ನಾಟಕಗಳು, ಸಾಮರಸೆಟ ಮೋಮ ಕಾದಂಬರಿಗಳು ಮತ್ತು ಪಂ. ಜವಾಹರಲಾಲ ನೆಹರೂರವರ ಡಿಸ್ಕವರಿ ಆಫ್ ಇಂಡಿಯಾ ಮುಂತಾದ ಜಗತ್ಪ್ರಸಿದ್ಧ ಸಾಹಿತ್ಯವನ್ನು ಓದುವ ಅಭಿರುಚಿ ಉಂಟಾಯಿತು.

ಮುಂದೆ ಪದ್ಮನಾಭ ಕಾಶ್ಮೀರದಲ್ಲಿ ಮಂತ್ರಿಗಳಾಗಿದ್ದ ಕೌಶಿಕ ಬಕುಲಾರವರ ಸ್ನೇಹ ಸಂಪಾದಿಸಿದ. ಅವರು ಅವನನ್ನು ಅಮೇರಿಕಾಕ್ಕೆ ಹೋಗಲು ಸಹಾಯ ಮಾಡಿದರು. ಅಲ್ಲಿ ಅವನು ಮುಂದೆ ಅಂತರಾಷ್ಟ್ರೀಯ ಆರ್ಥಿಕ ವ್ಯವಹಾರವನ್ನು ಕೈಗೊಂಡು ಶ್ರೀಮಂತನಾದ. 'ಶಿಕಾಗೊ'ನಲ್ಲಿರುವ ಜಗತ್ತಿನ ಅತೀ ಮಾನ್ಯರ ಶ್ರೀಮಂತರ ಮನೆಗಳಿರುವ 'ಬೆವರ್ಲಿ ಹಿಲ್ಸ'ನಲ್ಲಿ (ಮುಂಬಯಿಯ ಮಲಬಾರ್ ಹಿಲ್ಸ್ ಇದ್ದಂತೆ) ಮನೆಮಾಡಿ ವಾಸ ಮಾಡುವಷ್ಟು ಶ್ರೀಮಂತನಾದ. ಬಂಟವಾಳಕ್ಕೆ ಅವನು ಬಂದಾಗ್ಗೆ ನಾವು ತಪ್ಪದೇ ಭೇಟಿಯಾಗುತ್ತಿದ್ದೆವು. ಬಾಲ್ಯದ ದಿನಗಳನ್ನು ಮೆಲುಕು ಹಾಕುತ್ತಿದ್ದೆವು. ನಾನು ಸಿಂಡಿಕೇಟ್ ಬ್ಯಾಂಕ್ ಮೆನೇಜರನಾಗಿ ಸಾಮಾಜಿಕ, ಧಾರ್ಮಿಕ ಕ್ಷೇತ್ರಗಳಲ್ಲಿ ಹೆಸರುಗಳಿಸಿದ್ದನ್ನು ತಿಳಿದು ತುಂಬಾ ಮೆಚ್ಚುಗೆಯಿಂದ ಅಭಿನಂದಿಸುತ್ತಿದ್ದ. ಇತ್ತೀಚೆಗೆ ಅವನು ಮೃತಪಟ್ಟ ಸುದ್ದಿ ನನಗೆ ಅವನ ಮನೆಯವರು ತಿಳಿಸಿದರು.

ನನ್ನ ಇನ್ನೊಬ್ಬ ಪ್ರಾಣ ಮಿತ್ರ ಬಂಟವಾಳ ಖ್ಯಾತ ವ್ಯಾಪಾರಿ ಶ್ರೀಧರ ಭಂಡಾರಿಯವರ ಮಗ ಜನಾರ್ಧನ ಭಂಡಾರಿ ಯಾನೆ ಜನ್ನಪ್ಪ ಭಂಡಾರಿ. ನಾವು ಶಾಲೆಯಲ್ಲಿ ಕಲಿಯುತ್ತಿರುವಾಗಲೂ ಶಾಲೆ ಬಿಟ್ಟ ಮೇಲೂ, ಒಳ್ಳೆಯ ಮಿತ್ರರಾಗಿಯೇ ಇದ್ದೆವು. ಶಾಲೆಯಲ್ಲಿರುವಾಗ ನಮಗೆ ಸಮಾನ ಮನಸ್ಕ ಮಿತ್ರವೃಂದವಿತ್ತು, ವಿರೋಧಿಗಳೂ ಇದ್ದರು. ಶಾಲೆಯಲ್ಲಿ ಇತ್ತಂಡಗಳಲ್ಲಿ ಜಗಳ ಶುರುವಾದಾಗ ಜನ್ನಪ್ಪ ನನ್ನೊಡನೆ ಇದ್ದ. ಹೈಸ್ಕೂಲಿನಲ್ಲಿ

ಕಲಿಯುತ್ತಿರುವಾಗ ಮಧ್ಯಾಹ್ನದ ಎರಡನೇ ಪಾಠವಾದ ಮೇಲೆ ಶಾಲೆಯಿಂದ ನುಸುಳಿ ಶಾಲೆಯ ಮೇಲಿನ ಭಂಡಾರಿಬೆಟ್ಟು, ಮೈರಾಣಪಾಜೆ, ಮಯ್ಯರ ಬೈಲು, ಸೋಸೆಕಾನ್ (ಮೊಲದ ಕಿವಿ) ಗಳಿಗೆ ಬಿಜಯಂಗೈದು ಯಾರ್‍ಯಾರ ಹಿತ್ತಲುಗಳ ಮಾವಿನ ಮರಗಳಿಗೆ ಕಲ್ಲು ಬೀಸಿ, ಉದುರಿಸಿದ ಮಾವಿನ ಮಿಡಿಗಳನ್ನು ಒಟ್ಟು ಮಾಡಿ, ಕಲ್ಲಿನ ಮೇಲೆ ಕುಳಿತು ಅದನ್ನು ಸಪೂರ ತುಂಡುಗಳನ್ನಾಗಿ ಕತ್ತರಿಸುತ್ತಿದ್ದೆವು. ನಾನು ಮಧ್ಯಾಹ್ನ ಊಟದ ಸಮಯದಲ್ಲಿ ಮನೆಗೆ ಬಂದಾಗ ಊಟದ ಬಳಿಕ ನಮ್ಮದೇ ಹೋಟೆಲಿಗೆ ಹೋಗಿ ಒಂದು ಸಣ್ಣ ಬಾಟಲಿಯಲ್ಲಿ ತೆಂಗಿನೆಣ್ಣೆ ಹಿಂಗು, ಹಸಿಮೆಣಸು, ಉಪ್ಪು ಹುಡಿಗಳನ್ನು ಪೊಟ್ಟಣಗಳಲ್ಲಿ ಕಟ್ಟಿ ಸಿದ್ಧತೆಗಳನ್ನು ಮಾಡಿಯೇ ಶಾಲೆಗೆ ತರುತ್ತಿದ್ದೆ. ಮೇಲೆ ತಿಳಿಸಿದ ಮಾವಿನ ಮಿಡಿಯ ಕತ್ತರಿಸಿದ ತುಂಡುಗಳಿಗೆ ಹೋಟೆಲಿನಿಂದ ಕೊಂಡು ಹೋದ ಲವಣಗಳನ್ನು ಕಲೆಸಿ 'ಮಾವಿನ ಮಿಡಿ ಪಚ್ಚಡಿ' ಮಾಡಿ ತಿನ್ನುವುದಿತ್ತು. ಕಾಡಿನ ಬೆಕ್ಕು ಬೆಲ್ಲ ತಿಂದಂತೆ ನಾವು ಪಚ್ಚೋಡಿಯನ್ನು ಬೊಗಸೆಯಿಂದ ತಿನ್ನುವುದಿತ್ತು. ಈಗ ಒಂದೆರಡು ಚಮಚದಷ್ಟು ತಿನ್ನಲಾಗುವುದಿಲ್ಲ. ಆದರೆ ಆ ದಿನಗಳ ನೆನಪು ಮರುಕಳಿಸುತ್ತಲೇ ಇದೆ.

ಜನ್ನಪ್ಪ ವ್ಯಾಪಾರದಲ್ಲಿ ಯಶಸ್ವಿಯಾಗಲಿಲ್ಲ ಆದರೆ ಧರ್ಮಸ್ಥಳ ಭಂಡಸಾಲೆಯ ಜಮೀನಿನಲ್ಲಿ ಸರಕಾರದ ವತಿಯಿಂದ ಪ್ರಾರಂಭಿಸಿದ ಆಗಿನ ಇಂಡಸ್ಟ್ರೀಯಲ್ ಟ್ರೈನಿಂಗ್ ಸ್ಕೂಲಿನಲ್ಲಿ ಶಿಕ್ಷಣ ಪಡೆದು ಮುಂದೆ ಬೆಂಗಳೂರಿನಲ್ಲಿ ಆಚಾರ್ಯ ಪೋಲಿಟೆಕ್ನಿಕ್‌ನಲ್ಲಿ ವೃತ್ತಿ ತರಬೇತುದಾರನಾಗಿದ್ದ.. ಅವನ ಆಯಸ್ಸು ಕಮ್ಮಿಯೇ. ಅವನೂ ಬೇಗನೇ ಆಯಸ್ಸು ಮುಗಿದು ಮೃತಪಟ್ಟ.

ಆದರೆ ನನ್ನ ಕುಟುಂಬದವರೆಲ್ಲರಿಗೂ ಅವನು ಜನ್ನಪ್ಪಣ್ಣನಾಗಿ ಇದ್ದ. ಒಡಹುಟ್ಟಿದವನಂತೆ ನಮ್ಮೆಲ್ಲರ ಕಷ್ಟಸುಖಗಳಲ್ಲಿ ಪಾಲುದಾರನಾಗಿದ್ದ. ನನ್ನ ಜೀವನದಲ್ಲಿ ಒಮ್ಮೆ 4-5 ತಿಂಗಳೂ ಕೆಲಸ ಇಲ್ಲವಾಗಿದ್ದ ದಿನಗಳಲ್ಲಿ ಅವನು ನನಗೆ 'ನೀನೇನೂ ಭಯಪಡಬೇಡ, ನಾನು ನಿನಗೆ ಬೆಂಗಳೂರಿನಿಂದ ಬಸ್ಸಿನಲ್ಲಿ ತರಕಾರಿ ಕಳುಹಿಸಿಕೊಡುತ್ತೇನೆ. ನೀನು ಅದನ್ನು ಮಾರಿ ಹಣ ವಾಪಾಸು ಮಾಡು' ಎಂದು ಧೈರ್ಯ ಕೊಟ್ಟಿದ್ದ. ತನ್ನ ಕಿಸೆಯಲ್ಲಿ ಕಾಸು ಇಲ್ಲದಿದ್ದರೂ, ನನ್ನ ಕಷ್ಟಕ್ಕೆ ಒದಗಬೇಕೆಂಬ ಅವನ ಹೃದಯದ ಬಯಕೆಗೆ ನಾನು ಏನು ಕೊಟ್ಟರೂ ಸಾಲದು.

ಇನ್ನು ಅವನ ತಮ್ಮ ಸರ್ವೋತ್ತಮನೂ ನಾನೂ ಕೂಡಿ ಶಾಲೆಯಲ್ಲಿ 'ಶಶಿಕಿರಣ' ಎಂಬ ಬರಹದ ಮಾಸಪತ್ರಿಕೆಯನ್ನು ಪ್ರಾರಂಭ ಮಾಡಿದ ವಿಷಯ ತಿಳಿಸಿದ್ದೇನೆ. ಶಾಲೆ ಬಿಟ್ಟ ಮೇಲೂ ನಾವು ನಮ್ಮ ಹೈಸ್ಕೂಲಿನ 'ಸ್ಕೂಲ್ ಡೇ' ಗೆ 'ಹಳೇ ವಿದ್ಯಾರ್ಥಿ ದಿನ'ವನ್ನು ಆಚರಿಸುವ ಪರಿಪಾಠ ಶುರುಮಾಡಿ, ನಾವು ಕೊಂಕಣಿ ಕನ್ನಡ ನಾಟಕವನ್ನು ಆಡುತ್ತಲಿದ್ದೆವು. ಅವನು ಮೈಯಲ್ಲಿ ತೆಳ್ಳಗೆ ಇದ್ದುದರಿಂದ ಅವನಿಗೆ ಸ್ತ್ರೀಪಾರ್ಟು ಮೀಸಲಾಗಿತ್ತು. ಅವನು ಅದಕ್ಕಾಗಿ ಎಳೆಯ ಹೆಂಗಸರು, ಬೆಳೆದ ಹುಡುಗಿಯರನ್ನು ಬಳುಕುವ ಸ್ಟೈಲುಗಳಿಗಾಗಿ ಹೊಂಚು ಹಾಕುತ್ತಲಿದ್ದ. (ಬೇರೆ ಭಾವನೆಗಳಿಂದಲ್ಲ, ಬರೇ ನಟನೆಯ ದೃಷ್ಟಿಯಿಂದ) ತನಗೆ ಮದುವೆ

ಬೇಡ ಬೇಡವೆಂದು ಹೇಳುತ್ತ ಹೇಳುತ್ತ ಪಕ್ಕದ ಮನೆಯ, ನಮ್ಮವರಲ್ಲಿಯೇ ಅತೀ ಸುಂದರಿಯಾದ ಹುಡುಗಿಯನ್ನೇ ಮದುವೆಯಾದ. ಅಂತಹ ನರಿಯ ಸ್ವಭಾವದವನು ಸರ್ವೋತ್ತಮ. ಮುಂದೆ ಒಳ್ಳೆಯ ಫೋಟೋಗ್ರಾಫರ ಆಗಿ ಶ್ರೀ ಟಿ.ಎ.ಪೈ, ಧರ್ಮಸ್ಥಳದ ಹೆಗ್ಗಡೆಯವರಾಗಿದ್ದ ಶ್ರೀ ರತ್ನವರ್ಮ ಹೆಗ್ಗಡೆಯವರ ಮೆಚ್ಚಿನವನಾದ.

ಶಾಲಾದಿನಗಳ ಬಳಿಕ

1952ರಲ್ಲಿ ದೇಶದ ಪ್ರಥಮ ಚುನಾವಣೆಗಳು ನಡೆಯುತ್ತಲಿದ್ದವು. ಆಗ ಚುನಾವಣೆ 1951ರ ನವೆಂಬರ, ದಶಂಬರಗಳಲ್ಲಿ ಶುರುವಾಗಿ 3-4 ತಿಂಗಳು ಕಾಲ ತೆಗೆದುಕೊಂಡಿತ್ತು. ರಾಜಕೀಯ ಪಕ್ಷಗಳಿಗೆ ಚಿಹ್ನೆಗಳನ್ನು ಕೊಡಲಾಗಿತ್ತು. ಮತಪತ್ರದ ಮೇಲೆ ಮೊಹರನ್ನು ಒತ್ತಿ ಮತದಾನವನ್ನು ಮಾಡಬೇಕಾಗಿತ್ತು. ನಾನು ಕಾಂಗ್ರೆಸ್ ಪಕ್ಷದ ಸಹಾಯಕ ಏಜೆಂಟ್ ಆಗಿ ಬಂಟವಾಳದ ಹತ್ತಿರದ ಅರಳ ಶಾಲೆಯಲ್ಲಿದ್ದ ಮತಗಟ್ಟೆಗೆ ಹೋಗಿದ್ದೆ. ಮುಂಚಿನ ಸಂಜೆ ಅರಳ ಶಾಲೆಗೆ ಮುಟ್ಟಿ ಅಲ್ಲಿಯ ಛತ್ರದಲ್ಲಿ ಹೊರಗೆ ಮರದ ಕೆಳಗೆ ಶಾಲು ಹಾಸಿ ನಿದ್ದೆ ಮಾಡಬೇಕಾಗಿತ್ತು. ದೇರಾಜೆ ರಾಮಪ್ಪಯ್ಯ ಎಂಬ ಹಿರಿಯರು ಮುಖ್ಯ ಏಜೆಂಟರಾಗಿದ್ದರು. ಚುನಾವಣೆ ಮುಗಿದ ಬಳಿಕ ನಡೆದುಕೊಂಡೇ ಬಂಟವಾಳ ತಲುಪಬೇಕಾಗಿತ್ತು. ಆಗ ನಮ್ಮ ಬಂಟವಾಳ ಕ್ಷೇತ್ರ ಮದ್ರಾಸು ಸಂಸ್ಥಾನಕ್ಕೆ ಸೇರಿತ್ತಾದ್ದರಿಂದ ಮದ್ರಾಸ್ ಶಾಸನ ಸಭೆಗೆ ಕಾಂಗ್ರೆಸ್ ಪಕ್ಷದಿಂದ ಬಂಟವಾಳ ವೈಕುಂಠ ಬಾಳಿಗರೂ, ಲೋಕಸಭೆಗೆ ಮಂಗಳೂರು ಕ್ಷೇತ್ರದಿಂದ ಖ್ಯಾತ ಹಿರಿಯ ಪತ್ರಕರ್ತ ಬೆನೆಗಲ ಶಿವರಾಮ ಆಯ್ಕೆಯಾದರು (ಇವರು ಭಾರತದ ರಿಜರ್ವ್ ಬ್ಯಾಂಕಿನ ಪ್ರಥಮ ಗವರ್ನರ್ ಬೆನೆಗಲ ರಾಮರಾವ್ ಮತ್ತು ಭಾರತ ಸಂವಿಧಾನ ರಚನಾ ಸಮಿತಿಯ ಹಿರಿಯ ಸದಸ್ಯರಾಗಿದ್ದ ಅಂತರ್ರಾಷ್ಟ್ರೀಯ ನ್ಯಾಯಾಲಯುದ ನ್ಯಾಯಾಧೀಶರಾಗಿಯೂ ಖ್ಯಾತನಾಮರಾಗಿದ್ದ ಬೆನೆಗಲ ನರಸಿಂಹ ರಾವ್ ಅವರುಗಳ ತಮ್ಮ). ಇವರ ಇಬ್ಬರ ಹುಟ್ಟು ಬಂಟವಾಳವೇ ಆಗಿದ್ದು, ಇಬ್ಬರೂ ನಮ್ಮ ಎಲಿಮೆಂಟರಿ ಶಾಲೆಯಲ್ಲಿ ವಿದ್ಯಾರ್ಥಿಗಳಾಗಿದ್ದವರು.

ನಾನು 1952ರಲ್ಲಿ ಎಸ್. ಎಸ್.ಎಲ್.ಸಿ. ಪಾಸಾಗಿದ್ದೆ. ಮುಂದೆ ನಾನು ಕಾಲೇಜಿಗೆ ಹೋಗಿ ನನ್ನ ಗುರುಗಳಾಗಿದ್ದ ಗಾಂಧೀವಾದಿ ಶ್ರೀ ಪಾಂಡು ಬಾಳಿಗಾರಂತೆ ಉಪಾಧ್ಯಾಯನಾಗಬೇಕೆಂದು ಆಶಿಸಿದ್ದೆ. ಆದರೆ ವಿಧಿನಿಯಮವೇ ಬೇರೆಯಾಗಿತ್ತು.

ನಮ್ಮ ಮೋಡರ್ನ್ ಕೆಫೆಯಲ್ಲಿ ನನ್ನ ತಂದೆಯವರ ಪಾಲುದಾರರಾಗಿದ್ದ ಅವರ ಭಾವನೆಂಟರು ಪಾಲುದಾರಿಕೆಯಿಂದ ಹೊರಹೋಗಬೇಕಾಗಿ ಅಪೇಕ್ಷಿಸಿದ್ದರಿಂದ ಹೋಟೆಲು ನಡೆಸುವ ಜವಾಬ್ದಾರಿ ನನ್ನ ತಂದೆಯವರ ಪಾಗಿಲಿಗೆ ಬಂತು ಅವರಿಗೆ ಸಿ.ಪಿ.ಸಿ. (CPC) ಕಂಪೆನಿಯ ಏಜೆನ್ಸಿಯೂ ಇದ್ದುದರಿಂದ ನಾನು ಹೋಟೆಲು ವ್ಯವಹಾರದಲ್ಲಿ ಸೇರಬೇಕಾಗಿ ಬಂತು. ನನ್ನ ಇತರ ತಮ್ಮಂದಿರು ಇನ್ನೂ ಎಳೆಯರಾಗಿ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಾಗಿದ್ದರು. ಅದರಿಂದಾಗಿ ಎಸ್.ಎಸ್.ಎಲ್.ಸಿ. ಪರೀಕ್ಷೆ ಪಾಸು ಮಾಡಿ, ಬಳಿಕ

ಕಾಲೇಜು ಮುಗಿಸಿ ನಾನು ಕಲಿತ ಶಾಲೆಯಲ್ಲಿ ಸೇವೆ ಸಲ್ಲಿಸುತ್ತಾ ನಮ್ಮ ಊರಿನವರ, ಸಮಾಜದ ಸೇವೆ ಮಾಡಬೇಕೆಂಬ ನನ್ನ ಬಾಲ್ಯದ ಕನಸು ನನಸಾಗಲಿಲ್ಲ.

ಇದಾಗಿ ಎರಡು ವರ್ಷಗಳಲ್ಲಿ ದುರ್ದೈವದಿಂದ ನಮ್ಮ ಹೋಟೆಲು ಕಟ್ಟಡದ ಮಾಲಕರು ದುರ್ಬೋಧನೆಗಳಿಗೆ ಒಳಗಾಗಿ, ಹೋಟೆಲು ಕಟ್ಟಡ ಬಿಟ್ಟುಕೊಡಬೇಕಾಗಿ ನನ್ನ ತಂದೆಯವರಿಗೆ ಹೇಳಿದರು. ಅವರ ವಿರುದ್ಧ ನ್ಯಾಯಾಲಯಕ್ಕೆ ಹೋಗಬಹುದಾಗಿತ್ತು. ಆದರೆ ನನ್ನ ತಂದೆಯವರು ಅವರ ಮತ್ತು ಕಟ್ಟಡದ ಧನಿಗಳ ಹಿಂದಿನ ಒಳ್ಳೆಯ ಸಂಬಂಧಗಳ ದಿನಗಳ ನೆನಪನ್ನು ಮಾಡಿ, ಕೋರ್ಟಿಗೆ ಹೋಗುವ ದಾರಿಯನ್ನು ಬಿಟ್ಟು ಸಿ.ಪಿ.ಸಿ. ಕಂಪೆನಿಯ ಜಾಗದಲ್ಲಿ ಹೊಸ ಕಟ್ಟಡ ಕಟ್ಟಿಸಿ ಕೆನರಾ ಕಾಫಿ ಕ್ಲಬ್ ಹೆಸರಿನಲ್ಲಿ ಹೋಟೆಲು ವ್ಯಾಪಾರ ಶುರು ಮಾಡಿದರು. ಕಟ್ಟಡ ಕಟ್ಟಿಸುವುದಕ್ಕೆ 7-8 ತಿಂಗಳುಗಳು ತಗಲಿದ್ದವು. ಆದರೆ ನಾನು ಸುಮ್ಮನೆ ಕಾಲಕಳೆಯದೇ ಕೆನರಾ ಬ್ಯಾಂಕಿನಲ್ಲಿ ಕಾರಕೂನನಾಗಿ ಮಂಗಳೂರು ಬಂದರು ಶಾಖೆಗೆ ಸೇರಿದೆ. ಆಗಿನ ಕೆನರಾ ಬ್ಯಾಂಕಿನ ಮುಖ್ಯಸ್ಥರಾಗಿದ್ದ ಅಮ್ಮೆಂಬಳ ದಾಮೋದರ ಪೈಗಳನ್ನು ನನ್ನ ತಂದೆಯವರು ಭೇಟಿ ಮಾಡಿದ್ದರು. ಆದರಿಂದಾಗಿ ಅವರು ಪ್ರೀತಿಯಿಂದ ಕೂಡಲೇ ನನಗೆ ತಮ್ಮ ಬ್ಯಾಂಕಿನಲ್ಲಿ ಕೆಲಸ ಕೊಟ್ಟರು. ಆದರೆ ನಾನು ಬರೇ ಎಂಟು ತಿಂಗಳು ಮಾತ್ರ ಕೆನರಾ ಬೇಂಕಿನಲ್ಲಿ ಕೆಲಸ ಮಾಡಿ ಬಳಿಕ ರಾಜೀನಾಮೆ ಕೊಟ್ಟು ನನ್ನ ತಂದೆಯವರು ಅಷ್ಟರಲ್ಲಿ ಕಟ್ಟಿಸಿ ಪ್ರಾರಂಭಿಸಿದ ಹೋಟೆಲು ವ್ಯವಹಾರದಲ್ಲಿ ಸೇರಿಕೊಳ್ಳಬೇಕಾಗಿ ಬಂತು. ಆದರೆ ಹೊಟೇಲು ಕಟ್ಟಡ ಮಾರ್ಗದ ಬದಿಯಿಂದ ತುಂಬಾ ಒಳಗೆ ಇದ್ದುದರಿಂದ ನಿರೀಕ್ಷಿತ ವ್ಯಾಪಾರ ಇರಲಿಲ್ಲ. ಅಷ್ಟರಲ್ಲಿ ನನ್ನ ತಂಗಿ ಶಾಲಿನಿಯ ಮದುವೆ ನೆರವೇರಬೇಕಾಗಿ ಬಂತು. ಇದರಿಂದಾಗಿ ತುಂಬಾ ಸಾಲ ಸೋಲ ಎದುರಾಗಿ ಬಂತು. ಮತ್ತು ನನ್ನ ತಂದೆಯವರ ಆರೋಗ್ಯವೂ ಆರ್ಥಿಕ ತೊಂದರೆಗಳ ನಡುವೆ ಕೆಟ್ಟು 1957ರಲ್ಲಿ ಅವರು ತೀರಿಹೋದರು. ಆದರಿಂದಾಗಿ ನಾನು ಹೋಟೆಲನ್ನು ಬಾಡಿಗೆಗೆ ಕೊಟ್ಟು ಸಿ.ಪಿ.ಸಿ. ಕಂಪೆನಿಯಲ್ಲಿ ತಂದೆಯವರ ಜಾಗದಲ್ಲಿ ಬಂಟವಾಳದಲ್ಲಿ ಬಸ್ ಏಜೆಂಟನಾಗಿ ಮುಂದುವರಿಯಬೇಕಾಯಿತು.

ನನ್ನ ತಂದೆಯವರು ತೀರಿದಾಗ ನನ್ನ ವಯಸ್ಸು 23. ಮನೆಯಲ್ಲಿ ತಾಯಿ, ಮದುವೆಗೆ ನೆರದ ನನ್ನ ತಂಗಿ ವಸಂತಿ ಹಾಗೂ ನನ್ನ ಎಳೆಯ ತಮ್ಮಂದಿರಾದ ವೆಂಕಟರಮಣ (6ನೇ ಕ್ಲಾಸು), ಗಣಪತಿ (4ನೇ ಕ್ಲಾಸು) ಮತ್ತು ಪ್ರಭಾಕರ (3ನೇ ಕ್ಲಾಸು) ಶಾಲೆಗೆ ಹೋಗುತ್ತಿದ್ದರು. ನನಗೆ ಸಿ.ಪಿ.ಸಿ. ಕಂಪೆನಿಯಲ್ಲಿ ಸಂಬಳ ರೂ. 60/- ಮತ್ತು ಹೋಟೆಲು ಬಾಡಿಗೆ ತಿಂಗಳಿಗೆ ರೂ. 60/- (ಅದೂ ಸಿಕ್ಕಿದರೆ ಸಿಕ್ಕಿತು, ಇಲ್ಲವಾದರೆ ಇಲ್ಲ). ಇಂತಹ ದುಃಸ್ಥಿತಿಯಲ್ಲಿಯೂ, ನನ್ನ ತಾಯಿಗೆ, ನನ್ನ ಮದುವೆ ಮಾಡಿಸಿ ಸೊಸೆಯನ್ನು ಮನೆಗೆ ತರುವ ಇಚ್ಛೆಯಾಯಿತು. ಅಂತೆಯೇ ನಮ್ಮ ಹತ್ತಿರದ ಸಂಬಂಧಿಕರಾಗಿದ್ದ ಬಂಟವಾಳದವರೇ ಆಗಿದ್ದ ಮೂಡುಬಿದಿರೆಯ ಶ್ರೀ ಚಿರ್ದಪ್ಪಯ್ಯ ಭಟ್ಟರ ಮಗಳು ಯಶವಂತಿಯನ್ನು ನಾನು 27.04.1959ರಂದು ಮೂಡುಬಿದಿರೆಯಲ್ಲಿ ಮದುವೆಯಾಗಿ ಮನೆಗೆ ಕರೆದುಕೊಂಡು ಬಂದೆ. ಆರ್ಥಿಕವಾಗಿ ನಾವು ಎರಡು ಕಡೆಯವರೂ ಒಂದೇ ದೋಣಿಯಲ್ಲಿ ವಿಹರಿಸುವವರಾಗಿದ್ದೆವು. ಆದುದರಿಂದ

ಸುಂದರಿಯಾಗಿದ್ದ ಯಶವಂತಿಯನ್ನು ನಾನು ವರಿಸಿ ಮನೆ ತುಂಬಿಸಿದೆ. ಅವಳಿಗೆ ಪದ್ಧತಿಯಂತೆ 'ಸಾವಿತ್ರಿ' ಎಂದು ನಾಮಕರಣ ಮಾಡಲಾಗಿತ್ತು. ನನ್ನ ತಂದೆಯವರ ನಿಧನದಿಂದಾಗಿ ಮನೆಯಲ್ಲಿ ನಿಂತು ಹೋಗಿದ್ದ, ಭಾದ್ರಪದ ಮಾಸದ ಶ್ರೀ ಗೌರೀ ಹಬ್ಬವನ್ನು ನನ್ನ ಮದುವೆಯಾಗಿ ಸಾವಿತ್ರಿ ಮನೆಗೆ ಬಂದುದರಿಂದ ಮುಂದುವರೆಸಿಕೊಂಡು ಹೋಗುವಂತಾಯಿತು.

ಸಾವಿತ್ರಿ ಸಾಧ್ವಿ. ನಮ್ಮ ತಾಯಿ ತೀರಿಕೊಂಡು ಹೋಗುವ ವರೆಗೆ ಚಾಚೂ ಅನ್ನದೇ ಸೇವೆ ಮಾಡಿ ಕೊಂಡು ಹೋಗಿದ್ದಳು. ಅಡುಗೆ ಮಾಡುವುದರಲ್ಲಿ ನನ್ನ ತಾಯಿಯ ಕೈಗುಣ ಅವಳಿಗೆ ಪೂರ್ಣವಾಗಿ ಬಂದಿತ್ತು. ತಾನು ಸ್ವತಃ ಮೀನು ತಿನ್ನುವವಳಲ್ಲವಾದರೂ, ಮೀನಿನ ಪದಾರ್ಥಗಳನ್ನು ಮಾಡುವುದರಲ್ಲಿ ತಾಯಿಯವರನ್ನು ಮೀರಿಸುತ್ತಿದ್ದಳು. ನನ್ನ ಅಕ್ಕ ತಂಗಿಯವರಿಗೂ, ನನಗಿಂತ ಸಣ್ಣವರಾಗಿದ್ದ ತಮ್ಮಂದಿರಿಗೂ ಅಥವಾ ಇನ್ನಿತರ ಸಂಬಂಧಿಗಳನ್ನು ಕೌಟುಂಬಿಕರನ್ನು ಅಥವಾ ಮನೆಗೆ ಬಂದ ಅತಿಥಿಗಳಿಗೆ ಒಳ್ಳೆಯ ಗೃಹಿಣಿಯಾಗಿ ತುಂಬು ಹೃದಯದ ಸ್ವಾಗತ ಮಾಡಿ ಅವರಿಗೆ ತೃಪ್ತಿಯಾಗುವಂತೆ ಆತಿಥ್ಯ ಮಾಡಿ ಎಲ್ಲರ ಹೊಗಳಿಕೆಗೆ ಪಾತ್ರಳಾಗಿ, ತನ್ನ ಇನ್ನಿಂಗ್ಸನ್ನು ಮುತ್ತೈದೆಯಾಗಿಯೇ ಮುಗಿಸಿ ಹೋದಳು.

ನನ್ನ ಅಕ್ಕಂದಿರು, ತಂಗಿಯಂದಿರು, ತಮ್ಮಂದಿರು 'ಅತ್ತಿಗೆಯ ಹೃದಯ ವೈಶಾಲ್ಯದಿಂದಾಗಿ ನಮಗೊಂದು ತವರು ಮನೆ ಗಟ್ಟಿಯಾಗಿತ್ತು' ಎಂದು ಹೇಳುವುದುಂಟು. ನಾನು ಸಿಂಡಿಕೇಟ್ ಬ್ಯಾಂಕಿನಲ್ಲಿ ಆಫೀಸರ ಆಗುವವರೆಗೆ ಸಾವಿತ್ರಿಗೆ ಒಳ್ಳೆಯ ಸೀರೆಯನ್ನು ತೆಗೆಸಿಕೊಟ್ಟದ್ದಿಲ್ಲ. ಅವಳು ಕೇಳುತ್ತಲೂ ಇರಲಿಲ್ಲ. ಇದ್ದುದರಲ್ಲಿ ತೃಪ್ತಿ ಪಡೆದುಕೊಳ್ಳುವ ಮನೆಯಾಕೆ ಸಾವಿತ್ರಿ. ನನ್ನ ಬ್ಯಾಂಕ್ ಉದ್ಯೋಗದ ಸಲುವಾಗಿ ಹೊರಗೆ ಹೋದಾಗ ಅಥವಾ ಸಾರ್ವಜನಿಕ ಕೆಲಸ ಕಾರ್ಯಗಳಿಗೆ ಬೆಳಿಗ್ಗೆ ಮನೆಯಿಂದ ಹೊರಟವ ರಾತ್ರಿ ಅಪರಾತ್ರಿಗಳಲ್ಲಿ ಮನೆಗೆ ಬರುತ್ತಿದ್ದರೂ, ಸಹಿಸಿಕೊಂಡು ಇರುತ್ತಿದ್ದಳು. ಸಹನೆ, ತಾಳ್ಮೆ ಪ್ರೀತಿ ಪ್ರೇಮಗಳ ಖಣಿಯಾಗಿದ್ದವಳು. ಅವಳ ಆರೋಗ್ಯವೂ ಯಾವಾಗಲೂ ಸರಿಯಾಗಿಯೇ ಇರುತ್ತಿತ್ತು. ಆದರೆ ಕೊನೆಯ ಒಂದೆರಡು ವರ್ಷಗಳಿಂದ ಅವಳಿಗೆ ಹೃದಯ ಬೇನೆ ಬಂದಿತ್ತು. ಆದರೂ ಅವಳ ಕೆಲಸ ಅವಳೇ ಮಾಡಿಕೊಳ್ಳುತ್ತಿದ್ದಳು.

ಓದು, ಬರಹ, ಪ್ರಕಾಶನ

ನನ್ನ ತಂದೆಯವರಿಗೆ ಕಾದಂಬರಿಗಳನ್ನು ಓದುವುದು ಎಂದರೆ ತುಂಬಾ ಅಭಿರುಚಿ. ಆಗ ಕನ್ನಡದಲ್ಲಿ ಗಳಗನಾಥರ, ಬಂಕಿಂಚಂದ್ರರ, ಕಾದಂಬರಿಗಳು ಮಾತ್ರ ಸಿಗುತ್ತಿದ್ದ ಕಾಲ. ಅವರು ಪುಸ್ತಕಗಳನ್ನು ಮನೆಗೆ ತಂದಾಗ ನನಗೆ ಆ ಪುಸ್ತಕಗಳನ್ನು ಓದುವ ಅಭಿರುಚಿ ಹತ್ತಿತ್ತು. ಶಾಲಾ ಲೈಬ್ರೆರಿಯಲ್ಲೂ ಒಳ್ಳೆಯ ಪೌರಾಣಿಕ ಚಾರಿತ್ರಿಕ ಕಥಾನಕಗಳು ಸಿಗುತ್ತಿದ್ದವು.

ಅಲ್ಲದೇ ನನ್ನ ಖಾಸಾ ಚಿಕ್ಕಪ್ಪ ಬಸ್ತಿ ಪುಂಡಲೀಕ ಶೆಣೈ ಅವರೇ ಶಾಲೆಯ ಲೈಬ್ರೆರಿಯನ್ ಆಗಿದ್ದರು. ಅವರು ಹಿಂದಿ ಅಧ್ಯಾಪಕರೂ ಆಗಿದ್ದರು. ಅವರು ಹಿಂದಿ ಪಾಠ ಕಲಿಸುವಾಗ

ಕೊಂಕಣಿಯಲ್ಲಿ ಅರ್ಥವಿಸಿ ವಿವರಿಸುತ್ತಿದ್ದರು. ಅವರ ಶಾಲಾ ಶಿಕ್ಷಣ ಬರೇ 3-4 ಕ್ಲಾಸು ಅಷ್ಟೇ. ಕುಟುಂಬದ ಬಡತನದಿಂದಾಗಿ ಬಾಲ್ಯದಲ್ಲಿ ಶಾಲೆ ಬಿಟ್ಟು ಟೈಲರ ಒಬ್ಬರ ಬಳಿ ಶರ್ಟುಗಳ ಗುಬ್ಬಿಗುಂಡಿಗಳನ್ನು ಹೊಲಿಯಲಿಕ್ಕೆ ಸೇರಿದರು ಬಳಿಕ Master Tailor ಆದರು. ಬೆಳೆದು ದೊಡ್ಡವನಾಗುವಾಗಲೇ 'ಗಾಂಧೀ ಗೀಳು' ಹಚ್ಚಿ ಜೈಲಿಗೂ ಹೋದರು. ಅಲ್ಲಿ ಸಹ ಜೈಲುವಾಸಿಗಳ ಕೂಡೆ ಹಿಂದಿ ಕಲಿತು ಜೈಲು ವಾಸ ಮುಗಿಸಿ ಹೊರಗೆ ಬಂದು ಆನೇ ಕ್ಲಾಸಿನ ಹಿಂದಿ ಪರೀಕ್ಷೆ ಪಾಸು ಮಾಡಿ ನಮ್ಮದೇ ಬಂಟವಾಳ ಹೈಸ್ಕೂಲಿನಲ್ಲಿ ಹಿಂದಿ ಟೀಚರ್ cum ಲೈಬ್ರೆರಿಯನ್ ಆಗಿದ್ದರು. ಮುಂದೆ ನಾನು 1952ರಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕೂತಾಗ ಅವರೂ ಪರೀಕ್ಷೆ ಕೊಟ್ಟು ನನ್ನೊಡನೆ ಪರೀಕ್ಷೆ ಪಾಸಾಗಿದ್ದರು. ಮುಂದೆ ಅವರು ಕೊಂಕಣಿ ಭಾಷೆಯ ಚರಿತ್ರೆ ಬಗ್ಗೆ, ಸಿಂಧೂ ಸಂಸ್ಕೃತಿ, ಬ್ರಾಹ್ಮಿಲಿಪಿಗಳ ಬಗ್ಗೆ ಸಂಶೋಧನಾತ್ಮಕ ಗ್ರಂಥಗಳನ್ನು ಬರೆದರು. ಅವರ ಪುಸ್ತಕ ಅಧ್ಯಯನ ವಿಶೇಷವಾಗಿತ್ತು. ತಮ್ಮ ಸಂಶೋಧನೆಗಳಿಗಾಗಿ ಅವರು ವೇದಗಳನ್ನೂ ಅವುಗಳ ಬಗ್ಗೆ ಇರುವ ಟೀಕೆ, ವಿಶ್ಲೇಷಣೆಗಳ ಪುಸ್ತಕಗಳನ್ನು ಖರೀದಿಸಿದ್ದ ಸುಮಾರು ಒಂದು ಲಕ್ಷ ರೂಪಾಯಿಯ ಗ್ರಂಥಗಳನ್ನು ಈಗ ವಿಶ್ವ ಕೊಂಕಣಿ ಕೇಂದ್ರದ ವಿಶ್ವ ಕೊಂಕಣಿ ಲೈಬ್ರೇರಿಯಲ್ಲಿಡಲಾಗಿದೆ.

ಹೀಗೆ ಶಾಲೆಯಲ್ಲಿರುವಾಗಲೇ, ರಾಮಕೃಷ್ಣ ಪರಮಹಂಸ, ವಿವೇಕಾನಂದರ ಪುಸ್ತಕಗಳನ್ನು, ಪಂ. ನೆಹರೂಜಿಯವರ 'ಡಿಸ್ಕವರಿ ಆಫ್ ಇಂಡಿಯಾ', ಶೇಕ್ಸ್‌ಪಿಯರ್ ನಾಟಕಗಳನ್ನು ಓದಿದ್ದೆ. ಪುಸ್ತಕಗಳನ್ನು ಪತ್ರಿಕೆಗಳನ್ನು ಓದುವ ಗೀಳು ಹಚ್ಚಿಕೊಂಡು ನಾನು ಶಿವರಾಮ ಕಾರಂತ, ಅನಕೃ, ತರಾಸು, ತ್ರಿವೇಣಿ, ಬೀಚಿ, ಭೈರಪ್ಪ ಮುಂತಾದ ಕನ್ನಡ ಸಾಹಿತ್ಯ ದಿಗ್ಗಜಗಳ ಪುಸ್ತಕಗಳನ್ನು ಕಿಸೆಯಲ್ಲಿ ಕಾಸಿಲ್ಲದಿದ್ದರೂ ಕೊಂಡುಕೊಂಡು ಮನೆಗೆ ತಂದು ಆರಾಮವಾಗಿ ಓದುತ್ತಿದ್ದೇನೆ. ಈ ಗೀಳು ನನ್ನ ಮಗ ಚಿ. ದಿನೇಶನಿಗೂ ಇದೆ. ನನ್ನಲ್ಲಿ ಇರುವಂತೆಯೇ ದಿಲ್ಲಿಯಲ್ಲಿ ಅವನ ಮನೆಯಲ್ಲಿಯೂ ಕನ್ನಡ, ಇಂಗ್ಲೀಷ್ ಪುಸ್ತಕಗಳ ಮತ್ತು ಸಂಗೀತದ CD ಗಳ ಬಹುದೊಡ್ಡ ಸಂಗ್ರಹವಿದೆ.

ಶಾಲೆಯಲ್ಲಿ ಕಲಿಯುತ್ತಿರುವಾಗ ಹುಬ್ಬಳ್ಳಿಯಿಂದ ಪ್ರಕಟವಾಗುತ್ತಿದ್ದ ಸಂಯುಕ್ತ ಕರ್ನಾಟಕ, ಮದ್ರಾಸಿನಿಂದ ಬರುತ್ತಿದ್ದ ದಿ ಹಿಂದೂ ಪತ್ರಿಕೆಗಳನ್ನೇ ಓದುತ್ತಿದ್ದೆ. ಬಳಿಕ 1952ರಲ್ಲಿ ಮಂಗಳೂರಿನಲ್ಲಿಯೇ ಶ್ರೀ ಎ.ಎಸ್. ಕುಡ್ವರು ಪ್ರಾರಂಭಿಸಿದ ನವಭಾರತ ಮತ್ತು ಈಗ ಉದಯವಾಣಿ ಓದುತ್ತಲಿದ್ದೇನೆ. ಹಿಂದೂ ಈಗಲೂ ನನ್ನ ಅವಶ್ಯಕತೆಗಳಲ್ಲಿ ಒಂದಾಗಿದೆ.

ಕೊಂಕಣಿ ಚಳವಳದಲ್ಲಿ ಸೇರಿದ ಬಳಿಕ ರಾಕ್ಣೋ, ಪಂಚ್ಕದಾಯಿ, ಗೋವಾದ ಏಕೈಕ ಕೊಂಕಣಿ ದೈನಿಕ 'ಸುನಾಪರಾಂತ', 'ಬಿಂಬ', 'ಜಾಗ', ಋತು ಮುಂತಾದ ಪತ್ರಿಕೆಗಳನ್ನು ಕಡ್ಡಾಯವಾಗಿ ಓದುತ್ತಲಿದ್ದೇನೆ ಹಾಗೂ ಇತರ ಕೊಂಕಣಿ ಕಾದಂಬರಿ, ಕಥಾನಕಗಳನ್ನೂ ಓದುತ್ತಲಿದ್ದೇನೆ. ಪುಸ್ತಕಗಳ ಸ್ಟೋಕ್ ಜಾಸ್ತಿಯಾಗಿದೆಯೆನ್ನುವಾಗ ಊರ ಪರಊರ ವಾಚನಾಲಯಗಳಿಗೂ ದಾನವಾಗಿ ಕೊಟ್ಟದ್ದೂ ಇದೆ.

ಇತ್ತೀಚೆಗೆ ಮಂಗಳೂರಿನಲ್ಲಿ ಮತ್ತು ಜಿಲ್ಲೆಯಲ್ಲಿ ಕೊಂಕಣಿಗಳಿಗೆ ಓದುವ ಅಭಿರುಚಿ ಬೆಳೆಯಲೆಂದು ಕೊಡಿಯಾಲ ಖಬರ ಕೊಂಕಣಿ ಪಾಕ್ಷಿಕವನ್ನು ಹೊರತಂದಿರುತ್ತೇವೆ. ಅದರ ಪೂರ್ಣ ಜವಾಬ್ದಾರಿ ನನ್ನ ಯುವ ಮಿತ್ರ ಶ್ರೀ ವೆಂಕಟೇಶ ಎನ್.ಬಾಳಿಗರು ವಹಿಸಿಕೊಂಡು ಬರುತ್ತಲಿದ್ದಾರೆ (ಲಾಭ ನಷ್ಟಗಳನ್ನು ಕೂಡಾ) ಅಲ್ಲದೇ ಉತ್ತರ ಅಮೇರಿಕಾದಲ್ಲಿ ಪ್ರಕಟಣೆಗೊಳ್ಳುತ್ತಿರುವ ಮಿತ್ರ ಶ್ರೀ ವಸಂತ ಭಟ್ಟರವರು ಸಂಪಾದಕರಾಗಿರುವ 'ಖಬರ' ಪತ್ರಿಕೆಗೆ ನಿಯಮಿತವಾಗಿ ೯-೧೦ ವರ್ಷಗಳಿಂದ ಭಾರತದ ಕೊಂಕಣಿ ಜಗತ್ತಿನಲ್ಲಿ ಜರುಗುವ ಕೊಂಕಣಿ ಸಭೆ ಸಮಾರಂಭಗಳು, ವಿಶೇಷ ಘಟನೆಗಳು 'ಖಬರ ಕುಳಾರ' (ತವರು ಮನೆಯಿಂದ ಸುದ್ಧಿ) ಶೀರ್ಷಿಕೆಯಲ್ಲಿ ಬರೆಯುತ್ತಲಿದ್ದೇನೆ.

ನನ್ನ ನಿಯಮಿತ ಓದು ಬರಹಗಳಿಂದಾಗಿ 'ನವಭಾರತ' ಬಳಿಕ ಉದಯವಾಣಿಯಲ್ಲಿ ವಿವಿಧ ರಾಜಕೀಯ ಸಾಮಾಜಿಕ, ಸಾಹಿತ್ಯಿಕ ವಿಷಯಗಳ ಮೇಲೆ ಲೇಖನಗಳನ್ನು ಬರೆಯುತ್ತಲಿದ್ದೇನೆ. ನನ್ನ ಬರಹ, ವಿಚಾರಗಳ ಮತ್ತು ಶೈಲಿಯ ಬಗ್ಗೆ ಉತ್ತಮ ಪ್ರತಿಕ್ರಿಯೆ, ಮೆಚ್ಚುಗೆಗಳನ್ನು ಸಂಪಾದಿಸಿರುತ್ತೇನೆ. ಇನ್ನು ಕನ್ನಡ ಮತ್ತು ಕೊಂಕಣಿ ಭಾಷೆಗಳಲ್ಲಿ ಸಣ್ಣ ಕತೆಗಳನ್ನು ಬರೆದಿದ್ದೇನೆ. 1998ರಲ್ಲಿ ತರಂಗದಲ್ಲಿ ಬಂದ 'ಎಮಿಲಿ' ಕತೆ ಬಗ್ಗೆ ಈಗಲೂ ಪ್ರಶಂಸೆಗಳು ಬರುತ್ತಲಿವೆ.

ಸಾಮಾಜಿಕ, ರಾಜಕೀಯದ ಮೊದಲ ದಿನಗಳು

ಎಸ್.ಎಸ್.ಎಲ್.ಸಿ. (ಮೆಟ್ರಿಕ್) ಪಾಸಾಗಿ ಶಾಲೆ ಬಿಟ್ಟ ಬಳಿಕ (1952) ನನ್ನ ತಂದೆಯವರ ಹೋಟೇಲು ವ್ಯಾಪಾರಕ್ಕೆ ಸೇರಿದೆ. ನಂತರದ ಕಷ್ಟನಷ್ಟಗಳ ದಿನಗಳನ್ನು ಎದುರಿಸಬೇಕಾಗಿ ಬಂದದ್ದು ನನ್ನ ವಿಧಿಯೆನ್ನಬೇಕು. ಆದರೂ ಶ್ರೀ ವೆಂಕಟರಮಣ ಸ್ವಾಮಿಯ ಮೇಲಿನ ಭಕ್ತಿ ವಿಶ್ವಾಸಗಳಿಂದ, ಗುರುಗಳಾದ ಶ್ರೀ ಸುಧೀಂದ್ರ ತೀರ್ಥ ಸ್ವಾಮಿಗಳ ಪ್ರವಚನಗಳನ್ನು ಕೇಳುತ್ತಲಿದ್ದುದರಿಂದ ಮತ್ತು ನನ್ನ ತಂದೆಯವರ ಧೀರ ನಡಿಗೆ, ತಾಯಿಯವರ ಭಕ್ತಿಮಾರ್ಗದ ನೆರಳಲ್ಲಿ ಮುಂದೆ ನಡೆಯುತ್ತ ತಲೆಯ ಮೇಲೆ ಕೈಯಿಟ್ಟು ಅಳುತ್ತ ಕೂಡದೇ ಧೈರ್ಯದಿಂದ ಮುಂದುವರಿಯುತ್ತಲಿದ್ದೆ. ಒಂದಲ್ಲ ಒಂದು ದಿನ ಬೆಳಕು ಕಾಣುತ್ತದೆ ಎಂಬ ವಿಶ್ವಾಸದಿಂದಿದ್ದೆ. ಹಾಗೇ 1954ರಿಂದ 1962ರ ಕಾಲ ನನ್ನ ಜೀವನದ ಅತೀ ಕಷ್ಟದ ದಿನಗಳೆಂದು ಹೇಳಬಹುದು.

ಆ ದಿನಗಳಲ್ಲೇ ಮಂಗಳೂರಲ್ಲಿ ಯುವಕ ಕಾಂಗ್ರೆಸ್ (ಯೂತ ಕಾಂಗ್ರೆಸ್) ಮತ್ತು ಇಂಟಕ ಶಾಖೆಗಳು ಪ್ರಾರಂಭವಾಗುತ್ತಿದ್ದ ಕಾಲವದು. ಸ್ವಾತಂತ್ರ್ಯ ಹೋರಾಟಗಾರ, ಹೆಸರಾಂತ ಮಲ್ಲಪಟು, ಸ್ಯಾಂಡೊ ಶ್ರೀ ಎಂ. ಲೋಕಯ್ಯ ಶೆಟ್ಟಿಯವರ ಮುದಾಳ್ತನದಲ್ಲಿ ನಾವು ಕೆಲವು ಯುವಕರು ಸೇರಿ ದ.ಕ. ಜಿಲ್ಲಾ ಯೂತ ಕಾಂಗ್ರೆಸ್‌ನ್ನು ಶುರುಮಾಡಿದೆವು. ಮಂಗಳೂರಿನಲ್ಲಿ ಶ್ರೀ ರಾಮರಾಜ ಕಿಣಿ, ಎಂ. ಸಂಜೀವ, ಮೂಡುಬಿದಿರೆಯಿಂದ ಎಮ್. ಮೋಹನ ಶೆಣೈ, ಹೆಚ್. ಉದಯಶಂಕರ ಪ್ರಭು ಮೊದಲಾದವರಿದ್ದೆವು. ಅದರಿಂದಾಗಿ

ಬಂಟವಾಳದ ಸುತ್ತಮುತ್ತಲಿನ ಅಮ್ಟಾಡಿ, ಸೊರನಾಡು, ಸಿದ್ಧಕಟ್ಟೆ, ವಗ್ಗ, ದಡ್ಡ ಮುಂತಾದ ಕಡೆಗಳಲ್ಲಿ ಶಾಖೆಗಳನ್ನು ಸ್ಥಳೀಯ ಕಾಂಗ್ರೆಸ್ ಮುಖಂಡರುಗಳ ಸಹಾಯದಿಂದ ಸಂಘಟಿಸಿದ್ದೆ ಮತ್ತು ಅಲ್ಲಿ ಯುವಕರನ್ನು ಸಂಘಟಿಸಿ, ಸಾಮಾಜಿಕ ಕಾರ್ಯಗಳಿಗೆ ಅವರನ್ನು ಹುರಿದುಂಬಿಸಿ ತರಬೇತಿ ಕೊಡುತ್ತಲಿದ್ದೆ. ಈಗ ಅವರೆಲ್ಲರೂ ಬೇರೆ ಬೇರೆ ಪಕ್ಷಗಳಲ್ಲಿದ್ದಾರೆ. ಆದರೆ ವೈಯಕ್ತಿಕವಾಗಿ ನನ್ನ ಮತ್ತು ಅವರ ಸಂಬಂಧ ಉತ್ತಮವಾಗಿದೆ.

ಆವಾಗಲೇ ದ.ಕ. ಜಿಲ್ಲೆಯಲ್ಲಿ ಕಮ್ಯೂನಿಷ್ಟ ಪಕ್ಷವನ್ನು ಸಂಘಟನೆ ಮಾಡಿ ಪ್ರಮುಖ ನಾಯಕರಾಗಿದ್ದು ತೆಲಂಗಾಣ ಚಳುವಳಿಯಿಂದಾಗಿ ಜೈಲು ಸೇರಿ ಅಲ್ಲಿಂದ ಹೊರ ಬರಲು ಕಾಂಗ್ರೆಸ್ ಸೇರಿದ್ದ ಕಾ.ಎಸ್.ಎನ್. ಹೊಳ್ಳರು ಜಿಲ್ಲೆಗೆ ಬಂದು ಇಂಟಕ (Indian National Trade Union Congress) ಕಾರ್ಮಿಕ ಸಂಘಟನೆಗೆ ತೊಡಗಿದ್ದರು. ಕಾರ್ಮಿಕ ಮತ್ತು ಸಾಮಾನ್ಯ ಜನರನ್ನು ತನ್ನ ಮಾತುಗಳಿಂದ ಮೋಡಿ ಮಾಡುವ ಮಹಾನ್ ಶಕ್ತಿಯುತ ಭಾಷಣಕಾರರಾಗಿದ್ದ ಕಾಮ್ರೇಡ ಹೊಳ್ಳರಿಂದಾಗಿ ಇಂಟಕ್ ಜಿಲ್ಲೆಯಲ್ಲಿ ಬಲವಾಗ ತೊಡಗಿತ್ತು. ಬಂಟವಾಳದಲ್ಲಿಯೂ ಇಂಟಕ್ ಶಾಖೆಯನ್ನು ಪ್ರಾರಂಭಿಸಲು ಶ್ರೀ ಜನ್ನ ಶೆಟ್ಟಿ ಮತ್ತು ಶ್ರೀನಿವಾಸ ಬಳೆಗಾರರಿಗೆ ನಾನು ಸಹಾಯಕನಾದೆ.

ಶ್ರೀ ವೆಂಕಟರಮಣ ದೇವಸ್ಥಾನದ ಧಾರ್ಮಿಕ ಕಾರ್ಯಗಳಲ್ಲಿ ಉತ್ಸವಾದಿಗಳಲ್ಲಿ ಶ್ರೀ ಕಾಶೀಮಠ ಸಂಸ್ಥಾನದ ಗುರುಗಳಾದ ಶ್ರೀ ಸುಧೀಂದ್ರ ತೀರ್ಥರ ಬಂಟವಾಳ ಮೊಕ್ಕಾಂ ಸಮಯದಲ್ಲಾಗುತ್ತಿದ್ದ ಹಲವಾರು ಧಾರ್ಮಿಕ ಕೆಲಸ ಕಾರ್ಯಗಳಲ್ಲಿಯೂ ಮುಂದಾಗಿದ್ದೆ. ಮದುವೆ ನೆಂಟಸ್ತಿಕ, ಆರ್ಥಿಕವಾಗಿ ಹಿಂದುಳಿದ ಹೆಣ್ಣು ಮಕ್ಕಳ ತಂದೆ ತಾಯಿಯವರಿಗೆ, ಮಕ್ಕಳ ಮದುವೆಗೆ ಹಣ ಕೂಡಿಸುವುದು, ಮದುವೆ ಸಮಯದಲ್ಲಿ ಕಾರ್ಯ ಸಂಭಾಳಿಸುವುದು ಮುಂತಾದ ಸಂದರ್ಭಗಳಲ್ಲಿ ನೆರವಾಗುತ್ತಿದ್ದೆ.

ಸರಸ್ವತಿ ಸಂಗೀತ ಶಾಲೆ

1958ರಲ್ಲಿ ಹಿಂದೂಸ್ತಾನಿ ಸಂಗೀತ ಪ್ರಿಯರೂ, ಶಿಕ್ಷಕರೂ ಆಗಿದ್ದ ಶ್ರೀ ಗುರುಪುರ ಮಾಧವ ಭಟ್ಟರ ಮುಂದಾಳತ್ವದಲ್ಲಿ ಪಂಚಾಯತ್ ಬೋರ್ಡ್ ಅಧ್ಯಕ್ಷರಾಗಿದ್ದ ಶ್ರೀ ಬಿ. ವೆಂಕಟೇಶ ಬಾಳಿಗರು ಅಧ್ಯಕ್ಷರಾಗಿ ಶ್ರೀ ಜಕ್ರಿಬೆಟ್ಟು ಸರ್ವೋತ್ತಮ ಶೆಣೈ ಕಾರ್ಯದರ್ಶಿಯಾಗಿ ಉಳ್ಳ ಶ್ರೀ ಸರಸ್ವತೀ ಸಂಗೀತ ಕಲಾ ಪ್ರಸಾರಕ ಸಂಘವನ್ನು ಸ್ಥಾಪಿಸಿದೆವು. ಮಂಗಳೂರಿಗೆ ಬರುತ್ತಲಿದ್ದ ಸಂಗೀತಕಾರರನ್ನು ಬಂಟ್ವಾಳಕ್ಕೆ ಬರಮಾಡಿ ಗಾಯನ ಕಚೇರಿ ನಡೆಸುವುದು ಉದ್ದೇಶವಾಗಿತ್ತು. ಎರಡನೇ ವರ್ಷ ಶ್ರೀ ಬೊಳಂತೂರು ಲಕ್ಷ್ಮೀ ನಾರಾಯಣ ಪ್ರಭು ಅಧ್ಯಕ್ಷರಾಗಿ ನಾನು ಕಾರ್ಯದರ್ಶಿಯಾಗಿ ಸಂಗೀತ ಕಲಾ ಪ್ರಸಾರಕ ಸಂಘಕ್ಕೆ ಆಯ್ಕೆಯಾಗಿದ್ದೆವು. ಆಗ ನಾನು ಒಂದು ಪ್ರಬಂಧವನ್ನು ಪ್ರಸ್ತುತ ಪಡಿಸಿದ್ದೆ. ಊರಿನ ಸಂಗೀತ ಪ್ರಿಯರಿಗೆ ಮುಖ್ಯವಾಗಿ ಎಳೆಯರಿಗೆ ವ್ಯವಸ್ಥಿತವಾಗಿ ಹಿಂದೂಸ್ತಾನಿ ಮತ್ತು ಕರ್ನಾಟಕೀ ಸಂಗೀತ ಶಿಕ್ಷಣ ನೀಡಲು 'ಸರಸ್ವತೀ ಸಂಗೀತ ಶಾಲೆ'ಯನ್ನು ಸಂಘದ ವತಿಯಿಂದ ಪ್ರಾರಂಭ ಮಾಡಬೇಕು

ಎಂಬುದಾಗಿ ನನ್ನ ವಿವರವಾದ ಪ್ರಬಂಧವಾಗಿತ್ತು. ಎಲ್ಲರೂ ನನ್ನ ಸೂಚನೆಗಳನ್ನು ಒಪ್ಪಿಕೊಂಡರು. ಶ್ರೀ ಗುರುಪುರ ಮಾಧವ ಭಟ್ಟರು ಉಡುಪಿಯ, ಎಕಾಡೆಮಿ ಆಫ್ ಮ್ಯುಸಿಕ್ ಶಾಲೆಗೆ ಗುರುಗಳಾಗಿ ಹೋದ ಮೇಲೆ, ನಾನು ಗುಲ್ವಾಡಿ ರತ್ನಾಕರ ಭಟ್ಟ, ಮುಂತಾದವರನ್ನು ಭೇಟಿಯಾಗಿ ಮಂಗಳೂರಿನಿಂದ ಅವರು ಬಂದು ನಮ್ಮ ಸಂಗೀತ ಶಾಲೆಯ ಶಿಕ್ಷಕರಾಗಿ ಶಿಕ್ಷಣ ನೀಡಲು ಆಮಂತ್ರಿಸಿದ್ದೆ. ಅವರು ಸಂಗೀತದ ಮೇಲೆ ಅಭಿಮಾನದಿಂದ ಬಸ್ಸಿನಲ್ಲಿ ಬಂಟವಾಳಕ್ಕೆ ಬಂದು ನಮಗೆ ಸಂಗೀತ ಶಿಕ್ಷಣ ನೀಡಿ ಹೋಗುತ್ತಿದ್ದರು. ಈಗಲೂ ಸಂಗೀತ ಶಾಲೆ ನಡೆದುಕೊಂಡು ಬರುತ್ತಲಿದೆ. ಸರಕಾರ ನಡೆಸಿಕೊಂಡು ಬರುವ ಸಂಗೀತ ಪರೀಕ್ಷೆಗಳಿಗೆ ಶಾಲೆಯ ವಿದ್ಯಾರ್ಥಿಗಳು ಪ್ರತೀ ವರ್ಷ ಹಾಜರಾಗಿ ಉತ್ತಮ ಫಲಿತಾಂಶ ತರುತ್ತಲಿದ್ದಾರೆ. ಅವರ ಪೈಕಿ ಒಂದಿಬ್ಬರು ಅಮೇರಿಕಾ, ಗಲ್ಫ ದೇಶಗಳಲ್ಲಿ ಇದ್ದಾರೆ.

1959ರಲ್ಲಿ ನನಗೆ ಮದುವೆಯಾದ ಮೇಲೂ ಆರ್ಥಿಕವಾಗಿ ಬಹಳ ಕಷ್ಟದ ದಿನಗಳಲ್ಲಿಯೂ, ನಾನು ನನ್ನ ವೃತ್ತಿ ಜೀವನದೊಟ್ಟಿಗೆ ಸಾಮಾಜಿಕ, ರಾಜಕೀಯ ಚಟುವಟಿಕೆಯನ್ನು ನಡೆಸಿಕೊಂಡು ಬರುತ್ತಲಿದ್ದೆ.

ನೇತ್ರಾವತಿ ನದಿ ತಟದ ಮೇಲಿದ್ದ ಮನೆಯನ್ನು ಬಿಟ್ಟು ಕಂಮ್ತಿಯವರ ಓಣಿಯಲ್ಲಿರುವ ಮನೆಗೆ ಹೋಗಬೇಕಾಯಿತು. ನನ್ನ ಮಗಳು ವಿದ್ಯಾ ಹುಟ್ಟಿದಳು. ನನ್ನ ತಂಗಿ ವಸಂತಿಗೆ ಮದುವೆ ನಿಶ್ಚಯವಾಗಿ ಮುಂಬಯಿಯಲ್ಲಿ ಮದುವೆಯಾಯಿತು. (ಅದೇ ದಿವಸಗಳಲ್ಲಿ ಭಾರತೀಯ ಸೈನ್ಯ ಗೋವಾವನ್ನು ಪೋರ್ಚುಗೀಸರ ನಿರಂಕುಶ ಪ್ರಭುತ್ವದಿಂದ ಮುಕ್ತ ಮಾಡಿತ್ತು. ಮುಂಬಯಿ ಹಾದಿಯಲ್ಲಿ ನಾವು ಬೆಳಗಾವಿ ದಾಟುವಾಗ ಭಾರತೀಯ ಸೈನ್ಯ ಗೋವಾ ಕಡೆ ಮುನ್ನಡೆಯುತ್ತಿತ್ತು ಮತ್ತು ಒಂದೆರಡು ದಿನಗಳಲ್ಲಿಯೇ ಗೋವಾ ಮುಕ್ತಿಯಾಯಿತು).

ವಸಂತಿಯ ಮದುವೆಯಾಗಿ ನಾವು ಬಂಟವಾಳಕ್ಕೆ ಹಿಂತಿರುಗಿ ಬಂದ ವೇಳೆಯಲ್ಲಿಯೇ ಸಿ.ಪಿ.ಸಿ. ಕಂಪೆನಿಯಿಂದ ನನಗೆ ಮಂಗಳೂರಿಗೆ ಟ್ರಾನ್ಸ್‌ಫರ್ ಆದ ಪತ್ರ ಬಂದಿತು. ಬರೇ ರೂ. ೬೦ ಮಾಸಿಕ ಸಂಬಳದಲ್ಲಿ ಮಂಗಳೂರಿಗೆ ಹೋಗಿ ನೌಕರಿ ಮಾಡುವುದು ಕಷ್ಟವೆಂದು ನನ್ನ ಪರಿಸ್ಥಿತಿಯನ್ನು ಚುನಾವಣೆಯ ಸಮಯದಲ್ಲಿ ಬಂಟವಾಳಕ್ಕೆ ಬಂದ ಶ್ರೀ ಟಿ.ಎ.ಪೈಯವರಿಗೆ ನನ್ನ ಹಿತಚಿಂತಕರು ಹೇಳಿದರು. ಪೈಗಳು ತಾನು ಸಿ.ಪಿ.ಸಿ.ಯ ಮೆನೇಜಿಂಗ್ ಡೈರೆಕ್ಟರ್ ಶ್ರೀ ವ್ಹಿ. ಎಸ್. ಕುಡ್ವಾರಿಗೆ ಹೇಳಿ ಟ್ರಾನ್ಸ್‌ಫರ್ ರದ್ದು ಮಾಡಿಸಲು ಪ್ರಯತ್ನಿಸುವುದಾಗಿ ಹೇಳಿದರು. (ಶ್ರೀ ಕುಡ್ವರು ಶ್ರೀ ಟಿ.ಎ.ಪೈ.ಗಳವರ ಸೋದರ ಮಾವನೂ ಆಗಿದ್ದರು). ಆದರೆ ನಿಷ್ಠುರ ಮತ್ತು ನಿರಂಕುಶ ಸ್ವಭಾವದ ಕುಡ್ವರು ನನ್ನ ಟ್ರಾನ್ಸ್‌ಫರ್ ರದ್ದು ಮಾಡಲಿಕ್ಕಾಗುವುದಿಲ್ಲವಾಗಿ ಬರೆದರು. ಆಗ ಬಂಟವಾಳಕ್ಕೆ ಬಂದ ಶ್ರೀ ಟಿ.ಎ. ಪೈಗಳವರು ನನ್ನನ್ನು ಹತ್ತಿರ ಕರೆದು 'ನೋಡು ವಾಮನ್, ನಿನ್ನ ಬಗ್ಗೆ ಕುಡ್ವಾ ಮಾಮರನ್ನು ಸಂಪರ್ಕಿಸಿ ಪ್ರಯತ್ನಗಳನ್ನು ಮಾಡಿದ್ದೇನೆ. ಆದರೆ ಅದು ಸಫಲವಾಗುವುದು ಕಷ್ಟ. ಆದುದರಿಂದ ನೀನು ಸ್ವಂತವಾಗಿ ವ್ಯಾಪಾರ ಮಾಡುವುದಿದ್ದರೆ ನಾನು ವೈಯಕ್ತಿಕವಾಗಿ ರೂ. 10,000/- ಕೊಡುತ್ತೇನೆ ಅಥವಾ ನೀನು ನಮ್ಮ ಬ್ಯಾಂಕಿಗೆ ಸೇರುವುದಾದಲ್ಲಿ ನಿನಗೆ ಕ್ಲಾರ್ಕ್ ಕೆಲಸ

ಕೊಡುತ್ತೇನೆ. ಆಯ್ಕೆ ನಿನಗೆ ಬಿಟ್ಟಿರುತ್ತೇನೆ. ಯಾವುದಕ್ಕೂ ನೀನು ಹೆದರುವುದು ಬೇಡಾ. ನಾನಿದ್ದೇನೆ' ಎಂದು ಹೇಳಿದರು. ಟಿ.ಎ.ಪೈ.ಗಳ ಆಶ್ವಾಸನೆ ಕಷ್ಟ ಆಪತ್ತುಗಳ ಗೋಂಡಾರಣ್ಯದಲ್ಲಿದ್ದ ನನಗೆ ದೇವರ ವರದಾನವೇ ಆಗಿತ್ತು.

ಮುಂದೆ ನಾನು ಒಮ್ಮೆ ಹಿರಿಯರಾದ ಶ್ರೀ ಬಂಟವಾಳ ನಾರಾಯಣ ನಾಯಕರ ಒಟ್ಟಿಗೆ ಉಡುಪಿಗೆ ಹೋಗಿ ಉಪೇಂದ್ರಭಾಗನಲ್ಲಿದ್ದ ಸಿಂಡಿಕೇಟ್ ಬ್ಯಾಂಕ್ ಹೆಡ್ ಆಫೀಸಿಗೆ ಹೋಗಿ ಶ್ರೀ ಟಿ.ಎ.ಪೈಗಳನ್ನು ಭೇಟಿ ಮಾಡಿದೆ. ನನಗೆ ಕೂಡಲೇ ಸಿಂಡಿಕೇಟ್ ಬ್ಯಾಂಕಿನ ಪಾಣೆಮಂಗಳೂರು ಶಾಖೆಗೆ ಕ್ಲಾರ್ಕ್ ಆಗಿ ನೇಮಿಸಿದ ಪತ್ರ ಕೊಟ್ಟರು. ನಂತರವೂ ಅವರು ನನಗೆ ತುಂಬಾ ಉದಾರವಾಗಿ ಭಡ್ತಿ ಕೊಟ್ಟಿದ್ದರು. ನಾನು ೯೭ಲಲಳರಲ್ಲಿ ನನ್ನ ತುಂಬೆಯ ಬಸ್ತಿ ಗಾರ್ಡನ್ಸ್‌ನಲ್ಲಿ ಹೊಸದಾಗಿ ಮನೆ ಮಾಡಿದಾಗ ಅವರ ಭಾವಚಿತ್ರ ಇಟ್ಟಿರುತ್ತೇನೆ ಮತ್ತು ನನಗೆ ಅವರ ಬಗ್ಗೆ ಇರುವ ಒಟ್ಟೂ ಭಾವನೆಗಳ ಸಂಗಮವಾಗಿ "I saw God in him" ಎಂದು ಪಟ್ಟಿ ಹಚ್ಚಿರುತ್ತೇನೆ.

ಸಿಂಡಿಕೇಟ್ ಬ್ಯಾಂಕ್‌ನಲ್ಲಿ

ಶ್ರೀ ಟಿ.ಎ. ಪೈಗಳ ದಯೆಯಿಂದ ಸಿಂಡಿಕೇಟ್ ಬ್ಯಾಂಕಿನ ಪಾಣೆಮಂಗಳೂರು ಶಾಖೆಯಲ್ಲಿ ಕ್ಲಾರ್ಕ್ ಆಗಿ 9.4.1962ರಲ್ಲಿ ಸೇರಿದೆ. ಶ್ರೀ ಹೆಬ್ರಿ ನಾಗೇಶ ಶೆಣೈಯವರು ಮೆನೇಜರ್ ಆಗಿ ಹೊಸತಾಗಿ ಬಂದು ಸೇರಿದ್ದರು. ಅವರಿಗೆ ಊರಿನ ಜನರ ಹೆಚ್ಚಾಗಿ ಪರಿಚಯ ಇರಲಿಲ್ಲ. ಹೀಗಾಗಿ ನಾನು ಅವರಿಗೆ ಪಾಣೆಮಂಗಳೂರು, ಜೋಡುಮಾರ್ಗ (ಬಿ.ಸಿ.ರೋಡ್) ಹಾಗೂ ಸುತ್ತಮುತ್ತಲಿನ ಪುರಪ್ರಮುಖರ ಮತ್ತಿತರರ ಪರಿಚಯ ಮಾಡಿಸಿದೆ. ಇದರಿಂದಾಗಿ ನನ್ನ ಮೇಲೆ ಅವರಿಗೆ ವಿಶೇಷ ಪ್ರೀತಿ ಗೌರವ ಬಂದಿತ್ತು ಮತ್ತು ಶಾಖೆಯ ಡಿಪಾಜಿಟ್ ಜಾಸ್ತಿಯಾಗಲು ಜೊತೆಯಾಗಿ ಶ್ರಮಿಸುತ್ತಿದ್ದೆವು. ಆದರಿಂದಾಗಿ ಬರೇ 20 ತಿಂಗಳ ಒಳಗೆ ನನಗೆ ಬೇಂಕಿನಲ್ಲಿ ಆಫೀಸರ್ ಆಗಿ ಭಡ್ತಿಯಾಯಿತು.

1965ನೇ ಇಸವಿಯಲ್ಲಿ ಸಿಂಡಿಕೇಟ್ ಬ್ಯಾಂಕಿನಲ್ಲಿ 'ಕುಮ್ಯುಲೇಟಿವ್ ಡಿಪಾಜಿಟ್' ಎಕೌಂಟ್‌ಗಳ ಬಗ್ಗೆ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಅದರಲ್ಲಿ ಸಿಂಡಿಕೇಟ್ ಬ್ಯಾಂಕಿನಲ್ಲಿ ನಾನು ಎರಡನೇ ಸ್ಥಾನ ಪಡೆದು ರೂ. 700/- ಬಹುಮಾನ ಪಡೆದಿದ್ದೆ. ಆಗಿನ ಬ್ಯಾಂಕಿನ ಮೆನೇಜಿಂಗ್ ಡೈರೆಕ್ಟರ್ ಶ್ರೀ ಟಿ.ಎ. ಪೈಯವರನ್ನು ಪಾಣೆಮಂಗಳೂರಿಗೆ ಬರಮಾಡಿ ಕೊಂಡು, ಬ್ಯಾಂಕಿನ ಗ್ರಾಹಕರನ್ನು ಆಮಂತ್ರಿಸಿ ಟಿ. ಪಾರ್ಟಿ ಕೊಟ್ಟಿದ್ದೆ. ಬಹುಮಾನ ಬಂದಂತಹ ಸಂತೋಷವನ್ನು ಗ್ರಾಹಕರೊಡನೆ ಹಂಚಿಕೊಳ್ಳುವ ನನ್ನ ಮನೋಭಾವವನ್ನು ಶ್ರೀ ಟಿ.ಎ.ಪೈಗಳು ಬಾಯ್ತುಂಬ ಹೊಗಳಿದರು. ಅಂತಹದೇ ವಿಕ್ರಮಗಳನ್ನು ನಾನು ಬ್ಯಾಂಕಿನಲ್ಲಿ ಹಲವು ಬಾರಿ ಸಾಧಿಸಿದ್ದೆ.

ಆಗ ತಾನೇ 1966ರಲ್ಲಿ 'ರೈತರಿಗೆ ಸಾಲ (Farm loan) ಯೋಜನೆಯನ್ನು ಶ್ರೀ ಟಿ.ಎ.ಪೈಗಳು ರಿಜರ್ವ್ ಬ್ಯಾಂಕಿನ ಆದೇಶಗಳನ್ನು ಲೆಕ್ಕಿಸದೇ ಸಿಂಡಿಕೇಟ್ ಬ್ಯಾಂಕಿನಿಂದ

ಪ್ರಾರಂಭಿಸಿದ್ದರು. ಅದರ ಪ್ರಯೋಜನಗಳನ್ನು ರೈತರಿಗೆ ಪಾವತಿಸಲು ನಾನು ಪಾಣೆಮಂಗಳೂರು, ಬಂಟವಾಳದ ಹತ್ತಿರದ ಹಲವಾರು ಹಳ್ಳಿಗಳಲ್ಲಿ ರೈತರ ಸಮಾವೇಶಗಳನ್ನು ಏರ್ಪಡಿಸಿ ಕೃಷಿಗಾಗಿ ನೀರಿನ ಪಂಪ್‌ಗಳನ್ನು ಅಳವಡಿಸಲು, ಗದ್ದೆ ಉಳಲಿಕ್ಕಾಗಿ ಟ್ರೆಲರ್‌ಗಳ ಉಪಯೋಗವನ್ನು ಪ್ರೋತ್ಸಾಹಿಸಲು ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸಿದ್ದೆ.

ಇದರಿಂದಾಗಿ ಕೃಷಿ ಸಾಲ ಯೋಜನೆಯನ್ನು ವ್ಯಾಪಕವಾಗಿ ಪ್ರಚಾರ ಮಾಡಿದ ನನ್ನ ಪರಿಶ್ರಮ ಮತ್ತು ಆಸಕ್ತಿಗಳನ್ನು ಮನಗಂಡ ಶ್ರೀ ಟಿ.ಎ.ಪೈ ಯವರು 1968ರಲ್ಲಿ ನನ್ನನ್ನು ಬೆಳಗಾವಿ ಜಿಲ್ಲೆಯ ರಾಯಭಾಗದಲ್ಲಿ ಪ್ರಾರಂಭವಾಗಲಿರುವ ನೂತನ ಶಾಖೆಗೆ ಮೆನೇಜರ್ ಆಗಿ ನಿಯುಕ್ತಿ ಮಾಡಿದರು.

ಬಂಜರು ಭೂಮಿಯಾಗಿದ್ದ ರಾಯಭಾಗ ಮತ್ತು ಗೋಕಾಕ ತಾಲೂಕುಗಳಿಗೆ, ಮಲಪ್ರಭಾ ಎಡದಂಡೆ ಕಾಲುವೆಯಿಂದ ಎಲ್ಲಾ ಹೊಲಗದ್ದೆಗಳಿಗೆ ನೀರುಣಿಸುವ ಸೌಲಭ್ಯ ಸಿಕ್ಕಿದುದರಿಂದ ಕೃಷಿ ಸಾಲ ಯೋಜನೆಗೆ ಫಲವತ್ತಾದ ಪ್ರದೇಶವಾಗಿ, ರೈತರೆಲ್ಲಾ ಆಗ ತಾನೇ ಶ್ರೀಮಂತರಾಗಲು ಪ್ರಾರಂಭವಾಗುವಂತಾಗಿತ್ತು. ಅಂತಹ ಪ್ರದೇಶದಲ್ಲಿ ರೈತರಿಗೆ ರಾಯಭಾಗ ಶಾಖೆ ನೂತನ ಸೌಲಭ್ಯವೂ, ವರದಾನವೂ ಆಗಿತ್ತು. ಇದರಿಂದಾಗಿ ನನಗೆ ಹಗಲು ರಾತ್ರಿ ಕೆಲಸ ಮಾಡುವ, ಊರಿಂದೂರಿಗೆ ಪ್ರವಾಸ ಮಾಡುವ ಕೆಲಸ ಮಾಡಬೇಕಾಗಿ ಬಂತು. ನನ್ನ ಪ್ರಯತ್ನಗಳಿಂದಾಗಿ ಹಳ್ಳಿಗಳ ಶಾಖೆಗಳ ವಿಭಾಗದಲ್ಲಿ, ಠೇವಣಿ ಸಂಗ್ರಹದಲ್ಲಿಯೂ, ಕೃಷಿ ಸಾಲ ಯೋಜನೆಯಲ್ಲಿಯೂ ಪ್ರಥಮ ಸ್ಥಾನದಲ್ಲಿ ರಾಯಭಾಗ ಶಾಖೆ ಹಲವು ಬಾರಿ ಪ್ರಶಸ್ತಿಗಳನ್ನು ಗಳಿಸುವಂತಾಗಿತ್ತು. ಉಳಿತಾಯ ಖಾತೆ ಮತ್ತು ಠೇವಣಿ ಸಂಗ್ರಹದಲ್ಲಿ 1970ರಲ್ಲಿ ಆಗಿನ ಚೇಯರ್‌ಮ್ಯಾನ್ ಆಗಿದ್ದ ಶ್ರೀ ಕೆ.ಕೆ. ಪೈಗಳವರು ಬೆಳಗಾವಿಗೆ ಬಂದಾಗ ಏರ್ಪಡಿಸಿದ ಮೆನೇಜರುಗಳ ಸಭೆಯಲ್ಲಿ ನನಗೆ ಬಂಗಾರದ ಪದಕವನ್ನು ನೀಡಿದ್ದರು.

ಭಾರತ ಸರಕಾರ ಪ್ರಾರಂಭಿಸಿದ ಸಣ್ಣ ಸಾಲ ಯೋಜನೆ ಮತ್ತು Loan Mela ಗಳು ಜ್ಯಾರಿಗೆ ಬರುವ ಎಷ್ಟೋ ವರ್ಷ ಮುಂಚೆಯೇ ನಾನು ರಾಯಭಾಗದಲ್ಲಿ ಬಡರೈತರಿಗೆ ಊಳುವುದಕ್ಕಾಗಿ ಎತ್ತು ಕೋಣಗಳನ್ನು ಖರೀದಿಸಲು, ಕಾರ್ಮಿಕರಿಗೆ ಸೈಕಲ್ ಖರೀದಿಸಲು ಸಾಲಮೇಳಗಳನ್ನು ಸಂಘಟಿಸಿದ್ದೆ. ಅದರ ಪೋಟೋಗಳು ಸಿಂಡಿಕೇಟ್ ಬ್ಯಾಂಕಿನ 'ಜಯಂಟ್' ಗೃಹ ಪತ್ರಿಕೆ (Giant House Magazine) ನಲ್ಲಿಯೂ ಮತ್ತು ವಾರ್ಷಿಕ ವರದಿಗಳ ಪ್ರಕಟಣೆಯ ಮುಖಪುಟದಲ್ಲಿ ಮುದ್ರಿತವಾಗುತ್ತಿತ್ತು.

ನಂತರ ಪಾಣೆಮಂಗಳೂರು ಶಾಖೆಯ ನೂತನ ಕಟ್ಟಡ 1972ರಲ್ಲಿ ಉದ್ಘಾಟನೆಯಾದಾಗ ನನ್ನನ್ನು ಆಗಿನ ಬ್ಯಾಂಕ್ ಅಧ್ಯಕ್ಷ ಶ್ರೀ ಕೆ.ಕೆ. ಪೈ.ಗಳವರು ಪಾಣೆಮಂಗಳೂರು ಶಾಖೆಯ ಮೆನೇಜರ್ ಆಗಿ ವರ್ಗ ಮಾಡಿದ್ದರು. ಆಗೊಮ್ಮೆ ಜಗದ್ವಿಖ್ಯಾತ

ಬೌಲರ ಕ್ರಿಕೆಟರ್ ಶ್ರೀ ಚಂದ್ರಶೇಖರ ಅವರನ್ನು ಬ್ರಾಂಚಿಗೆ ಬರಮಾಡಿ ಬೆಳ್ಳಿಯ ಬೋಲವೊಂದನ್ನು ನೀಡಿ ಸನ್ಮಾನಿಸಿದ್ದೆ. ಖ್ಯಾತ ಮರದ ಉದ್ಯಮಿ ತುಂಬೆಯ ಶ್ರೀ ಬಿ. ಅಹ್ಮದ ಹಾಜೀ ಮೊಹಿಯುದ್ದೀನ ಅವರು ಆ ಬಾಲನ್ನು ನೀಡಿದ್ದರು.

ರೋಟರಿ ಕ್ಲಬ್‌ಗಳಲ್ಲಿ

ಅದೇ ದಿನಗಳಲ್ಲಿ 1972ರಲ್ಲಿ ನಾನು ಖ್ಯಾತ ವಕೀಲರಾಗಿದ್ದ ಶ್ರೀ ಎನ್. ವಿಶ್ವನಾಥ ಕುಪ್ತ ಅವರ ಅನುಮೋದನೆಯಿಂದಾಗಿ ಬಂಟವಾಳ ರೋಟರಿ ಕ್ಲಬ್ಬಿಗೆ ಸದಸ್ಯನಾಗಿ ಸೇರಿಸಲ್ಪಟ್ಟೆ. 1973ರಲ್ಲಿ ಬಂಟವಾಳ ರೋಟರಿ ಕ್ಲಬ್ಬಿನ Social Service Director ಆಗಿ ಆರಿಸಲ್ಪಟ್ಟೆ. ಆಗ ನನ್ನ ಜೊತೆಗಾರನಾಗಿ ಶ್ರೀ ಪಿ. ದೇವದಾಸ ಶೆಣೈ (ದತ್ತು ಶೆಣೈ) ಯವರಿದ್ದರು. ಬಡವ ಬಲ್ಲಿದರ ಬಗ್ಗೆ ಅನುಕಂಪವುಳ್ಳ ದತ್ತು ಶೆಣೈ ನನ್ನ ಎಲ್ಲಾ ರೋಟರಿ ಕಾರ್ಯಗಳಲ್ಲಿ ತುಂಬು ಹೃದಯದಿಂದ ಪ್ರೋತ್ಸಾಹಿಸುತ್ತಿದ್ದರು. ನಮ್ಮಿಬ್ಬರ ಗೆಳೆತನದಿಂದಾಗಿ 1974ರಲ್ಲಿ ನಾನು ಪ್ರಥಮ ರೋಟರಿ ನೇತ್ರ ಯಜ್ಞ (Eye camp), ದಂತ ಯಜ್ಞ (Dental camp) ಗಳನ್ನು ಏರ್ಪಡಿಸಿದ್ದೆ.

1974 ಇಸವಿಯಲ್ಲಿ ನೇತ್ರಾವತಿ ನದಿಗೆ ಮಹಾಪೂರ ಬಂದುದರಿಂದ ಬಂಟವಾಳ ತಾಲೂಕಿನ ನೇತ್ರಾವತಿ ನದಿದಂಡೆಯ ಮೇಲಿರುವ ನೂರಾರು ಹಳ್ಳಿಗಳಲ್ಲಿ ಸಾವಿರಾರು ಮನೆ ಅಂಗಡಿಗಳು ನಾಶವಾಗಿದ್ದವು. ನಾನು ಕೂಡಲೇ ಕಾರ್ಯ ಪ್ರವೃತ್ತನಾಗಿ ನೆರೆ ನೀರು ಇಳಿದ ಕೂಡಲೇ ಹಳ್ಳಿಗಳನ್ನು ಸಂದರ್ಶಿಸಿದೆ. ಶ್ರೀ ದೇವದಾಸ ಶೆಣೈಯವರೂ ನನ್ನೊಡನಿದ್ದರು. ನೆರೆಯ ಹಾವಳಿಯಿಂದಾಗಿ ನಿರಾಶ್ರಿತರಾದವರಿಗಾಗಿ ನಾನು ಮುಂದಾಗಿ ಬಂಟವಾಳ, ಪಾಣೆಮಂಗಳೂರಿನ ಸರಹದ್ದಿನಲ್ಲಿ 8-10 ಕಡೆಗಳಲ್ಲಿ 'ಗಂಜಿ ಕೇಂದ್ರ'ಗಳನ್ನು ಸ್ಥಳೀಯ ಗಣ್ಯರ ನೆರವಿನಿಂದ ಪ್ರಾರಂಭಿಸಿದೆ. ಅಲ್ಲದೇ ನಾನು ಬಂಟವಾಳ ಶ್ರೀ ದೇವಳದ ಆಡಳಿತ ಮೊಕ್ತೇಸರ ಹಾಗೂ ಉನ್ನತ ಸಾಮಾಜಿಕ ಧಾರ್ಮಿಕ ನೇತಾರರಾಗಿದ್ದ ಶ್ರೀ ಬಂಟ್ವಾಳ ದಾಮೋದರ ಪ್ರಭುಗಳವರೊಂದಿಗೆ ನಮ್ಮ ಬ್ಯಾಂಕಿನ ಚೇಯರ್‌ಮೆನ್ ಶ್ರೀ ಕೆ.ಕೆ.ಪೈಗಳವರನ್ನು ಭೇಟಿ ಮಾಡಿ, ಪರಿಸ್ಥಿತಿಯನ್ನು ನಿವೇದಿಸಿ, ಅವರನ್ನು ಬಂಟವಾಳಕ್ಕೆ ಆಮಂತ್ರಿಸಿ ಪರಿಸ್ಥಿತಿಯನ್ನು ಅವಲೋಕಿಸಿ ನಷ್ಟ ಕಷ್ಟಗಳನ್ನು ಎದುರಿಸುತ್ತಿರುವ ಸಣ್ಣ ವ್ಯಾಪಾರಿಗಳಿಗೆ ಉದ್ಯಮಿಗಳಿಗೆ ಆರ್ಥಿಕ ನೆರವನ್ನು (ಬ್ಯಾಂಕ್ ಸಾಲ) ನೀಡಲು ವಿನಂತಿಸಿದೆ. ಅವರು ನಮ್ಮ ಮನವಿಗೆ ಸ್ಪಂದಿಸಿ ಆಗಿನ ಸಿಂಡಿಕೇಟ್ ಬ್ಯಾಂಕ್ ಜನರಲ್ ಮೆನೇಜರ್ ಶ್ರೀ ಹೆಚ್.ವ್ಹಿ. ಕಾಮತ್ ಅವರನ್ನು ಕರಕೊಂಡು ಬಂದು ಬಂಟವಾಳ, ಪಾಣೆಮಂಗಳೂರು, ಉಪ್ಪಿನಂಗಡಿಗಳ ನೆರೆ ಪೀಡಿತ ಪ್ರದೇಶಗಳನ್ನು ಸಂದರ್ಶಿಸಿ ಸಣ್ಣ ವ್ಯಾಪಾರಿಗಳಿಗೆ ಶೇ. 4ರ ಬಡ್ಡಿಯಲ್ಲಿ ರೂ. 5000/- ವರೆಗೆ ಸಾಲ ಕೊಡುವುದಾಗಿ ಅಲ್ಲದೇ ದೊಡ್ಡ ವ್ಯಾಪಾರಿಗಳಿಗೆ, ಉದ್ಯಮದವರಿಗೆ ಬ್ಯಾಂಕಿನಿಂದ ಉದಾರವಾಗಿ (Liberal) ಸಾಲ ಮಂಜೂರು ಮಾಡಿ ನೆರವಾಗುವುದಾಗಿ ಘೋಷಿಸಿದರು.

ರೋಟರಿ ನೇತ್ರ ಯಜ್ಞ, ದಂತಯಜ್ಞ, ನೆರೆ ಪರಿಹಾರದ ಕಾರ್ಯಗಳಿಗಾಗಿ ಬಂಟವಾಳ ರೋಟರಿ ಕ್ಲಬ್ಬಿನ ಹೆಸರು ಜಗತ್ ಜಾಹೀರವಾಯಿತು ಮತ್ತು ಮೈಸೂರಿನಲ್ಲಿ ರೋಟರಿ 318 ಜಿಲ್ಲಾ ಸಮ್ಮೇಳನದಲ್ಲಿ ವಿಶ್ವ ರೋಟರಿ ಅಧ್ಯಕ್ಷರ Special Significance Award ನ್ನು ನಾನು ಸ್ವೀಕರಿಸಿದೆ.

ಮುಂದೆ ನಾನು ಮೂಡುಬಿದಿರೆಯಲ್ಲಿ ಸಿಂಡಿಕೇಟ್ ಬ್ಯಾಂಕ್ ಮೆನೇಜರ್ ಆಗಿದ್ದಾಗ (1984-1988), ರೋಟರಿ ಜಗತ್ತಿನಲ್ಲಿ ಅದಾಗಲೇ ಪ್ರಖ್ಯಾತನಾಗಿದ್ದ ನನಗೆ ರೋಟರಿ ಕ್ಲಬ್ ಸದಸ್ಯನಾಗಿ ಸೇರಿದೆ. ಮುಂದೆ ಎರಡನೇ ಬಾರಿಗೆ ಅಲ್ಲಿಯ ರೋಟರಿ ಕ್ಲಬ್ಬಿನ ಅಧ್ಯಕ್ಷನೂ ಆಗಿದ್ದೆ. ಅದೇ ಸಮಯದಲ್ಲಿ ಕರ್ನಾಟಕ ರಾಜ್ಯ ಸರಕಾರದಲ್ಲಿ ಧಾರ್ಮಿಕ ದತ್ತಿ ಮಂತ್ರಿಗಳಾಗಿದ್ದ ರೋ. ಕೆ. ಅಮರನಾಥ ಶೆಟ್ಟಿಯವರ ಅಪೇಕ್ಷೆಯಂತೆ ಎರಡು ವರ್ಷ ರೋಟರಿ ನೇತ್ರ ಯಜ್ಞಗಳನ್ನು ಏರ್ಪಡಿಸಿದ್ದೆ. ಅಲ್ಲದೇ ಗಾಂಧಿ ಪಾರ್ಕಿನಲ್ಲಿ ಸಾರ್ವಜನಿಕ ವಾಚನಾಲಯ ಮತ್ತು ಟಿ.ವಿ. ಕೇಂದ್ರಗಳನ್ನು ಸಾರ್ವಜನಿಕರಿಗಾಗಿ ಸ್ಥಾಪಿಸಿದೆ. ದಿ. ಪಿ. ಮಾಧವರಾಯ ಭಟ್, ಡಾ। ಎಲ್.ಸಿ.ಸೋನ್ಸ್, ಮೋಹನ ಶೆಣೈ, ಹೆಚ್. ಉದಯಶಂಕರ ಪ್ರಭು, ಎಮ್. ನಾರಾಯಣ ಮುಂತಾದವರು ನನ್ನ ನೆರವಿಗೆ ಬಂದಿದ್ದರು.

ಮತ್ತೊಮ್ಮೆ ಬಂಟವಾಳದಲ್ಲಿ

ಅದರಿಂದಾಗಿ 1973 ರಲ್ಲಿ ಶ್ರೀ ತಿರುಮಲ ವೆಂಕಟರಮಣ ಸ್ವಾಮಿ ದೇವಳದ ಆರ್ಥಿಕ ಪರಿಸ್ಥಿತಿ ಬಿಗಡಾಯಿಸಿತು. ಅಂತಹ ಪರ್ವಕಾಲದಲ್ಲಿ ಸಾಮಾಜಕ, ಶೈಕ್ಷಣಿಕ ಕ್ಷೇತ್ರದಲ್ಲಿ ಹೆಸರುವಾಸಿಯಾಗಿರುವ ಬಂಟವಾಳದವರೇ ಆದ ಶ್ರೀ ಬಂಟವಾಳ ದಾಮೋದರ ಪ್ರಭುಗಳವರು ಶ್ರೀ ದೇವಳದ ಆಡಳಿತ ಮೊಕ್ತೇಸರರಾಗಿ ಅಧಿಕಾರ ವಹಿಸಿದರು. ನಿಸ್ವಾರ್ಥತೆಯಿಂದ ದುಡಿಯುವ ಧೀಮಂತ ನಾಯಕ ಶ್ರೀ ದಾಮೋದರ ಪ್ರಭುಗಳು ಶ್ರೀ ದೇವಳದ ಆರ್ಥಿಕ ಹಾಗೂ ಇತರ ಧಾರ್ಮಿಕ ಕಾರ್ಯಗಳ ಸುಧಾರಣೆಗಾಗಿ ಸಲಹೆ ಪಡೆಯಲು, ಭಜಕರಿಂದ ಕೂಡಿದ 'ಶ್ರೀ ವೆಂಕಟರಮಣ ಸ್ವಾಮಿ ಸೇವಾ ಸಂಘ'ವನ್ನು ಸ್ಥಾಪಿಸಿದರು. ಮತ್ತು ನನ್ನನ್ನು ಕಾರ್ಯದರ್ಶಿಯಾಗಬೇಕೆಂದು ವಿನಂತಿಸಿದರು. ಅಲ್ಲದೇ ಶ್ರೀ ಬಿ. ಮಾಧವ ಭಂಡಾರಿ ಮತ್ತು ಶ್ರೀ ಮುಂಡ್ಕೂರು ವೇದವ್ಯಾಸ ಪ್ರಭುಗಳು ಕೂಡಾ ಕಾರ್ಯದರ್ಶಿಗಳಾಗಿ ಶ್ರೀ ಬಡ್ಡಕಟ್ಟೆ ಮಂಜುನಾಥ ಪ್ರಭುಗಳವರು ಕೋಶಾಧ್ಯಕ್ಷರಾಗಿ ಆರಿಸಲ್ಪಟ್ಟರು. ಇದರಿಂದಾಗಿ ಭಜಕರಲ್ಲಿ ಬೇರೆಯೇ ಒಂದು ಸಂತಸದ ಆವಿರ್ಭಾವವಾಯಿತು.

1923ರಲ್ಲಿ ಒಮ್ಮೆ ಬಂಟವಾಳದ ಆಗಿನ ಹಿರಿಯರು ಶ್ರೀ ವೆಂಕಟರಮಣ ದೇವರಿಗೆ 'ಸಹಸ್ರ ಕುಂಭಾಭಿಷೇಕ' ಮಾಡಬೇಕೆಂದು ಕಾರ್ಯಪ್ರವೃತ್ತರಾಗಿದ್ದರಂತೆ. ಆದರೆ ಆ ವರ್ಷ ನೇತ್ರಾವತಿ ನದಿಯಲ್ಲಿ ಬಂದ ಮಹಾಪೂರದಿಂದಾಗಿ ನೆರೆ ನೀರು ಶ್ರೀ ದೇವಳದ ಪ್ರಾಂಗಣಕ್ಕೆ ಹರಿದು ಬಂದದ್ದರಿಂದ ಕುಂಭಾಭಿಷೇಕಕ್ಕಾಗಿ ಪೇರಿಸಿಟ್ಟ ಮಣ್ಣಿನ ಕಲಶಗಳೆಲ್ಲವೂ ತೇಲಿ ಹೋದವಂತೆ ಅಲ್ಲದೇ ನೆರೆಯಿಂದಾಗಿ ಪೇಟೆಯ ಜನರು ಎಲ್ಲವನ್ನೂ ಕಳೆದುಕೊಂಡದ್ದರಿಂದ

'ಸಹಸ್ರ ಕುಂಭಾಭಿಷೇಕ' ಕಾರ್ಯಕ್ರಮ ರದ್ದಾಗಿತ್ತು ಅಲ್ಲದೇ 1942-43 ರಲ್ಲಿ ಇನ್ನೊಮ್ಮೆ ಸಹಸ್ರ ಕುಂಭಾಭಿಷೇಕ ತಯಾರಿ ಪ್ರಾರಂಭವಾದಾಗ ಎರಡನೇ ಜಾಗತಿಕ ಮಹಾಯುದ್ಧದಿಂದಾಗಿ ಪುನಃ ಕಾರ್ಯಕ್ರಮವನ್ನು ಬಿಡಬೇಕಾಯಿತು ಎಂದು ಹಿರಿಯರು ಹೇಳುತ್ತಿದ್ದುದನ್ನು ಕೇಳಿದ್ದೆವು.

1973ರಲ್ಲಿ ಆಗ ತಾನೇ ಆಡಳ್ತ ಮೊಕ್ತೇಸರರಾಗಿ ಆಯ್ಕೆಯಾದ ಶ್ರೀ ದಾಮೋದರ ಪ್ರಭುಗಳವರು ಪೇಟೆಯ ಭಜಕರು ಶ್ರೀ ದೇವರಿಗೆ ಸಹಸ್ರಕುಂಭಾಭಿಷೇಕವನ್ನು ಮಾಡಬೇಕೆಂಬ ಸೂಚನೆಯನ್ನು ಕೈಗೆತ್ತಿಕೊಂಡರು. 1974ರ ದಶಂಬರ ತಿಂಗಳಲ್ಲಿ ಶ್ರೀ ತಿರುಮಲ ವೆಂಕಟರಮಣ ಸ್ವಾಮಿಗೆ ಸಹಸ್ರ ಕುಂಭಾಭಿಷೇಕ ಮಾಡುವುದೆಂದು ನಿರ್ಧರಿಸಲಾಯಿತು. ಬಳಿಕ ಕಾಶೀಮಠಾಧೀಶ ಶ್ರೀ ಸುಧೀಂದ್ರ ತೀರ್ಥ ಸ್ವಾಮಿಗಳವರಿಗೆ ವಿಷಯವನ್ನು ಸಮೂದಿಸಿ ಅವರಿಂದ ಆಶೀರ್ವಾದ ಪಡೆದು ಕಾರ್ಯ ಪ್ರಾರಂಭ ಮಾಡಿದೆವು. ಹಾಗೆಯೇ ಮೈಸೂರಿನಲ್ಲಿದ್ದ ಗಣೇಶ ಬೀಡಿ ಮ್ಹಾಲಕರಾಗಿದ್ದ ಶ್ರೀ ಬಿ. ರಘುರಾಮ ಪ್ರಭು ಹಾಗೂ ಶ್ರೀ ಬಿ. ಮಾಧವ ಶೆಣೈಯವರು ಸ್ವಯಂ ಸ್ಫೂರ್ತಿಯಿಂದ ರೂ. 25,000/- ದಂತೆ ಇಬ್ಬರೂ ದೇಣಗೆ ಕೊಟ್ಟು ಧೈರ್ಯಕೊಟ್ಟರು. ನಂತರ ಈ ಕಾರ್ಯ ಯೋಜನೆಯನ್ನು ಕೈಗೆತ್ತಿಕೊಂಡು ಶ್ರೀ ಬಿ. ದಾಮೋದರ ಪ್ರಭು ಮತ್ತು ನಾನು ದಿಲ್ಲಿ, ಮುಂಬಯಿ, ಬೆಂಗಳೂರು ಹಾಗೂ ಇತರೆಡೆಗಳಲ್ಲಿ ವಾಸಿಸುತ್ತಿದ್ದ ಬಂಟವಾಳಕಾರರನ್ನು ಸಂಪರ್ಕಿಸಿದೆವು. ಇದರಿಂದಾಗಿ ಕಾರ್ಯಕ್ರಮ ಬಹಳ ಉತ್ಸಾಹದಿಂದ ನೇರವೇರಿತು. ಕಾಶೀಮಠಾಧೀಶ ಶ್ರೀ ಸುಧೀಂದ್ರ ತೀರ್ಥ ಸ್ವಾಮಿಗಳವರ ದಿವ್ಯ ಹಸ್ತದಿಂದ ಕುಂಭಾಭೀಷೇಕ ಸಾಂಗವಾಗಿ ನೇರವೇರಿತು. ಕೈವಲ್ಯ ಮಠಾಧೀಶ ಶ್ರೀ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿಯವರು ವಿಶೇಷವಾಗಿ ಉಪಸ್ಥಿತರಿದ್ದರು.

ಅದರ ಬಳಿಕ 1977ರಲ್ಲಿ ಬಂಟವಾಳದಲ್ಲಿ ಶ್ರೀ ಕಾಶೀಮಠಾಧೀಶ ಸುಧೀಂದ್ರ ತೀರ್ಥ ಸ್ವಾಮೀಜಿಯವರ ಚಾತುರ್ಮಾಸ್ಯ ವೃತ್ತದ ಸಮಯದಲ್ಲಿ ಮಠದ ಆರಾಧ್ಯದೈವ ಶ್ರೀ ವೇದವ್ಯಾಸ ಮಹರ್ಷಿಯ 5000ನೇ ವರ್ಷದ ಆಚರಣೆ ಕೂಡಾ ನೇರವೇರಿತು. ಆವಾಗ ಶ್ರೀ ದಾಮೋದರ ಪ್ರಭುಗಳು, ಕಸ್ತೂರಿ ಮಂಗೇಶ ಪೈ, ಸಾಹುಕಾರ ಬಾಬ ಪೈ, ಕುಡ್ವಿ ಶ್ರೀನಿವಾಸ ಶೆಣೈ ಮುಂತಾದವರ ನೇತೃತ್ವದಲ್ಲಿ ಧಾರ್ಮಿಕ ಕಾರ್ಯಗಳಲ್ಲಿ ಸಮಾಜದ ಕಾರ್ಯಕ್ರಮಗಳಲ್ಲಿ ಹಲವಾರು ಕಾರ್ಯಗಳನ್ನು ಸಂಘಟಿಸಿದ್ದವು. ನಾನು ಸಮಿತಿಯ ಕಾರ್ಯದರ್ಶಿಯಾಗಿ ಸಹಭಾಗಿಯಾಗಿದ್ದೆ.

ಅದೇ ವರುಷ (1977ರಲ್ಲಿ) ಜುಲಾಯಿಯಲ್ಲಿ ನಾನು ಕಲಿತ ಶ್ರೀ ಎಸ್.ವಿ.ಎಸ್. ಶಾಲೆಗಳ ಕರೆಸ್ಪೊಂಡೆಂಟ್ ಆಗಿ ಆಯ್ಕೆಯಾದೆ. ಇದರಿಂದಾಗಿ ನನಗೆ ವಿದ್ಯೆ ಕೊಟ್ಟ ಶಾಲೆಯ ಋಣವನ್ನು ಸಂದಾಯ ಮಾಡುವ ಭಾಗ್ಯ ನನಗೆ ಸಿಕ್ಕಿತು. ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿದ್ದು, ಶಾಲಾ ಕೊಠಡಿಗಳು ಸಾಕಾಗುವುದಿಲ್ಲವೆಂದು ಅಧ್ಯಾಪಕರ ಸಭೆಯಲ್ಲಿ ಹೇಳಿದರು. ಅದರಿಂದಾಗಿ 3 ವಿಶಾಲ ಕೊಠಡಿಗಳುಳ್ಳ ಮತ್ತು ಮೇಲಂತಸ್ತಿನಲ್ಲಿ ಒಂದು ಸುಸಜ್ಜಿತ ವಾಚನಾಲಯಕ್ಕಾಗಿ ಶ್ರೀ ಸುಕೃತೀಂದ್ರ ಕಲಾಮಂಟಪ ಎಂಬ ಕಟ್ಟಡವನ್ನು ಬರೇ

8 ತಿಂಗಳ ಒಳಗೆ ಕಟ್ಟಿಸಿದ್ದು, ಕಾಶೀಮಠಾಧೀಶ ಶ್ರೀ ಸುಧೀಂದ್ರ ತೀರ್ಥ ಸ್ವಾಮಿಗಳವರು ಉದ್ಘಾಟನೆ ಮಾಡಿದರು ಶ್ರೀ ಕೆ.ಕೆ ಪೈಗಳವರು ಅಧ್ಯಕ್ಷ ಸ್ಥಾನ ವಹಿಸಿದ್ದರು. ವಗ್ಗದ ಚರ್ಚಿನ ಧರ್ಮ ಗುರುದಳಾಗಿದ್ದು ವಂ. ಫಾ. ಗೊಡಪ್ರೆ ಸಾಲ್ಡಾನಾ ಗೌರವ ಅತಿಥಿಗಳಾಗಿ ಭಾಗವಹಿಸಿದ್ದರು.

ಒಂದು ತಿಂಗಳ ಬಳಿಕ ಕಟ್ಟಡದ ಮೇಲಂತಸ್ತಿನಲ್ಲಿ ಕಟ್ಟಲಾಗಿದ್ದ ವಾಚನಾಲಯವನ್ನು ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರು (ನಮ್ಮ ಶಾಲೆಯ ಹಳೇ ವಿದ್ಯಾರ್ಥಿಯೂ ಹೌದು) ಬಂದು ಉದ್ಘಾಟನೆ ಮಾಡಿದರು. ರೋಟರಿ ಜಿಲ್ಲಾ 318 ರ ಗವರ್ನರ್ ಆಗಿದ್ದ ರೋ. ಶ್ರೀ ಯು. ರಾಜಾರಾಮ ಮಲ್ಯ ಅಧ್ಯಕ್ಷತೆ ವಹಿಸಿದ್ದರು. ಅಂದ ಹಾಗೇ ಆಗ ತಾನೇ ಭಾರತ ದೇಶದಲ್ಲಿ ಕಾಲಿಡುತ್ತಿದ್ದ ಇಲೆಕ್ಟ್ರೋನಿಕ್ಸ್ ಕ್ಷೇತ್ರದ ಉದ್ದಿಮೆದಾರರ ಇಂಡಿಯನ್ ಇಲೆಕ್ಟ್ರೋನಿಕ್ಸ್ ಎಸೋಸಿಯೇಶನ್ ಅಧ್ಯಕ್ಷರಾಗಿದ್ದ ಶ್ರೀ ಪಾಣೆಮಂಗಳೂರು ಅಪ್ಪರಾಯ ಭಟ್ಟ ನಮ್ಮ ಮನವಿಗೆ ಸ್ಪಂದಿಸಿ, ಒಂದು ಕೋಣೆಗೆ ರೂ. 10000/- ಕೊಟ್ಟಿದ್ದರು. ಈ ಕಟ್ಟಡ ಕಾರ್ಯ ಶ್ರೀ ದೇವಳದ ಭಂಡಾರದಿಂದ ಹಣ ವಿನಿಯೋಗ ಮಾಡದೇ, ಹಳೇ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕ ಹಣದಿಂದ ಶಾಲೆ ಕಟ್ಟಡ ನಿರ್ಮಿಸಿದ್ದ ಪ್ರಥಮ ಪ್ರಯತ್ನವಾಗಿತ್ತು. ಅಲ್ಲದೇ ಶ್ರೀ ದೇವಳದ ಮೊಕ್ತೇಸರ (ಟ್ರಸ್ಟಿ) ಗಳಲ್ಲದ ಹೊರಗಿನವನಾಗಿ ಪ್ರಥಮ ಶಾಲಾ ಕರಸ್ಪೊಂಡೆಂಟ್ ನಾನೇ ಆಗಿದ್ದೆ ಎಂಬುದೂ ವಿಶೇಷವಾಗಿತ್ತು. ಈ ಕೆಲಸ ಮುಕ್ತಾಯ ಹಂತಕ್ಕೆ ಬರುತ್ತಲೇ ಕಾಕತಾಳೀಯವೆಂಬಂತೆ ಬ್ಯಾಂಕಿನ ಅಧ್ಯಕ್ಷರಾಗಿದ್ದ ಶ್ರೀ ಕೆ.ಕೆ. ಪೈಯವರು ನನಗೆ ಶಿವಮೊಗ್ಗ ಮೈನ ಬ್ರಾಂಚಿಗೆ ಮೆನೇಜರ್ ಆಗಿ ವರ್ಗಮಾಡಿದ್ದರು.

ಶಿವಮೊಗ್ಗದಲ್ಲಿ

ಶಿವಮೊಗ್ಗ ಮೈನ್ ಶಾಖೆ ಸಿಂಡಿಕೇಟ ಬ್ಯಾಂಕಿನ ಹಳೇಯ ಶಾಖೆಗಳಲ್ಲಿ ಒಂದು. ಆದರೆ ಇತ್ತೀಚೆಗೆ ಅಲ್ಲಿ ಪ್ರಗತಿ ಕುಂಟಾಗಿತ್ತು. ಅದಕ್ಕಾಗಿಯೇ ನನ್ನನ್ನು ಅಲ್ಲಿಗೆ ವರ್ಗ ಮಾಡಿದ್ದರೆಂದು ತಿಳಿದು ಬಂದಿತ್ತು. ನಾನು 1978 ಜುಲಾಯಿಯಲ್ಲಿ ಬ್ರಾಂಚ್ ಮೆನೇಜರ್ ಆಗಿ ಅಧಿಕಾರ ಸ್ವೀಕರಿಸಿದಾಗ ಅಲ್ಲಿಯ ದಿಪೋಜಿಟ್ ರೂ. 1.20 ಕೋಟಿ ಮಾತ್ರ ಇತ್ತು. ನಂತರದ 6 ತಿಂಗಳಲ್ಲಿ ರೂ. 1.80 ಕೋಟಿಗೆ ಅಂದರೆ ಆರು ತಿಂಗಳುಗಳ ಒಳಗೆ 60 ಲಕ್ಷ ಹೆಚ್ಚಿನ ಡಿಪಾಜಿಟ ಸಂಗ್ರಹಿಸಿ ದಾಖಲೆ ಮಾಡಿದೆ.

ಅಲ್ಲದೇ ಧಾರ್ಮಿಕ, ಸಾಮಾಜಿಕ, ಸೇವಾ ಕ್ಷೇತ್ರದಲ್ಲಿ ಮಾಡಿದ ನನ್ನ ಕಾರ್ಯಸಾಧನೆಗಳನ್ನು ಅರಿತ್ತಿದ್ದ ಗೌಡ ಸಾರಸ್ವತ ಸಮಾಜದ ಪ್ರಮುಖರು ನನ್ನಲ್ಲಿಗೆ ಬಂದು, ನಾನು ಸಂಘದ ಕಾರ್ಯಗಳಲ್ಲಿ ಸಹಕರಿಸಬೇಕಾಗಿ ವಿನಂತಿಸಿದರು. ಶಿವಮೊಗ್ಗದ ವ್ಯಾಪಾರ, ಕೃಷಿ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ಹೆಸರುಗಳಿಸಿದ್ದ, ಮಹಾದಾನಿಗಳೂ ಹಿರಿಯರೂ ಆಗಿದ್ದ ಶ್ರೀ ಬಂಟವಾಳ ನಾರಾಯಣ ಕಂಮ್ತಿಯವರು ಅವರೊಟ್ಟಿಗೆ ಬಂದಿದ್ದರು. ಅವರೆಲ್ಲರ ಅಪೇಕ್ಷೆಯಂತೆ ಮೊದಲು ಸಂಘದ ಕಾರ್ಯಾಕಾರೀ ಸಮಿತಿಯ ಸದಸ್ಯನಾಗಿ ತದ ನಂತರ

ಕಾರ್ಯದರ್ಶಿ ಮತ್ತು ಅಧ್ಯಕ್ಷನಾಗಿದ್ದೆ. ಅಲ್ಲದೇ ಆಡಳಿತ ಸಮಿತಿಯ ಸಭೆಗಳ ನಡಾವಳಿಗಳನ್ನು, ಪ್ರಚಾರ ಪತ್ರಗಳನ್ನು ಕೊಂಕಣಿ ಭಾಷೆಯಲ್ಲಿಯೇ ಮಾಡುವ ಬಗ್ಗೆ ಕ್ರಮ ಕೈಗೊಂಡಿದ್ದೆ. ನಂತರದ ನಾಲ್ಕು ವರುಷಗಳಲ್ಲಿ ಕಾರ್ಯಕಾರಿ ಮಂಡಳಿಗೆ ಚುನಾವಣೆಯೇ ಇಲ್ಲದೇ ಸರ್ವಾನುಮತದಿಂದ ಮಂಡಳಿ ಆರಿಸಿ ಬರುವಂತಾಗಿತ್ತು. ಅಲ್ಲಿಯ ಸಮಾಜದ ಕಲ್ಯಾಣ ಮಂಟಪ ಬಹಳ ಹೆಸರುವಾಸಿಯಾಗಿತ್ತು. ಆದರೆ ಸ್ಥಳಾಭಾವದ ಕೊರತೆ ಇತ್ತು. ಅದನ್ನು ಮನಗಂಡು ಸಭಾಭವನಕ್ಕೆ ಒಂದು ಸುಸಜ್ಜಿತ ಸಣ್ಣ ಭಾಗವನ್ನು ಕಟ್ಟಿಸಿದೆ.

ಈ ಹೊಸ ವಿಸ್ತರಣಾ ಭಾಗವನ್ನು ಶ್ರೀ ಟಿ.ಎ. ಪೈಯವರಿಂದಲೇ ಉದ್ಘಾಟನೆ ಮಾಡಿಸಿದ್ದೆ. ಹಿರಿಯರಾದ ಶ್ರೀ ಕೆ.ಕೆ. ಪೈಗಳವರು ಸಮಾರಂಭದ ಅಧ್ಯಕ್ಷ ಸ್ಥಾನ ವಹಿಸಿದ್ದರು. ಅಲ್ಲದೇ ಸಾಯಂಕಾಲ ಶಿವಮೊಗ್ಗ ಜಿಲ್ಲೆಯಲ್ಲಿದ್ದ ಸಿಂಡಿಕೇಟ ಬ್ಯಾಂಕ್ ಎಲ್ಲಾ ಶಾಖೆಗಳ ಸಿಬ್ಬಂದಿಗಳ ಪರವಾಗಿ ಒಂದು ಬೃಹತ್ ಸಮಾರಂಭವನ್ನು ಏರ್ಪಡಿಸಿ, ಶ್ರೀ ಟಿ.ಎ. ಪೈ ಮತ್ತು ಶ್ರೀ ಕೆ.ಕೆ. ಪೈಯವರನ್ನು ಸನ್ಮಾನಿಸಿದ್ದೆ.

ನಾನು ಶಿವಮೊಗ್ಗ ಶಾಖೆಯ ಮೆನೇಜರ್ ಆಗಿ ಚಾರ್ಜ ತೆಗೆದುಕೊಂಡಾಗ ಶಾಖೆಯಲ್ಲಿ ನೌಕರರ ಎರಡು ಮೂರು ಯೂನಿಯನ್‌ಗಳಿದ್ದು, ಅವರೊಳಗಿನ ಸ್ಪರ್ಧೆ ವೈರತ್ವಕ್ಕೆ ಮುಟ್ಟಿ ಅನಾರೋಗ್ಯಕರ ಬೆಳವಣಿಗೆಯಿಂದಾಗಿ ಶಾಖೆಯ ಪ್ರಗತಿ ಕುಂಠಿತವಾಗಿತ್ತು. ನಾನು ಅಲ್ಲಿ ಸೇರಿದ ಮೇಲೆ ಇತ್ತಂಡದವರಿಗೆ ಬುದ್ಧಿವಾದ ಹೇಳುತ್ತ, ಸಮಾಧಾನದಿಂದ ಕೆಲಸ ಮಾಡಿ ಶಾಖೆಯ ಅಭಿವೃದ್ಧಿಗೆ ಪ್ರಯತ್ನಿಸಲು ಸಹಕರಿಸಬೇಕಾಗಿ ಹೇಳಿದೆ. ನನ್ನ ಚಾಕಚಕ್ಯತೆಯಿಂದಾಗಿ ಎಲ್ಲವೂ ತಹಬಂದಿಗೆ ಬಂದು ಹಾವು ಮುಂಗುಸಿಗಳಂತೆ ಇದ್ದವರು ಸ್ನೇಹಿತರಂತೆ ವರ್ತಿಸತೊಡಗಿದರು. ಅಲ್ಲದೇ ಬ್ರಾಂಚಿನ ಸಿಂಡಿಕೇಟ್ ಬ್ಯಾಂಕ್ ಸ್ಟಾಫ್ ಕ್ಲಬ್‌ನ್ನು ಪುನರುಜ್ಜೀವನಗೊಳಿಸಿದೆ. ನಾಟಕ, ಸಂಗೀತ ಸ್ಪರ್ಧೆ ಆಸುಪಾಸಿನ ಸ್ಥಳಗಳಿಗೆ, ನೀನಾಸಂ ಸಂಸ್ಥೆಗೆ, ಜೋಗ ಜಲಪಾತ, ಭದ್ರಾ ಕಾಲ್ದಂಡೆ ಯೋಜನೆ ಮುಂತಾದೆಡೆ ಪ್ರವಾಸ ಕೈಗೊಂಡಿದ್ದೆವು.

ಕನ್ನಡ ನಾಡಿನ ಪ್ರಖ್ಯಾತ ನಾಟಕ ರಂಗಕರ್ಮಿ ಶ್ರೀ ರಮಾನಂದ ಚೂರ್ಯರು ತಮ್ಮ 'ಊರೆಲ್ಲಾ ಹೇಳಬೇಡಿ' ನಾಟಕ ಪ್ರದರ್ಶನ ಒಂದನ್ನು ಶಿವಮೊಗ್ಗದಲ್ಲಿ ಏರ್ಪಡಿಸಬೇಕೆಂದು ನನಗೆ ಬರೆದಿದ್ದರು. ಅವರ ಅಪೇಕ್ಷೆಯಂತೆ ಅವರ ನಾಟಕ ತಂಡವನ್ನು ಅಲ್ಲಿಗೆ ಬರಮಾಡಿಸಿ, ಎರಡು ನಾಟಕ ಪ್ರದರ್ಶನಕ್ಕೆ ಏರ್ಪಾಡು ಮಾಡಿದೆ. ಅಲ್ಲದೇ ಬಂಟವಾಳದಿಂದ ಶಿವಮೊಗ್ಗೆಗೆ ಬರಮಾಡಿ ಪ್ರಖ್ಯಾತ ಹಾಸ್ಯ ನಟ, ದಿಗ್ದರ್ಶಕ ಅನಂತ ಕಾಮತ್ ಅವರ ತಂಡದಿಂದಲೂ 'ನಾಂಕುಟಾಲೆ ಲಗ್ನ' ಕೊಂಕಣಿ ನಾಟಕಗಳ ಪ್ರದರ್ಶನಗಳನ್ನು ಏರ್ಪಡಿಸಿದ್ದೆ.

ನನಗೆ ಶಿವಮೊಗ್ಗದಿಂದ ಬೆಂಗಳೂರು ಶೂಲೆ ಶಾಖೆಗೆ 1982 ರಲ್ಲಿ ವರ್ಗವಾಯಿತು. ಆಗ ಸಾರ್ವಜನಿಕ ನೆಲೆಯಲ್ಲಿಯೂ, ಗೌಡ ಸಾರಸ್ವತ ಸಮಾಜದ ವತಿಯಿಂದಲೂ ಎರಡು ಬೃಹತ್ ಸಮಾರಂಭಗಳು ಏರ್ಪಟ್ಟಿದ್ದವು. ಶ್ರೀ ಕೆ.ಕೆ. ಪೈಯವರು ಮಣಿಪಾಲದಿಂದ ಬಂದು ನನ್ನನ್ನು ಸನ್ಮಾನಿಸಿದ್ದರು.

ಮೂಡುಬಿದಿರೆಯಲ್ಲಿ

ಬೆಂಗಳೂರಿನಲ್ಲಿ ಶೂಲೆ ಬ್ರಾಂಚ್‌ನಲ್ಲಿಯೂ ಉತ್ತಮ ವ್ಯವಹಾರವನ್ನು ಮಾಡಿ ಪ್ರಗತಿ ತೋರಿಸಿದ್ದೆ. ಅದರಿಂದಾಗಿ ಎರಡನೇ ವರ್ಷವೇ ಆ ಶಾಖೆ ಡಿವಿಜಿನಲ್ ಮೆನೇಜರ್ ಸ್ತರಕ್ಕೆ ತೇರ್ಗಡೆಯಾಗುವಂತಾಯಿತು. ಅಲ್ಲಿಂದ 1984 ಮೂಡುಬಿದಿರೆ ಶಾಖೆಗೆ ನಾನಾಗಿಯೇ ವರ್ಗಾವಣೆ ಪಡಕೊಂಡು ಬಂದು ಅಲ್ಲಿ 4 ವರ್ಷ ಮೆನೇಜರ್ ಆಗಿ ಮೂಡುಬಿದಿರೆಯಲ್ಲಿ ಕೆಲಸ ನಿರ್ವಹಿಸಿದ್ದೆ. ಇತರ ಸಾಮಾಜಿಕ, ಸಾಹಿತ್ಯಿಕ, ಸಾಂಸ್ಕೃತಿಕ, ರೋಟರಿ ಚಟುವಟಿಕೆಗಳಲ್ಲಿ ಭಾಗಿಯಾಗುತ್ತಲಿದ್ದೆ. ಆ ಸಮಯದಲ್ಲಿಯೇ ಮೂಡುಬಿದಿರೆಯ ಮುಂದಾಳು ಶ್ರೀ ಕೆ. ಅಮರನಾಥ ಶೆಟ್ಟಿಯವರು ಕರ್ನಾಟಕ ಸರಕಾರದಲ್ಲಿ ಧಾರ್ಮಿಕ ದತ್ತಿ ಇಲಾಖೆಯ ಮಂತ್ರಿಗಳಾಗಿ ಆರಿಸಲ್ಪಟ್ಟದ್ದರಿಂದ ಮತ್ತು ಅವರಿಗೆ ನನ್ನ ಮೇಲೆ, ನನ್ನ ರೋಟರಿ ಸೇವಾ ಕ್ಷೇತ್ರದ ಸೇವೆಗಳ ಪರಿಚಯವಿದ್ದುದ್ದರಿಂದ ಅವರ ಸಹಕಾರದಿಂದ ನನ್ನ ಬ್ಯಾಂಕಿನ ಮತ್ತು ಇತರ ಸಾರ್ವಜನಿಕ ರಂಗದ ಹಲವಾರು ಉತ್ತಮ ಯೋಜನೆಗಳನ್ನು ಕೈಗೊಳ್ಳಲು ಪ್ರೋತ್ಸಾಹ ಲಭಿಸಿತು.

ಆಗಲೇ ಮೂಡುಬಿದಿರೆಯಲ್ಲಿ ದ.ಕ. ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಸಂಘಟಿಸಿದ್ದೆವು. ನಾನು ಸಮಿತಿಯ ಉಪಾಧ್ಯಕ್ಷನಾಗಿ ಕೆಲಸ ನಿರ್ವಹಿಸಿದೆ. ಡಾ. ಶಿವರಾಮ ಕಾರಂತ, ಡಾ. ಅನಂತಮೂರ್ತಿ, ಡಾ. ವೀರೇಂದ್ರ ಹೆಗ್ಗಡೆಯವರು ಆಗಮಿಸಿದ್ದರು. ಅಲ್ಲದೇ ಸಮ್ಮೇಳನದ ಅಂಗವಾಗಿ ಬೃಹತ್ ಪುಸ್ತಕ ಮೇಳ ಏರ್ಪಡಿಸಿದ್ದೆವು. ನಾಡಿನ ಪ್ರಸಿದ್ಧ ಪುಸ್ತಕ ಪ್ರಕಾಶನ ಸಂಸ್ಥೆಗಳವರು ಪುಸ್ತಕ ವಿತರಣಾ ಸಂಸ್ಥೆಯವರು ಪಾಲ್ಗೊಂಡಿದ್ದರು.

ಬ್ಯಾಂಕಿನಲ್ಲಿ ಕೊನೆಯ ನಾಲ್ಕು ವರ್ಷಗಳು

ಇನ್ನೂ ನನಗೆ ಬ್ಯಾಂಕಿನಲ್ಲಿ ಕೊನೆಯ 4 ವರ್ಷಗಳ ಸೇವಾವಕಾಶವಿತ್ತು. ಅದಕ್ಕಾಗಿ ನಾನು ಮಂಗಳೂರು ಡಿವಿಜನಲ್ ಆಫೀಸಿಗೆ ವರ್ಗವನ್ನು ಬಯಸಿದೆ. ಸಿಂಡಿಕೇಟ್ ಬ್ಯಾಂಕಿನ ಆಗಿನ ಅಧ್ಯಕ್ಷರಾಗಿದ್ದ ಶ್ರೀ ಪಿ.ಎಸ್.ವಿ. ಮಲ್ಯರವರನ್ನು ಮಣಿಪಾಲ ಮುಖ್ಯ ಕಚೇರಿಯಲ್ಲಿ ಭೇಟಿಯಾಗಿ ವಿಷಯ ತಿಳಿಸಿದಾಗ, 'ನೀವು ಇಷ್ಟು ಚುರುಕಾಗಿ (Active) ದ್ದೀರಿ ಡಿವಿಜನಲ್ ಆಫೀಸು ನಿಮ್ಮಂತಹರಿಗೆ ಹೇಳಿದ್ದಲ್ಲ. ನಿಮಗೆ ಯಾವುದಾದರೂ ಒಳ್ಳೇಯ ಬ್ರಾಂಚ್ ಬೇಕಿದ್ದರೆ ಹೇಳಿ'ಅಂದರು. ನಾನು '20 ವರ್ಷ ಬ್ರಾಂಚ್ ಮೆನೇಜರ್ ಆಗಿ ಕೆಲಸ ಮಾಡಿದ್ದೇನೆ ಇನ್ನು ಸಾಕು ಎನ್ನಿಸುತ್ತದೆ. ಉಳಿದ ನಾಲ್ಕು ವರ್ಷಗಳನ್ನು ಒತ್ತಡ (Tension) ಇಲ್ಲದೇ ಕಳೆಯುವಾ ಎಂದಿದ್ದೇನೆ' ಎಂದು ಹೇಳಿದೆ. 'ಆದೀತು' ಎಂದು ಮಂಗಳೂರು ಡಿವಿಜನಲ್ ಆಫೀಸಿಗೆ ವರ್ಗ ಮಾಡಿದರು. ಡಿವಿಜನಲ್ ಕಚೇರಿ ಮಂಗಳೂರಿನಲ್ಲಿದ್ದುದ್ದರಿಂದ ನನಗೆ ಬಸ್ ಪ್ರಯಾಣ ಸುಲಭವಾಗಿತ್ತು. ಅಲ್ಲದೇ ಜಗತ್ಪ್ರಸಿದ್ಧ ಬಂಟವಾಳ ಟ್ರಾಕ್ಸಿಗಳಿಂದಾಗಿ ಮಂಗಳೂರಿಗೆ ಹೋಗಿ ಬರುವುದು ಕೂಡಾ ಸುಲಭವಾಗಿತ್ತು.

ಆದರೆ ಇಲ್ಲಿ ನನಗೆ ಬ್ಯಾಂಕಿನ ಕಾರ್ಯಕ್ಕಿಂತಲೂ ಇತರ ಕೆಲಸಗಳೇ ಜಾಸ್ತಿಯಾದವು.

ನನ್ನ ಸಾರ್ವಜನಿಕ ಕೆಲಸಗಳಿಂದಾಗಿ ನನ್ನೊಡನೆ ಮಾತನಾಡಲಿಕ್ಕೆ, ತಮ್ಮ ತಮ್ಮ ಕೆಲಸ ಕೈಗೊಳ್ಳಲಿಕ್ಕೆ (ಬ್ಯಾಂಕಿನದ್ದಲ್ಲ) ಬಂದು ಹೋಗುವವರ ಸಂಖ್ಯೆ ಜಾಸ್ತಿಯಾಯಿತು. ಅದೇ ಸಮಯದಲ್ಲಿ 1988 ರಲ್ಲಿ ನನ್ನ ಹಿರಿಯ ಮಗ ಬಿ. ಮಾಧವನ ಗ್ಲಾಸ್ ಮತ್ತು ಪ್ಲೈವುಡ್ ಅಂಗಡಿ ಹೊಸದಾಗಿ ಜೋಡುಮಾರ್ಗ ಪಿಂಟೋ ಕಾಂಪ್ಲೆಕ್ಸ್‌ನಲ್ಲಿ ಪ್ರಾರಂಭವಾಯಿತು. 1999 ರಲ್ಲಿ ನನ್ನ ಅಳಿಯ ಪ್ರಭಾಕರ ಕಿಣಿ ಮುಂಬಯಿಯಲ್ಲಿದ್ದ ತನ್ನ ಎರಕಂಡಿಶನರ್ ಕಂಟ್ರಾಕ್ಟ್ ಮೇಲೆ ಬಾಡಿಗೆ ಕೊಡುವ ವ್ಯವಹಾರದ ಬ್ರಾಂಚ್‌ನ್ನು ಮಂಗಳೂರಿನಲ್ಲಿ ಪ್ರಾರಂಭ ಮಾಡುವ ಯೋಜನೆ ಹಾಕಿದ್ದರು. ಅವರು ನನ್ನ ಎರಡನೇ ಮಗ ಬಿ. ದಿನೇಶನನ್ನು ಪಾರ್ಟನರ್ ಆಗಿ ತೆಗೆದುಕೊಂಡದ್ದೂ ಆಯಿತು. 3-4 ವರ್ಷಗಳಲ್ಲಿ ಆ ವ್ಯವಹಾರ ನಷ್ಟದ್ದಾಗಿ ಪರಿಣಮಿಸಿ ಅದರಿಂದ ಕಷ್ಟ ನಷ್ಟ ಭ್ರಷ್ಟರಾಗಬೇಕಾಯಿತು. ಮಾತ್ರವಲ್ಲ ನನ್ನ ತುಂಬೆಯ ಆಸ್ತಿಯ ಸ್ವಲ್ಪ ಭಾಗವನ್ನು ಮಾರಿ ಬ್ಯಾಂಕ್ ಋಣವನ್ನು ಮತ್ತು ಇತರ ಸಾಲಗಳನ್ನು ತೀರಿಸಬೇಕಾಗಿ ಬಂತು. ಆದರಿಂದಾಗಿ ಮುಂದೆ ದಿನೇಶನು ತನ್ನ ಹೆಂಡತಿ ಮತ್ತು ಮಗುವನ್ನು ದಿಲ್ಲಿಗೆ ಕರಕೊಂಡು ಹೋಗಿ ಅಲ್ಲಿ ಫಿಲ್ಮ ಫೋಟೋಗ್ರಾಫಿ ಉದ್ಯೋಗವನ್ನು ಹಿಡಿಯಬೇಕಾಯಿತು.

ಆಗ ತಾನೇ 1988ರಲ್ಲಿ ಮಂಗಳೂರು ಬಿಜೈನಲ್ಲಿ ಮಣಿಪಾಲ ಸಮೂಹದ ಡಾ.ಟಿ.ಎಂ.ಎ. ಪೈ ಆಸ್ಪತ್ರೆ ಪ್ರಾರಂಭವಾಗಿತ್ತು. ಆಗ ಮಣಿಪಾಲ ಪೈ ಕುಟುಂಬದ ಮುಖ್ಯಸ್ಥರಾಗಿದ್ದ ಶ್ರೀ ಟಿ. ರಮೇಶ್ ಪೈಯವರು (ಅವರು ನಮ್ಮ ಬಂಟವಾಳ ವೈಕುಂಠ ಬಾಳಿಗಾರ ಅಳಿಯ) ನನ್ನನ್ನು ಕರೆದು 'ನೋಡಿ ಬಸ್ತಿಯವರೇ, ಮಂಗಳೂರಿನಲ್ಲಿ ಬಿಜೈಯಲ್ಲಿ ಹೊಸತಾಗಿ ನಮ್ಮ ಆಸ್ಪತ್ರೆ ಪ್ರಾರಂಭಿಸಿದ್ದೇವೆ. ಮಣಿಪಾಲ ಕೆ.ಎಂ.ಸಿ. ಆಸ್ಪತ್ರೆಯಿಂದ ಮೂಡುಬಿದಿರೆ, ಕಾರ್ಕಳ, ಶಿರ್ವ ಇತ್ಯಾದಿ ಕಡೆಗಳಲ್ಲಿ ನಮ್ಮ 'Out Reach Specialists Clinic' ಗಳನ್ನು ಪ್ರಾರಂಭಿಸಿದಂತೆಯೇ ವಾರಕ್ಕೊಮ್ಮೆ ಮಂಗಳೂರು ಆಸ್ಪತ್ರೆಯಿಂದಲೂ ಹತ್ತಿರದ ಬೇರೆ ಬೇರೆ ಪ್ರದೇಶಗಳಿಗೂ ವೈದ್ಯರನ್ನು ಕಳುಹಿಸಿ ರೋಗಿಗಳನ್ನು ಧರ್ಮಾರ್ಥವಾಗಿ ಪರೀಕ್ಷಿಸಿ ಅಗತ್ಯವಿದ್ದಲ್ಲಿ ಬಡವರಿಗೆ ಗ್ರೀನ್ ಕಾರ್ಡ್ ಕೊಟ್ಟು ಮಂಗಳೂರು ಬಿಜೈ ಆಸ್ಪತ್ರೆಯಲ್ಲಿ ಧರ್ಮಾರ್ಥವಾಗಿ ಚಿಕಿತ್ಸೆ ಕೊಡಬಹುದು. ನೀವು ಬಂಟವಾಳದಲ್ಲಿ ವ್ಯವಸ್ಥೆ ಮಾಡುವುದಾದರೆ ನಾನು ವೈದ್ಯರನ್ನು ಪ್ರತೀ ವಾರ ಕಳುಹಿಸಿಕೊಡುತ್ತೇನೆ ಎಂದರು. ನಾನು ಕೂಡಲೇ ಸೈ ಎಂದು ಹೇಳಿದೆ ಮತ್ತು ಬಂಟವಾಳದಲ್ಲಿ ನಮ್ಮ ಶ್ರೀ ಯಶವಂತ ವ್ಯಾಯಾಮ ಶಾಲೆಯಲ್ಲಿ ಪ್ರತೀ ಗುರುವಾರ ಕೆ.ಎಂ.ಸಿ.ಯ ವೈದ್ಯಕೀಯ ಸೇವಾ ಶಿಬಿರ ಪ್ರಾರಂಭಿಸಲು ಯೋಜನೆ ಹಾಕಿದೆ. ವ್ಯಾಯಾಮ ಶಾಲೆಯ ಹಿರಿಯರಾದ ಬಂಟವಾಳ ಶ್ರೀನಿವಾಸ ನಾಯಕ್, ಶ್ರೀ ವೇದವ್ಯಾಸ ಪ್ರಭು, ಕಾರ್ಯದರ್ಶಿ ಪಿ.ನಾರಾಯಣ ಕಾಮತ್, ಪ್ರಭಾಕರ ಪ್ರಭುಗಳವರು, ಮಾಣೂರು ಲಕ್ಷ್ಮಣ ಕಾಮತರವರು ಕೆ.ಎಂ.ಸಿ.ಯ ವೈದ್ಯಕೀಯ ಶಿಬಿರ ಪ್ರಾರಂಭಿಸಲು ಉತ್ಸಾಹ ತೋರಿಸಿದರು. ಶ್ರೀ ಪಿ.ವಸಂತ ಪ್ರಭು, ಭಾಮಿ ದೇವರಾಯ ಶೆಣೈ ಮುಂತಾದವರು ಸಹಕರಿಸಲೂ ಮುಂದೆ ಬಂದರು.

ಜನ ಸಾಮಾನ್ಯರಲ್ಲಿ ಈ ಬಗ್ಗೆ ವಿಸ್ತೃತ ಮಾಹಿತಿ ಕೊಡಲು 50000 ನೋಟೀಸುಗಳನ್ನು

ಮುದ್ರಿಸಿ ಬಂಟವಾಳ ತಾಲೂಕಿನ ಎಲ್ಲಾ ಬೀಡಿ ಬ್ರಾಂಚುಗಳು, ಸೇವಾ ಸಂಸ್ಥೆಗಳು, ಎಲ್ಲಾ ಚರ್ಚ್ ಮತ್ತು ಮಸೀದಿಗಳಲ್ಲಿಯೂ ಹಂಚಿಸುವ ಏರ್ಪಾಡು ಮಾಡಿದೆ. ತುಂಬೆಯ ನಮ್ಮ ಹಿತೈಷಿ ಶ್ರೀ ಅಹಮದ್ ಹಾಜೀ ಮೊಹಿಯುದ್ದಿನವರು ಪತ್ರಿಕೆಯಲ್ಲಿ ವಿಶೇಷ ಪ್ರಕಟಣೆ ಕೊಟ್ಟು ಪ್ರಚಾರಸತ್ರಕ್ಕೆ ಮುಂದಾದರು. ಇದರಿಂದಾಗಿ ನಿರೀಕ್ಷೆಗೂ ಮೀರಿ ಬಂಟವಾಳದ ವೈದ್ಯಕೀಯ ಶಿಬಿರ ಯಶಸ್ವಿಯಾಯಿತು. ಪ್ರತೀವಾರ 250ರಿಂದ 350ರ ವರೆಗೆ ಬಡರೋಗಿಗಳು, ಬಂಟವಾಳ ತಾಲೂಕಿನಾದ್ಯಂತ ಮಾತ್ರವಲ್ಲದೇ ಬೆಳ್ತಂಗಡಿ, ಪುತ್ತೂರು, ನೆರೆಯ ಕಾಸರಗೋಡಿನಿಂದಲೂ ಸೇವೆ ಪಡಕೊಳ್ಳಲು ಬರುತ್ತಿದ್ದರು.

ಇಂತಹ ಯಶಸ್ಸನ್ನು ಕಂಡು ಸಂತೋಷ ವ್ಯಕ್ತಪಡಿಸಿದ ಡಾ. ಟಿ.ರಾಮದಾಸ ಎಮ್.ಪೈ.ಗಳು ಒಮ್ಮೆ ನನ್ನನ್ನು ಕರೆದು 'ನೀವು ಬಂಟವಾಳದಲ್ಲಿ 50 ಹಾಸಿಗೆಗಳ ಆಸ್ಪತ್ರೆ ಕಟ್ಟಡವನ್ನು ಕಟ್ಟಿಸಿಕೊಟ್ಟರೆ ಕೆ.ಎಂ.ಸಿ. ಡಾಕ್ಟರುಗಳನ್ನು ಕಳುಹಿಸಿ ಆಸ್ಪತ್ರೆ ಪ್ರಾರಂಭಕ್ಕಾಗಿ ಒಂದು ವ್ಯವಸ್ಥೆ ಮಾಡುತ್ತೇನೆ' ಎಂದು ಹೇಳಿದರು. ನಾನು ಅದಕ್ಕಾಗಿ ಬೆಂಗಳೂರಿನಲ್ಲಿರುವ ಶ್ರೀ ಪಿ.ದಯಾನಂದ ಪೈಯವರನ್ನು ಹಾಗೂ ಮೈಸೂರಿನಲ್ಲಿರುವ ಬಂಟವಾಳ ಮೂಲದ ಗಣೇಶ ಮಾಲಕರಿಂದ ಸಹಾಯ ಕೇಳಿದಾಗ ಅವರುಗಳು ತುಂಬು ಹೃದಯದಿಂದ ಧನ ಸಹಾಯ ನೀಡಲು ಮುಂದೆ ಬಂದಿದ್ದರು. ಹಿರಿಯರಾದ ಬಂಟವಾಳ ನಾರಾಯಣ ನಾಯಕರು ಸಹಕಾರ ನೀಡಲು ಮುಂದೆ ಬಂದಿದ್ದರು. ಆದರೆ ನಮ್ಮವರೇ ಕೆಲವರ ಅಸಹಕಾರದಿಂದಾಗಿ ಆಸ್ಪತ್ರೆ ಕಟ್ಟಡ ಕಾರ್ಯ ಮೇಲೆಳಲಿಲ್ಲ. ಅಲ್ಲದೆ ನಾನು ಬಂಟವಾಳದ ಶಾಲೆಯಲ್ಲಿ ಒಂದು ಪೊಲಿಟೆಕ್ನಿಕ್ ಕಾಲೇಜನ್ನು ಪ್ರಾರಂಭಿಸಬೇಕೆಂದಾಗಲೂ ಇಂತಹ ಅಸಹಕಾರ ಮನೋಭಾವ ಮುಂದೆ ಬಂದು ಕೈಚೆಲ್ಲಬೇಕಾಗಿ ಬಂದಿತ್ತು. ಈಗ ಇವೆರಡೂ ಯೋಜನೆಗಳು ನಾನು ವಾಸ ಮಾಡುತ್ತಿರುವ ತುಂಬೆಯಲ್ಲಿ ನನ್ನ ಸನ್ಮಿತ್ರ ಶ್ರೀ ಬಿ. ಅಹ್ಮದ ಹಾಜೀ ಮೊಹಿಯುದ್ದೀನರಿಂದ ಜನ್ಮತಾಳಿವೆ.

ಬಸ್ತಿ ಪ್ರಕಾಶನ

1967ರಲ್ಲಿ ಕೊಂಕಣಿ ಭಾಷಾ ಕವಿ, ಸಾಹಿತಿ ಶ್ರೀ ಬಂಟವಾಳ ವಾಸುದೇವ ಬಾಳಿಗರು ಕೊಂಕಣಿ ಪಂಚ್ಯಾದಾಯಿ ಮಾಸಿಕವನ್ನು ಪ್ರಾರಂಭಿಸಿದರು. ಅದನ್ನು ನಾನು ತುಂಬಾ ಹಚ್ಚಿಕೊಂಡಿದ್ದೆ. ನಿಯಮಿತವಾಗಿ ಅದೇ ಸಮಯದಲ್ಲಿ ನನ್ನ ಚಿಕ್ಕಪ್ಪಂದಿರಾದ ಬಸ್ತಿ ಪುಂಡಳೀಕ ಶೆಣೈಯವರು ಕೊಂಕಣಿ ಮರಾಠಿ ಭಾಷೆಗಳ ಬಗ್ಗೆ ಒಂದು ಸಂಶೋಧನಾ ಕೃತಿಯನ್ನು ಕೂಡಾ ಪ್ರಕಟಿಸಿ, ಕೊಂಕಣಿ ಭಾಷೆ ಮರಾಠಿ ಭಾಷೆ ಉಪಭಾಷೆ ಅಲ್ಲ. ಕೊಂಕಣಿ ಸ್ವತಂತ್ರ ಭಾಷೆಯೆಂದು ಸಾಧಾರವಾಗಿ ಸಾಧಿಸಿದ್ದರು. ಅದನ್ನು ಓದಿದ ಮೇಲೆ ಪೋರ್ಚುಗೀಸರು ಗೋವೆಯನ್ನು ಆಕ್ರಮಿಸಿದ ಬಳಿಕ ಬಂದ ವಿದೇಶೀ ಮಿಷನರಿಗಳು ಕೊಂಕಣಿ ಭಾಷೆಯ ನಿರ್ನಾಮಕ್ಕಾಗಿ ಮಾಡಿದ ಅತಿಕ್ರಮಣಗಳ ಭೀಕರ ಸನ್ನಿವೇಶಗಳ ಬಗ್ಗೆ ಮಾಹಿತಿ ಸಿಕ್ಕಿತು. ಅಲ್ಲದೇ ಬಳಿಕ ಬಂದ ಹಲವಾರು ಪಾದ್ರಿಗಳು ಕೊಂಕಣಿ ಭಾಷೆಗೆ ಸಲ್ಲಿಸಿದ ಸೇವೆಯ

ಕುರಿತಾಗಿಯೂ ತಿಳಿಯುವಂತಾಯಿತು. ಅಂತೂ ನನ್ನ ಮಾತೃಭಾಷೆಯ ಅವನತಿ ಮತ್ತು ದುರ್ಗತಿಯ ಬಗ್ಗೆ ಖೇದವಾಯಿತು. ಮತ್ತು ಕೊಂಕಣಿ ಭಾಷೆಯ ಏಳ್ಗೆಯ ಬಗ್ಗೆ ನನ್ನಿಂದ ಸಾಧ್ಯವಾದಷ್ಟು ಏನಾದರೂ ಕೆಲಸ ಕೈಗೊಳ್ಳಲೇಬೇಕೆಂಬ ತುಡಿತ ಮನಸ್ಸಿನಲ್ಲಿ ಬರುತ್ತಲಿತ್ತು.

ಬಹಳ ವರ್ಷಗಳ ಹಿಂದೆ ಸಿ.ಪಿ.ಸಿ. ಮೆನೆಜಿಂಗ್ ಡೈರೆಕ್ಟರ್ ಶ್ರೀ ವ್ಹಿ.ಎಸ್.ಕುಡ್ವರವರು ಸಾರಸ್ವತ ಪತ್ರಿಕೆಯನ್ನು (1940-1946) ಹೊರಡಿಸಿದ್ದರು. ಅದು ನಮ್ಮ ಬಂಟವಾಳಕ್ಕೂ ಬರುತ್ತಿತ್ತು. ಅದನ್ನು ನಾನು ಓದುತ್ತಲಿದ್ದು ಕೊಂಕಣಿ ಬರಹಗಳನ್ನು ಓದುವ ಅಭಿರುಚಿಯನ್ನು ಸಣ್ಣ ಬಾಲಕನಾಗಿದ್ದಾಗಿನಿಂದಲೇ ಸಂಪಾದಿಸಿದ್ದೆ. ನಂತರ ಬಂದ ಪಂಚ್ಕಾದಾಯಿ ಪತ್ರಿಕೆಯಿಂದಾಗಿ ಕೊಂಕಣಿ ಓದು ಅಲ್ಲದೇ ಬರೆಯುವ ಹವ್ಯಾಸವನ್ನು ಹಮ್ಮಿಕೊಂಡಿದ್ದೆ.

ನಮ್ಮ ಬಂಟವಾಳದಲ್ಲಿ ತೆನ್ನಾಲಿರಾಮನಂತೆ ಮಾತಿನಲ್ಲಿಯೂ, ಕೃತಿಯಲ್ಲಿಯೂ ತೀಕ್ಷ್ಣಮತಿ ಹಾಗೂ ಚಾಲಾಕಿತನಕ್ಕೆ ಹೆಸರಾದ ಮಾಟ್ಟುಪೈ ಎಂಬ ವ್ಯಾಪಾರಿ ಇದ್ದರು. ಅವರು ಎಲ್ಲಾ ವರ್ಗದ ಜನರ ಕೂಡ ಒಳ್ಳೆಯ ಸಂಬಂಧಗಳನ್ನಿಟ್ಟು ಸಹಾಯಕ್ಕೆ ಹೋಗುವವರಾಗಿದ್ದರು. ಅವರ ಕೆಲವು ಸಾಹಸಗಾಥೆಗಳು ಬಂಟವಾಳ, ಮಂಗಳೂರುಗಳಲ್ಲಿ ಜನ ಜನಿತವಾಗಿ ಹರಡಿಕೊಂಡಿದ್ದವು. ಅವರು ನಿಭಾಯಿಸಿದ ಕೆಲವು ಘಟನೆಗಳನ್ನು ನಮ್ಮ ಹಿರಿಯರು ಆಡಿಕೊಳ್ಳುತ್ತಿದ್ದುದ್ದನ್ನು ನಾನು ಒಂದು ಪುಸ್ತಕ ರೂಪದಲ್ಲಿ ಕೊಂಕಣಿ ಭಾಷೆಯಲ್ಲಿ 'ಬಸ್ತಿ ಪ್ರಕಾಶನ'ದ ಹೆಸರಿನಲ್ಲಿ ೧೯೮೮ ಪ್ರಕಟಗೊಳಿಸಿದ್ದೆ.

ನಂತರ ನಾನೇ ಬರೆದು, ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ಕನ್ನಡ ಕೊಂಕಣಿ ಸಣ್ಣ ಕತೆಗಳ ಸಂಕಲನವನ್ನು 'ಏಮಿಲಿ' ಪುಸ್ತಕವನ್ನು ಬಸ್ತಿ ಪ್ರಕಾಶನದ ಹೆಸರಲ್ಲಿ ಪ್ರಕಟಿಸಿದ್ದೇನೆ. ಅದರ ಬಳಿಕ ನನ್ನ ಚಿಕ್ಕ ತಂದೆ ದಿ. ಬಸ್ತಿ ಪುಂಡಲೀಕ ಶೆಣೈಯವರು ಅವರ ಜೀವಿತಾವಧಿಯಲ್ಲಿ ಸಂಗ್ರಹಿಸಿ ಅಕಾರಾದಿಡಿಯಾಗಿ ಬರೆದಿಟ್ಟ 10000 ಕೊಂಕಣಿ ಶಬ್ದಗಳ ಸಂಗ್ರಹವನ್ನು 'ಕರ್ನಾಟಕಾಂತ ಉಲೋವಚಿ ಕೊಂಕಣಿ ಶಬ್ದ', ಶಿವಮೊಗ್ಗದ ಖ್ಯಾತ ಹಿಂದಿ, ಸಂಸ್ಕೃತ, ಕೊಂಕಣಿ ವಿದ್ವಾಂಸ ಶ್ರೀ ಎಂ. ಮಾಧವ ಪೈಯವರು ಸಂಪಾದಿಸಿದ 'ಕೊಂಕಣಿ (ತದ್ಭವ) ಸಂಸ್ಕೃತ ಶಬ್ದಕೋಶ, ಡಾ। ಜ್ಯೋತ್ಸ್ನಾ ಕಾಮತರು ಬರೆದ ಕೊಂಕಣಿ ಭಾಷಿಕರ ಮದುವೆ ಸಮಾರಂಭಗಳಲ್ಲಿ ಹಿಂದಿನ ಕಾಲದಲ್ಲಿ ಮುಖ್ಯವಾಗಿ ಹೆಂಗಸರು ಹಾಡುತ್ತಲಿದ್ದ 'ಒವಿ'ಗಳ ಸಂಗ್ರಹ 'ಸುರಗ್ಯಾಸರ' ಕೃತಿಯನ್ನು, ಅಲ್ಲದೇ ಖ್ಯಾತ ಪತ್ರಕರ್ತ, ಲೇಖಕ, ಸಂಪಾದಕ ಸಂತೋಷ ಕುಮಾರ ಗುಲ್ವಾಡಿಯವರು ಸಂಗ್ರಹಿಸಿದ್ದ ಕಿರಿಯರಿಗಾಗಿ ಹಿಂದಿನ ಕಾಲದಲ್ಲಿ ನಮ್ಮ ಪೂರ್ವಜರ ಕಾಲದಿಂದಲೂ ಹೆಣ್ಣು ಮಕ್ಕಳು ಹಾಡುತ್ತಲಿದ್ದ ಜಾನಪದ ಹಾಡುಗಳನ್ನು (Lallubies) ಮುಂದಿನ ಪೀಳಿಗೆಗೂ ತಿಳಿಸುವ ಉದ್ದೇಶದಿಂದ 'ತಾ ತಾ ತಿಂಗಣ' ಪದ್ಯಗಳ ಸಂಗ್ರಹ ಪುಸ್ತಕ ರೂಪದಲ್ಲಿ ಪ್ರಕಟಿಸಿದ್ದೆ. ಅದಲ್ಲದೇ ದ.ಕ. ಜಿಲ್ಲೆಯಲ್ಲಿ ಕಮ್ಯೂನಿಷ್ಟ ಪಾರ್ಟಿಯನ್ನು ಸ್ಥಾಪಿಸಿದವರಲ್ಲಿ ಪ್ರಮುಖರಾದ ಕಾಮ್ರೇಡ ಶಾಂತಾರಾಮ ಪೈಗಳ ಜೀವನ ಚರಿತ್ರೆಯನ್ನು, ದಿ. ಸುರಕುಂಡ ಅಣ್ಣಾಜಿ ರಾವ್ ಅವರು 1981 ಬರೆದು ಪ್ರಕಟಿಸಿದ ಹಳೇ

ಕೊಂಕಣಿ ಭಾಷೆಯಲ್ಲಿದ್ದ ಪದ್ಯಸಂಗ್ರಹವನ್ನು, ಖ್ಯಾತ ಕೊಂಕಣಿ ಕತೆಗಾರ ಶ್ರೀ ಭಕ್ತಾ ಆರ್. ಕಾಂಞಗಾಡ್ ಇವರ ಸಣ್ಣ ಕತೆಗಳ ಸಂಗ್ರಹ 'ಸುಗಂಧಿಲೆ ದುಃಖ' ಪುಸ್ತಕವನ್ನು ಪ್ರಕಟಿಸಿದ್ದೇನೆ. ಅಲ್ಲದೇ ಕೊಂಕಣಿ ಮಾತೃಭಾಷೆಯವರೇ ಆಗಿರುವ ಭಟ್ಕಳದ ನವಾಯತ ಮುಸ್ಲಿಮರಲ್ಲಿ ನವ್ಯಕವಿಯಾಗಿ ಮೂಡಿ ಬರುತ್ತಿದ್ದ 'ಶಬ್ಬಿರ ಬಾಯ್ಡಾ' ಎಂಬುವರು ನವಾಯತಿ ಬೋಲಿಯಲ್ಲಿ ಬರೆದಿದ್ದ ಕವನ ಸಂಗ್ರಹ 'ಚಿಂದಯ್ಯಾಂಚೆ ಬೊಂಬೆ' ವನ್ನು ಕೂಡಾ ಬಸ್ತಿ ಪ್ರಕಾಶನದಡಿಯಲ್ಲಿ ಪ್ರಕಟಿಸಿದ್ದೇನೆ.

ಆರ್ಥಿಕವಾಗಿ ಅಷ್ಟೇನೂ ಉತ್ತಮ ಸ್ಥಿತಿಯಲ್ಲಿರದೇ, ತಮ್ಮ ಕೃತಿಗಳನ್ನು ಪ್ರಕಟಿಸುವ ಅವಕಾಶ ವಂಚಿತರಾದ ಕೊಂಕಣಿ ಲೇಖಕರನ್ನು ಕವಿಗಳನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಮತ್ತು ಕೊಂಕಣಿ ಭಾಷೆಯಲ್ಲಿ ಉತ್ತಮ ಸಾಹಿತ್ಯ ನಿರ್ಮಾಣ ಮಾಡಿ ಬೆಳಕಿಗೆ ತರುವ ಉದ್ದೇಶದಿಂದ ಈ ಸಾಹಸಕ್ಕೆ ಕೈ ಹಾಕಿದ್ದೆ. ಅದು ನಷ್ಟದ ಬಾಬತ್ತಲ್ಲದೇ, ಲಾಭದ್ದಲ್ಲ. ಮಾತೃಭಾಷೆಯ ಸಾಹಿತ್ಯ ಸೇವೆಯೇ ಈ ಎಲ್ಲಾ ವಿಷಯಗಳ ಹಿಂದಿರುವ ಉದ್ದೇಶ.

ಅಲ್ಲದೇ 'ಸುರಗ್ಯಾಸರ' ಕೊಂಕಣಿ ಓವಿ ಪ್ರಕಾರದ - ಗೀತೆಗಳ ಸಂಗ್ರಹ ಪ್ರಕಟಿಸಿದೆ. ಈಗಿನ ಮಹಿಳೆಯರು ಬಾಲಕಿಯರು ಸರಾಗವಾಗಿ ಹಾಡುವ ಪರಿಪಾಠ ಬೆಳೆಸಬೇಕೆಂಬ ಉದ್ದೇಶದಿಂದ ಬೆಂಗಳೂರಿನಲ್ಲಿ 6 ದಿನಗಳ ಕಾರ್ಯಗಾರವನ್ನು ಏರ್ಪಡಿಸಿದ್ದೆ. ಅದರಲ್ಲಿ ಉತ್ತರ ಕನ್ನಡ, ಉಡುಪಿ, ದ.ಕ. ಜಿಲ್ಲೆಗಳಿಂದ ಮೈಸೂರು ಬೆಂಗಳೂರಿನಿಂದ ಸುಮಾರು 40 ಮಹಿಳೆಯರು ಭಾಗಿಗಳಾಗಿದ್ದರು. 6 ದಿನಗಳ ಕಾಲ ಬೆಂಗಳೂರು ಮಲ್ಲೇಶ್ವರಂನಲ್ಲಿರುವ ಶ್ರೀ ಕಾಶೀ ಮಠದಲ್ಲಿ ಕಾರ್ಯಾಗಾರದ ಏರ್ಪಾಡಾಗಿತ್ತು. ಅಲ್ಲದೇ ಬಳಿಕ ಅವರೆಲ್ಲರನ್ನು ಬೆಂಗಳೂರಿನ ಸ್ಟುಡಿಯೋಕ್ಕೆ ಕೊಂಡು ಹೋಗಿ ಕೊಂಕಣಿ ಓವಿಗಳನ್ನು ಸಾಂಪ್ರದಾಯಿಕವಾದ ರಾಗಗಳಲ್ಲಿ ಹಾಡುವುದನ್ನು ಆಡಿಯೋ ವಿಡಿಯೋಗಳಲ್ಲಿ ರಿಕಾರ್ಡ್ ಮಾಡಲಾಯಿತು. ಧಾರವಾಡ ಆಕಾಶವಾಣಿಯಲ್ಲಿ 40 ವರ್ಷಗಳಿಂದ ಕೊಂಕಣಿ ಕನ್ನಡ ಗಾಯಕಿಯಾಗಿರುವ ಸಂಗೀತ ವಿದೂಷಿ ಶ್ರೀಮತಿ ಅನುರಾಧಾ ಧಾರೇಶ್ವರರವರು ಹಾಡಲು ಮಾರ್ಗದರ್ಶನ ಮಾಡಿದ್ದರು. ಡಾ। ಜ್ಯೋತ್ಸ್ನಾ ಕಾಮತರು ಇಡೀ ಕಾರ್ಯಕ್ರಮದ ನಿರ್ವಹಣೆ ಮಾಡಿದ್ದರು.

ಅದರಂತೆ 2009ರಲ್ಲಿ 'ತಾ ತಾ ತಿಂಗಣ' ಕೊಂಕಣಿ ಬಾಲಗೀತೆಗಳನ್ನು ಹಾಡಲು ಬೆಂಗಳೂರು ಶ್ರೀ ಕಾಶೀ ಮಠದಲ್ಲಿ ಕೊಂಕಣಿ ಮಹಿಳೆಯರಿಗಾಗಿ ಇನ್ನೊಂದು ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು. ಅದರ ಹೊಣೆಯನ್ನು ಡಾ। ಜ್ಯೋತ್ಸ್ನಾ ಕಾಮತರೇ ವಹಿಸಿದ್ದರು. ಶಿಬಿರಾರ್ಥಿ ಮಹಿಳೆಯರಿಗೆ ಪಾರಂಪಾರಿಕ ರಾಗಗಳನ್ನು ಹೇಳಿಕೊಡಲು ಧಾರವಾಡದ ಇನ್ನೋರ್ವ ಸಂಗೀತ ವಿದುಷಿ ಶ್ರೀಮತಿ ಚಿತ್ರಾ ಶಿರಾಲಿ ಬಂದಿದ್ದರು. ಎರಡೂ ಕಾರ್ಯಕ್ರಗಳು ಬೆಂಗಳೂರು ದೂರದರ್ಶನ ಕೇಂದ್ರದಿಂದ ಹಲವು ಬಾರಿ ಪ್ರಸಾರವಾಗಿ ಜನಪ್ರಿಯವಾಗಿವೆ.

ಮಂಗಳೂರಿನಲ್ಲಿ 1976ರಲ್ಲಿ ಕೊಂಕಣಿ ಭಾಷಾ ಮಂಡಳ ಸ್ಥಾಪನೆಯಾಗಿತ್ತು. ಅಖಿಲ ಭಾರತ ಕೊಂಕಣಿ ಅಧಿವೇಶನ 1976ರಲ್ಲಿ ಮಿಲಾಗ್ರಿಸ್ ಚರ್ಚ್ ಮೈದಾನದಲ್ಲಿ ಸೇರಿತ್ತು. ಫಾ. ಮಾರ್ಕ ವಾಲ್ಡರ್, ಚಾ. ಫ್ರಾ, ಡಿ' ಕೋಸ್ತಾ, ಮೊ. ಅಲೆಕ್ಸಾಂಡರ್ ಡಿ' ಸೋಜ, ಬಿ.ವಿ. ಬಾಳಿಗ ಮೊದಲಾದವರು ಒಟ್ಟಾಗಿ ಮಂಗಳೂರಿನಲ್ಲಿ 1976ರಲ್ಲಿ ಕೊಂಕಣಿ ಭಾಷಾ ಮಂಡಳವನ್ನು ಹುಟ್ಟು ಹಾಕಿದ್ದರು. ಅದೇ ವರ್ಷ 11ನೇ ಅಖಿಲ ಭಾರತ ಕೊಂಕಣಿ ಅಧಿವೇಶನ ಮಂಗಳೂರಲ್ಲಿ ಪ್ರಥಮವಾಗಿ ಜರುಗಿತು. ಸಿಂಡಿಕೇಟ್ ಬ್ಯಾಂಕಿನ ಅಧ್ಯಕ್ಷರಾಗಿದ್ದ ಶ್ರೀ ಕೆ.ಕೆ. ಪೈಗಳವರು ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದರು. ಆಗಿನ ಮಂಗಳೂರು ಕಥೋಲಿಕ್ ಧರ್ಮಪ್ರಾಂತ್ಯದ ಬಿಷಪರಾಗಿದ್ದ ರೈ. ರೆ. ಬೆಸಿಲ ಡಿ' ಸೋಜರು ಉತ್ಸಾಹದಿಂದ ಭಾಗವಹಿಸಿದ್ದರು. ಅದು ಗೋವಾ, ಕೇರಳ, ಮುಂಬಯಿಗಳಲ್ಲಿ ವಾಸಿಸುತ್ತಿದ್ದ ಕೊಂಕಣಿಗಳು ಪ್ರಥಮವಾಗಿ ಮಂಗಳೂರಲ್ಲಿ ಸೇರಿದ್ದ ಉತ್ಸಾಹದಾಯಕ ಸ್ಫೂರ್ತಿದಾಯಕ ಮೇಳವೂ ಆಗಿತ್ತು. ಅಲ್ಲದೇ ಆಗಿನ್ನೂ ತರುಣರಾಗಿದ್ದ ಗೋವಾ ಕೊಂಕಣಿ ಚಳುವಳಿಯ ಮಹಾನಾಯಕರಾಗಿದ್ದ ಎಡ್ವೊಕೇಟ್ ಉದಯ ಭೆಂಬ್ರೆಯವರು ದಿಲ್ಲಿಯಿಂದ ಬಂದು ನೆರೆದ ಅಧಿವೇಶನದಲ್ಲಿ ಬಹುಭಾಷಾ ಪಂಡಿತ ಪ್ರಾಚಾರ್ಯ ಸುನೀತ ಕುಮಾರ ಚಟರ್ಜಿಯವರ ಅಧ್ಯಕ್ಷತೆಯಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಸಭೆ ಸೇರಿ, ಕೊಂಕಣಿ ಸ್ವತಂತ್ರ್ಯ ಭಾಷೆಯೆಂಬುದಾಗಿ ಮಾನ್ಯ ಮಾಡಿದ್ದ ಸಂದೇಶವನ್ನು ಘೋಷಿಸಿದಾಗ ನೆರೆದ ಸಾವಿರಾರು ಕೊಂಕಣಿಗಳಲ್ಲಿ ವಿದ್ಯುತ್ ಸಂಚಾರವಾಗಿ, ಏಕ ಕಂಠದಿಂದ ಮಾಡಿದ 'ಕೊಂಕಣಿ ಮಾತೆಗೆ ಜೈಕಾರ' ದಿಗಂತವನ್ನು ಮುಟ್ಟಿತ್ತು.

ಬಳಿಕದ ವರ್ಷಗಳಲ್ಲಿ ಅಷ್ಟೇನೂ ಹೇಳಿಕೊಳ್ಳುವಂತಹ ಕೆಲಸಗಳು ಮಂಗಳೂರಿನಲ್ಲಿ ಜರುಗಲಿಲ್ಲ. 'ರಾಕ್ಣೊ' ಪತ್ರಿಕೆಯ ಕಾರ್ಯಾಲಯದಲ್ಲಿ ಕೊಂಕಣಿ ಭಾಷಾ ಮಂಡಳದ ಕೆಲಸ ಕಾರ್ಯಗಳು ಜರಗುತ್ತಿದ್ದವಷ್ಟೆ. ಮುಂದೆ 1980ನೇ ದಶಕದಲ್ಲಿ ಭಾಷಾ ಮಂಡಳದ ಅಧ್ಯಕ್ಷರಾಗಿದ್ದ ಶ್ರೀ ಬಂಟವಾಳ ದಾಮೋದರ ಪ್ರಭುಗಳು ಕೆಲಸ ಮಾಡುವ ಉತ್ಸಾಹದಲ್ಲಿದ್ದರು. ಆದರೆ ಅವರ ಹಲವಾರು ಸಾರ್ವಜನಿಕ ಕೆಲಸಗಳ ಮಧ್ಯ ಅವರಿಗೆ ಕೊಂಕಣಿ ಕೆಲಸಕ್ಕೆ ಬೇಕಾದಷ್ಟು ಸಮಯದ ಅಭಾವದಿಂದಾಗಿ ಕೊಂಕಣಿ ಭಾಷಾ ಮಂಡಳದ ಕೆಲಸ ಕುಂಟುತ್ತ ಸಾಗುತ್ತಿತ್ತು. ಕಾರ್ಯಕಾರಿ ಸಮಿತಿಗಳ ಸಭೆಗೆ 3-4 ಬಾರಿ ನಾನು ಮೂಡುಬಿದಿರೆಯಿಂದ ಬಂದು ಭಾಗವಹಿಸುತ್ತಿದ್ದೆ. ಆದರೆ ಹೆಚ್ಚೇನೂ ಕೆಲಸ ಕಾರ್ಯಗಳಾಗದ್ದರಿಂದ ನಂತರ ನಾನು ಕಾರ್ಯಕಾರಿ ಸಭೆಯಲ್ಲಿ ಭಾಗವಹಿಸುವುದನ್ನು ಬಿಟ್ಟು ಬಿಟ್ಟೆ. ಆದರೆ ನನ್ನದೇ ದಾರಿಯಲ್ಲಿ ಸಾಗಿ ಕೊಂಕಣಿ ಲೇಖನಗಳನ್ನು ಬರೆಯುತ್ತ ಬಸ್ತಿ ಪ್ರಕಾಶನದ ಹೆಸರಲ್ಲಿ ಪುಸ್ತಕಗಳನ್ನು ಪ್ರಕಾಶನ ಮಾಡುತ್ತ ಅಲ್ಲದೇ ನಾಟಕ ಸಂಗೀತ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಲಿದ್ದೆ. ಆ ದಿವಸಗಳಲ್ಲಿಯೇ ಖ್ಯಾತ ಕೊಂಕಣಿ, ಕನ್ನಡ, ತುಳು

ನಟ, ನಾಟಕ ನಿರ್ದೇಶಕ ಕಾಸರಗೋಡು ಚಿನ್ನಾರ 'ಗಾಂಟಿ' ನಾಟಕದಲ್ಲಿ ಹಿರಿಯನ್ನಾಗಿ ದ.ಕ. ಜಿಲ್ಲೆಯ ಹಲವೆಡೆ ಮತ್ತು ಮುಂಬಯಿಯಲ್ಲಿ ನಾಟಕ ಪ್ರದರ್ಶನಗಳಲ್ಲಿ ಭಾಗವಹಿಸಿದ್ದೆ.

ಅದಾಗಿ 1992 ಎಪ್ರಿಲ್ 30ರಂದು ನಾನು ಬ್ಯಾಂಕಿನ ಕೆಲಸದಿಂದ ಸ್ವಯಂ ನಿವೃತ್ತಿಯನ್ನು ಪಡೆದುಕೊಂಡಿದ್ದೆ. ನನ್ನ ಶೇಷಾಯುಷ್ಯವನ್ನು ಬಂಟವಾಳ ಶ್ರೀ ದೇವಳದ ಹಾಗೂ ಸಮಾಜದ ಹಾಗೂ ಸಾಹಿತ್ಯಿಕ ಸೇವೆಗಳಲ್ಲಿ ಕಳೆಯುವುದರೊಟ್ಟಿಗೆ ನನ್ನ ಮಗ ಮಾಧವನ ಅಂಗಡಿಯಲ್ಲಿಯೂ ಕೂತು ಅವನಿಗೆ ವ್ಯಾಪಾರದಲ್ಲಿ ನೆರವಾಗಬಹುದೆಂದು ಆಶಿಸಿದ್ದೆ. ಆದರೆ ನಡೆದುದೇ ಬೇರೆ.

ನಾನು ನಿವೃತ್ತನಾಗುವ ಒಂದೆರಡು ದಿನಗಳ ಮೊದಲು ನನ್ನ ಸಾರ್ವಜನಿಕ ಕೆಲಸ ಕಾರ್ಯಗಳನ್ನು ದೂರದಿಂದ ನೋಡಿಕೊಂಡು ನನ್ನ ಸಂಪರ್ಕ ಸಾಧನಗಳನ್ನು ಮತ್ತು ಕೊಂಕಣಿ ಭಾಷೆಯ ಕಾರ್ಯಗಳನ್ನು ಅರಿತಿದ್ದ ಕೊಂಕಣಿ ಭಾಷಾ ಮಂಡಳ (ರಿ) ಕರ್ನಾಟಕ ಸಂಸ್ಥೆಯ ಅಧ್ಯಕ್ಷರಾಗಿದ್ದ ಶ್ರೀ ಪೌಲ ಮೊರಾಸ್ ಅವರು ಮಂಗಳೂರಿನಲ್ಲಿದ್ದ ಸಿಂಡಿಕೇಟ್ ಬ್ಯಾಂಕ್ ಡಿವಿಜನಲ್ ಆಫೀಸಿಗೆ ನನ್ನೊಡನೆ ಮಾತಾಡಲು ಅಪೇಕ್ಷಿಸಿ ಬಂದಿದ್ದರು. ವಿಷಯವೇನೆಂದು ಕೇಳಿದಾಗ ಅವರು ಅದೇ ತಾನೇ ಕಾರವಾರದಲ್ಲಿ ಜರುಗಿದ ಅಖಿಲ ಭಾರತ ಕೊಂಕಣಿ ಪರಿಷದನ ಅಖಿಲ ಭಾರತ ಕೊಂಕಣಿ ಸಾಹಿತ್ಯ ಸಮ್ಮೇಳನದಲ್ಲಿ ಕರ್ನಾಟಕದಲ್ಲಿ ಕೊಂಕಣಿ ಭಾಷೆ, ಕಲೆ, ಸಂಸ್ಕೃತಿ, ಸಾಹಿತ್ಯ ಲೋಕವೇದ (ಜಾನಪದ)ಗಳ ಅಭಿವೃದ್ಧಿಗಾಗಿ ರಾಜ್ಯ ಸರಕಾರದಿಂದ ಒಂದು ಅಕಾಡೆಮಿ ಕೊಡಮಾಡಬೇಕೆಂದು ಠರಾವು ಪಾಸುಮಾಡಿದ್ದರಂತೆ. ಅವನ್ನು ಕಾರ್ಯರೂಪಕ್ಕಿಳಿಸಲು ಕರ್ನಾಟಕದಲ್ಲಿ ವಾಸಿಸುತ್ತಿರುವ ಕೊಂಕಣಿಗಳ ಪರವಾಗಿ ರಾಜ್ಯದ ಮುಖ್ಯಮಂತ್ರಿಯವರಿಗೆ ಒಂದು ಮನವಿಯಲ್ಲಿ ನೀಡುವುದಕ್ಕಾಗಿ 'ಕೊಂಕಣಿ ಜಾಥಾ' ಚಳವಳವನ್ನು ಕೈಗೊಳ್ಳುವ ವಿಷಯದಲ್ಲಿ ನಾಡಿನಾದ್ಯಂತ ಸಂಘಟನೆ ಮಾಡುವ ಸಲುವಾಗಿ ಕೊಂಕಣಿ ಭಾಷಾ ಮಂಡಳ ಒಂದು ಸಂಘಟನಾ ಸಮಿತಿಯನ್ನು ನೇಮಕ ಮಾಡುವುದರಲ್ಲಿ ನಾನು ಸಹಕರಿಸಿ, ಆ ಸಮಿತಿಯಲ್ಲಿ ಸಂಘಟನಾ ಕಾರ್ಯದರ್ಶಿಯಾಗಿ ನೆರವಾಗಬೇಕೆಂದು ವಿಷಯ ಪ್ರಸ್ತಾವಿಸಿದರು. ನಾನು ಮಾತೃಭಾಷೆಯ ಮೇಲಿನ ಅಭಿಮಾನದಿಂದ ಶ್ರೀ ಮೊರಾಸ್ ಬಾಬರ ಮಾತಿಗೆ ಒಪ್ಪಿಗೆ ಸೂಚಿಸಿದೆ ಮತ್ತು ಮೇ 1 ತಾರೀಕಿನಿಂದ ನಾನು ಅವರು ಕೈಗೆತ್ತಿಕೊಂಡ ಕಾರ್ಯದಲ್ಲಿ ಪೂರ್ಣವಾಗಿ ತೊಡಗಿಸಿಕೊಳ್ಳುವುದಾಗಿ ಭರವಸೆ ಕೊಟ್ಟೆ. ನನ್ನ ನಿವೃತ್ತಿ ಜೀವನದಲ್ಲಿ ನನ್ನ ಮಾತೃಭಾಷೆಯ ಸೇವೆಯ ಇದೊಂದು ಒಳ್ಳೆಯ ಕೆಲಸವಾಗುತ್ತದೆ ಎಂಬ ಅಭಿಪ್ರಾಯದಿಂದಿದ್ದೆ ಅಲ್ಲದೇ ಅಂದಿನ ದಿನಗಳಲ್ಲಿ ಇದೊಂದು ಸಣ್ಣ ತೊರೆ (ತೋಡು) ಎಂದು ನೆನೆದು ಅದರಲ್ಲಿ ಇಳಿದಿದ್ದೆ. ಆದರೆ ಮುಂದೆ ಅದು ಒಂದು ಮಹಾಸಾಗರಕ್ಕೆ ನನ್ನನ್ನು ಒಯ್ಯಲಿದೆ ಎಂಬ ಕಲ್ಪನೆ ನನಗಿರಲಿಲ್ಲ. ನನ್ನೊಡನಿದ್ದ ಇತರರಿಗೂ ಇದರ ಕಲ್ಪನೆಯಿರಲಿಲ್ಲ. ಅಂತಹ ಸೆಳೆತ ಮೊರೆತಗಳಿಂದಾಗಿ ಆ ಪ್ರವಾಹದಲ್ಲಿ ಈಜುತ್ತಲಿದ್ದು ಮಹಾಸಾಗರದ ಅಲೆಗಳ ಮೇಲೆ ಈಗಲೂ ತೇಲುತ್ತಲಿದ್ದೇನೆ.

ಕೊಂಕಣಿ ಭಾಷೆಯ ಸೇವೆಯಲ್ಲಿ ಕೊಂಕಣಿ ಜಾಥಾದಲ್ಲಿ ಭಾಗವಹಿಸಲು ನಾವು ಕೆಲವರು ಕರ್ನಾಟಕ ರಾಜ್ಯದಲ್ಲಿ ಮಂಗಳೂರು, ಉಡುಪಿ, ಕಾರವಾರ, ಹುಬ್ಬಳ್ಳಿ, ಧಾರವಾಡ, ಬೆಳಗಾಂ, ಮೈಸೂರು, ಬೆಂಗಳೂರುಗಳಲ್ಲಿ ಕೊಂಕಣಿ ಸಂಘ ಸಂಸ್ಥೆಗಳನ್ನು ಸಂಪರ್ಕಿಸಿ, ಸ್ಥಳೀಯ ಕೊಂಕಣಿಗಳಿಗೆ ವಿಷಯ ತಿಳಿಸಿ ಭಾಗಿಯಾಗುವಂತೆ ವಿನಂತಿಸಿದ್ದಾಗ ಅಭೂತಪೂರ್ವ ಬೆಂಬಲ ಕಂಡುಬಂತು ಮತ್ತು ಕೊಂಕಣಿಗಳಲ್ಲಿ ಕೊಂಕಣಿ ಭಾಷೆಯ ಬಗ್ಗೆ ಸಾಹಿತ್ಯದ ಬಗ್ಗೆ ಸ್ವಾಭಿಮಾನ ಮೊಳೆಯುವುದು ತೋರಿಬಂತು.

ಅದಲ್ಲದೇ ಗೋವಾ ರಾಜ್ಯ ಪೋರ್ಚುಗೀಸರಿಂದ 1961ರಲ್ಲಿ ಸ್ವತಂತ್ರಗೊಂಡ ಬಳಿಕ ಅಲ್ಲಿಯ ಸ್ವಾತಂತ್ರ್ಯ ಹೋರಾಟಗಾರರಾಗಿ ಜೀವ ಸವೆಸಿದವರು ಬಳಿಕ ಮಾತೃಭಾಷಾ ಚಳುವಳಿಯ ನೇತಾರರೂ ಆಗಿ ಪೋರ್ಚುಗೀಸರಿಂದ, ವಿದೇಶೀ ಮಿಷನರಿಗಳಿಂದ, ಕೊಂಕಣಿ ಭಾಷೆಯ ಮೇಲೆ, ಸಂಸ್ಕೃತಿ, ಕಲೆಗಳ ಮೇಲೆ, ಜನಜೀವನದ ಮೇಲೆ ಮಾಡಿದ ಆಕ್ರಮಣ ಕೊಂಕಣಿ ಸಾಹಿತ್ಯವನ್ನು ಸುಟ್ಟು ನಾಶಮಾಡಿದ ಮತ್ತು ಗೋವೆಯ ಶಿಕ್ಷಣ ಕ್ರಮದಲ್ಲಿ ಪೋರ್ಚುಗೀಸ ಭಾಷೆಯೊಂದಿಗೆ ಕೊಂಕಣಿ ಕಲಿಯುವಿಕೆಗೆ ಆಸ್ಪದ ಕೊಡದೇ ಮರಾಠಿ ಭಾಷ ಕಲಿಕೆಗೆ ಶಾಲೆಗಳನ್ನು ಪ್ರಾರಂಭಿಸಿ ಕೊಂಕಣಿ ಭಾಷೆಯನ್ನೇ ಕೊಲ್ಲಲು ಹೊರಟ 450 ವರ್ಷಗಳ ಚರಿತ್ರೆಯನ್ನು ಬದಲಿಸಲೆಂದು ಕೊಂಕಣಿ ಭಾಷಾ ಚಳುವಳಿಯನ್ನು ಪ್ರಾರಂಭಿಸಿದ್ದರು.

ಪೋರ್ಚುಗೀಸರು ಗೋವೆಯಿಂದ ಕಾಲುಕಿತ್ತ ಬಳಿಕ ಮರಾಠಿ ಭಾಷಾ ದುರಭಿಮಾನಿಗಳು ಗೋವೆಯನ್ನು ಮಹಾರಾಷ್ಟ್ರದಲ್ಲಿ ಸೇರಿಸಬೇಕೆಂಬ ಕೂಗಿನೊಂದಿಗೆ ತಮ್ಮ ಸಾಹಿತ್ಯಿಕ ಸಾಂಸ್ಕೃತಿಕ ರಾಜಕೀಯ ಪ್ರಕ್ರಿಯೆಯನ್ನು ಪ್ರಾರಂಭಿಸಿದ್ದರು. 1967ರಲ್ಲಿ ಗೋವಾದಲ್ಲಿ ಕೇಂದ್ರ ಸರಕಾರ ಜರುಗಿಸಿದ ಮತಗಣನೆಯಲ್ಲಿ ಗೋವಾ ಕೊಂಕಣಿ ರಾಜ್ಯವಾಗಿಯೇ ಉಳಿಯುವಂತೆ ಜನಾದೇಶ ಸಿಕ್ಕಿತ್ತು. ಇದನ್ನು ಮನಗಂಡ ಕೊಂಕಣಿ ನೇತಾರರು ಮುಂದೆ 1976ರಲ್ಲಿ ದಿಲ್ಲಿಯಲ್ಲಿರುವ ಕೇಂದ್ರ ಸಾಹಿತ್ಯ ಅಕಾಡೆಮಿಯು 'ಕೊಂಕಣಿ ಒಂದು ಸ್ವತಂತ್ರ ಭಾಷೆ. ಮರಾಠಿ ಭಾಷೆಯ ಉಪಭಾಷೆ ಅಲ್ಲ' ಎಂದು ಘೋಷಣೆ ಮಾಡಿಸುವುದರಲ್ಲಿ ಯಶಸ್ವಿಯಾದರು. ಬಳಿಕ 1987ರಲ್ಲಿ ಗೋವಾಗೆ ಒಂದು ಪ್ರತ್ಯೇಕ ರಾಜ್ಯದ ಸ್ಥಾನಮಾನವೂ ಸಿಕ್ಕಿತು.

ಕೊಂಕಣಿ ಗೋವಾದ ರಾಜಭಾಷೆಯಾಗಿಯೂ ಘೋಷಣೆಯಾಗಿತ್ತು. ಹಾಗೇಯೇ ಕೊಂಕಣಿ ಭಾಷೆ ರಾಷ್ಟ್ರೀಯ ಭಾಷೆಯೆಂದು ಘೋಷಣೆ ಮಾಡಬೇಕೆಂದು ಕೇಂದ್ರ ಸರಕಾರವನ್ನು ಒತ್ತಾಯ ಮಾಡಲಾಯಿತು. ಮೊದಲಿನಿಂದಲೂ ಈ ವಿಷಯಕ್ಕಾಗಿ ಕೊಚ್ಚಿಯ ಖ್ಯಾತ ಕೊಂಕಣಿ ಚಳವಳ ಮುಂದಾಳು ಮತ್ತು ಸಾಹಿತ್ಯಕಾರ ಶ್ರೀ ಎಂ. ಪುರುಷೋತ್ತಮ ಮಲ್ಯರು ಶ್ರೀಮತಿ ಇಂದಿರಾ ಗಾಂಧಿಯವರನ್ನು ವತ್ತಾಯಿಸುತ್ತಲೇ ಇದ್ದರು. ಅಲ್ಲದೇ ಗೋವಾದಲ್ಲಿ ಕೊಂಕಣಿ ಚಳವಳಿಯ ಮುಖಂಡರೂ ಈ ಕುರಿತಾಗಿ ಕೇಂದ್ರ ಸರಕಾರದ ಮೇಲೆ ಒತ್ತಡ ತರುತ್ತಲಿದ್ದರು. ಅದರಂತೆ ನಾವು ಕೊಂಕಣಿ ಭಾಷಾ ಮಂಡಲದ ವತಿಯಿಂದ ಕೊಂಕಣಿ

ಜಾಥಾ ಪ್ರಣಾಳಿಕೆಯಲ್ಲಿ ಕರ್ನಾಟಕ ರಾಜ್ಯದಲ್ಲಿ ಕೊಂಕಣಿ ಅಕಾಡೆಮಿ ಸ್ಥಾಪಿಸಬೇಕೆಂಬುದಾಗಿ ರಾಜ್ಯ ಸರಕಾರವನ್ನು ವತ್ತಾಯಿಸುವಂತೆ, ಎರಡನೇಯ ಬೇಡಿಕೆಯಾಗಿ ಕೊಂಕಣಿ ಭಾಷೆಗೆ ರಾಷ್ಟ್ರೀಯ ಭಾಷಾ ಸ್ಥಾನ ಕೊಡುವಂತೆ ಭಾರತ ಸಂವಿಧಾನದ 8ನೇ ಪರಿಚ್ಛೇದಕ್ಕೆ ತಿದ್ದುಪಡಿ ತರುವಂತೆ ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡುವಂತೆ ರಾಜ್ಯ ಸರಕಾರವನ್ನು ವತ್ತಾಯಿಸುವ ಎರಡನೇ ಬೇಡಿಕೆಯನ್ನು ಸೇರಿಸಲಾಗಿತ್ತು.

ಆದರೆ ದೇವರ ದಯೆಯೆಂಬಂತೆ ನಾವು 'ಕೊಂಕಣಿ ಜಾಥಾ' ಕುರಿತಾದ ಒಂದು ಸಂಘಟನಾ ಸಮ್ಮೇಳನವನ್ನು ಮಂಗಳೂರಿನಲ್ಲಿ ನೇರವೇರಿಸುವಾಗಲೇ ಕೇಂದ್ರ ಸರಕಾರ ಭಾರತ ಸಂವಿಧಾನದ ೮ನೇ ಪರಿಚ್ಛೇದಕ್ಕೆ ಅಂದಿನ ಲೋಕಸಭಾ ಅಧಿವೇಶನದಲ್ಲಿಯೇ ತಿದ್ದುಪಡಿಯನ್ನು ತಂದು ಪಾಸು ಮಾಡಿದ್ದರಿಂದ ನೇಪಾಳಿ, ಕೊಂಕಣಿ ಮತ್ತು ಮಣಿಪುರಿ ಭಾಷೆಗಳು 'ರಾಷ್ಟ್ರೀಯ ಭಾಷೆ'ಗಳೆಂದು ಘೋಷಿಸಿತು.

ಇದರಿಂದಾಗಿ ಕೊಂಕಣಿ ಜಾಥಾ ಚಳವಳದ ಮಹತ್ವದ ಬೇಡಿಕೆಯೊಂದು ಸುಲಭವಾಗಿ ಸಿದ್ಧಿಸಿತು. ಅಂದಿನ ಸಭೆಯಲ್ಲಿ ಕೇಂದ್ರ ಸರಕಾರವನ್ನು ಅಭಿನಂದಿಸಿ ಹರಾವು ಪಾಸುಮಾಡಲಾಗಿತ್ತು.

ಮುಂದೆ ನಾವು 1992 ಅಕ್ಟೋಬರ ಮೊದಲ ವಾರದಲ್ಲಿ ಬೆಂಗಳೂರಿಗೆ ತೆರಳಿ ರಾಜ್ಯ ಸರಕಾರದಲ್ಲಿ ಮಂತ್ರಿಗಳಾಗಿದ್ದ ಮಾನ್ಯ ಶ್ರೀ ಬ್ಲೇಸಿಯಸ್ ಡಿ' ಸೋಜ ಇವರ ನೇತೃತ್ವದಲ್ಲಿ ಕರ್ನಾಟಕ ರಾಜ್ಯದ ಸನ್ಮಾನ್ಯ ರಾಜ್ಯಪಾಲರನ್ನೂ, ಮುಖ್ಯಮಂತ್ರಿ ಮಾನ್ಯ ಶ್ರೀ ಬಂಗಾರಪ್ಪನವರನ್ನೂ ಭೇಟಿಯಾಗಿ ಮಾನಪತ್ರ ನೀಡಲಾಯಿತು. ಆದರೆ ಪರಿಣಾಮವೇನೂ ಆಗಲಿಲ್ಲ.

ಅಂದಿನಿಂದ ಎರಡು ತಿಂಗಳ ಬಳಿಕ ಶ್ರೀ ಪೌಲ ಮೊರಾಸರು ತನ್ನ ವೈಯಕ್ತಿಕ ಕಾರಣಗಳಿಗಾಗಿ ಕೊಂಕಣಿ ಭಾಷಾ ಮಂಡಲದ ಅಧ್ಯಕ್ಷ ಪದವಿಯನ್ನು ತೆರವು ಮಾಡಿದಾಗ ಕಾರ್ಯಕಾರೀ ಸಮಿತಿಯ ಸದಸ್ಯರು ನನ್ನನ್ನು ಭಾಷಾ ಮಂಡಲದ ಅಧ್ಯಕ್ಷನನ್ನಾಗಿ ಆರಿಸಿದರು. ಮುಂದೆ ಹಲವಾರು ಕಾರ್ಯಕ್ರಮಗಳನ್ನು ನಾವು ಕೈಗೊಂಡೆವು ಮತ್ತು ನನ್ನ ಎಲ್ಲಾ ಯೋಜನೆಗಳಿಗೂ ಪರಮಾತ್ಮನ ಆಶೀರ್ವಾದವಿತ್ತೆಂದು ನನಗೆ ಮನವರಿಕೆಯಾಗಿದೆ.

ನಾನು 1993ರಲ್ಲಿ ಕೊಂಕಣಿ ಭಾಷಾ ಮಂಡಲದ ಅಧ್ಯಕ್ಷನಾಗಿ ಅಧಿಕಾರ ಸ್ವೀಕರಿಸಿದ ದಿನಗಳಲ್ಲಿಯೇ ನಮ್ಮವರೇ ಆದ ದ.ಕ. ಜಿಲ್ಲೆಯ ಮೂಡುಬಿದಿರೆಯ ಸನ್ಮಾನ್ಯ ಶ್ರೀ ಎಂ. ವೀರಪ್ಪ ಮೊಯ್ಲಿಯವರು ರಾಜ್ಯ ಸರಕಾರದ ಮುಖ್ಯಮಂತ್ರಿಗಳಾಗಿ ಅಧಿಕಾರ ವಹಿಸಿಕೊಂಡರು. ನಾನು ದಿ. ರಂದು ಕರ್ನಾಟಕ ರಾಜ್ಯದ ವಿವಿದೆಡೆಗಳಿಂದ, ವಿವಿಧ ಕ್ಷೇತ್ರಗಳಲ್ಲಿ ಹೆಸರುವಾಸಿಯಾದ ಕೊಂಕಣಿ ಮುಖಂಡರನ್ನು ಬೆಂಗಳೂರಿಗೆ ಬರಮಾಡಿ, ಮುಖ್ಯಮಂತ್ರಿ ಸನ್ಮಾನ್ಯ ಎಂ. ವೀರಪ್ಪ ಮೊಯ್ಲಿಯವರ 'ಕೌಸ್ತುಭ' ನಿವಾಸದಲ್ಲಿ ನಮ್ಮ ಶಿಷ್ಟಮಂಡಲದ ಒಟ್ಟಿಗೆ ಅವರನ್ನು ಭೇಟಿಯಾಗಿ ಕೊಂಕಣಿ ಭಾಷಾಭಿವೃದ್ಧಿಗಾಗಿ

ಕರ್ನಾಟಕದಲ್ಲಿ ಒಂದು ಅಕಾಡೆಮಿಯನ್ನು ಸ್ಥಾಪಿಸಬೇಕೆಂದು ಮನವಿಯನ್ನು ಅರ್ಪಿಸಿದೆ. ನಮ್ಮೊಡನೆ ಕರ್ನಾಟಕ ಸರಕಾರದಲ್ಲಿ ಮಂತ್ರಿಗಳಾಗಿದ್ದ ಬ್ಲೇಸಿಯಸ್ ಎಂ. ಡಿ' ಸೋಜ, ಎಂ.ಎಲ್.ಸಿ.ಗಳಾಗಿದ್ದ ಹಿರಿಯರೂ ಆಗಿದ್ದ ಶ್ರೀ ಬಂಟವಾಳ ನಾರಾಯಣ ನಾಯಕ, ವಿಧಾನ ಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದ ಶ್ರೀ ಆರ್. ವ್ಹಿ. ದೇಶಪಾಂಡೆ, ಭಾರತ ಬೀಡಿಯ ಮ್ಹಾಲಕ ಶ್ರೀ ಬಿ. ಗಣಪತಿ ಪೈ, ಬಿ.ವಿ. ಬಾಳಿಗಾ, ಡಾ. ವಿ.ಜೆ.ಪಿ. ಸಾಲ್ಡಾನಾ, ಶ್ರೀ ರೋನಾಲ್ಡ್ ಕೊಲಾಸೋ. ಶ್ರೀ ಕುಡ್ವಿ ಜಗದೀಶ ಶೆಣೈ ಮುಂತಾದವರು ಇದ್ದರು.

ಮಾನ್ಯ ಶ್ರೀ ಮೊಯ್ಲಿಯವರು ನಮ್ಮ ಮನವಿಯನ್ನು ಸ್ವೀಕರಿಸಿ, ನಮ್ಮ ಬೇಡಿಕೆಯನ್ನು ಮನ್ನಿಸಿ, ಕೊಂಕಣಿ ಅಕಾಡೆಮಿಯನ್ನು ಕರ್ನಾಟಕ ಸರಕಾರದ ವತಿಯಿಂದ ಸ್ಥಾಪಿಸುವುದಾಗಿ ಭರವಸೆಯಿತ್ತರು. ಆದರೂ ಆಗಾಗ್ಗ ಅವರನ್ನು ಬೆಂಗಳೂರು, ಮಂಗಳೂರು, ಕಾರ್ಕಳದಲ್ಲಿ ಭೇಟಿಯಾಗಿ ಕೊಂಕಣಿ ಅಕಾಡೆಮಿಯ ಬಗ್ಗೆ ಜ್ಞಾಪಕ ಹುಟ್ಟಿಸಿದೆ. ಅಲ್ಲದೇ ಅವರ ಆಪ್ತರಲ್ಲೊಬ್ಬರಾದ ಶ್ರೀ ರೋನಾಲ್ಡ ಕೊಲಾಸೊರವರೊಟ್ಟಿಗೆ ಇನ್ನೊಮ್ಮೆ ಮುಖ್ಯಮಂತ್ರಿಗಳ 'ಕೃಷ್ಣಾ' ನಿವಾಸದಲ್ಲಿ ಭೇಟಿಯಾದಾಗ ಖಂಡಿತವಾಗಿಯೂ 1994ರ ಬಜೆಟ್ಟಿನಲ್ಲಿ ಕೊಂಕಣಿ ಅಕಾಡೆಮಿಯ ಪ್ರಸ್ತಾವವನ್ನು ಅಳವಡಿಸಿ, ಕೊಂಕಣಿ ಅಕಾಡೆಮಿಯನ್ನು ಸ್ಥಾಪಿಸುವುದಾಗಿ ಹೇಳಿದರು. ಹಾಗೆಯೇ 1994-95ರ ವರ್ಷದಲ್ಲಿ ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಸ್ಥಾಪಿತವಾಯಿತು. ಮುಂದೆ 1997ರಿಂದ 2001ರವರೆಗೆ 4½ ವರ್ಷಗಳ ಕಾಲ ನಾನು ಅಧ್ಯಕ್ಷನೂ ಆಗಿದ್ದೆ. ಹಲವಾರು ಮೌಲಿಕ ಪುಸ್ತಕಗಳನ್ನು, ಅಲ್ಲದೇ 'ಕೊಂಕಣಿ ಮಹಾಮಾನೆಸ್ತ ಪುಸ್ತಕ ಮಾಲಾ' ಶೀರ್ಷಿಕೆಯಡಿಯಲ್ಲಿ ೧೮ ಕೊಂಕಣಿ ಮಹಾಮಹಿಮರ ಜೀವನ ವೃತ್ತಾಂತ, ಡಾ. ಕೃಷ್ಣಾನಂದ ಕಾಮತರು ಬರೆದ 'ಕೊಂಕಣ್ಯಾಲಿ ಕಾವಿಕಲಾ' ಕೊಂಕಣಿ ಸಮಾಂತರ ಶಬ್ದಕೋಶ ಮುಂತಾದ ಪುಸ್ತಕಗಳನ್ನು ಅಕಾಡೆಮಿಯಿಂದ ಪ್ರಕಟಿಸಿದ್ದೆ.

ಅದಲ್ಲದೇ ದಿಲ್ಲಿಯ ಜಿ.ವ್ಹಿ. ಮಾವಲಂಕರ ಸಭಾಗೃಹದಲ್ಲಿ ಕರ್ನಾಟಕ ರಾಜ್ಯದ ಎಲ್ಲೆಡೆಗಳಿಂದ ವಿವಿಧ ಸಾಂಸ್ಕೃತಿಕ, ಕಲಾ ತಂಡಗಳನ್ನು 130 ಕಲಾವಿದರನ್ನು ದಿಲ್ಲಿಗೆ ಕೊಂಡೊಯ್ದು 3 ದಿನಗಳ ಕಾಲ 'ಕೊಂಕಣಿ ಕಲಾ ಉತ್ಸವ' ಕಾರ್ಯಕ್ರಮವನ್ನು ಏರ್ಪಡಿಸಿದ್ದೆ.

ಶಾಲೆಗಳಲ್ಲಿ ಕೊಂಕಣಿ

ನಾವು ಸಂಘಟಿಸಿದ್ದ 'ಕೊಂಕಣಿ ಜಾಥಾ'ದಿಂದ ಕರ್ನಾಟಕ ರಾಜ್ಯದ ಎಲ್ಲೆಡೆಗಳಲ್ಲಿ ವಾಸಿಸುತ್ತಿದ್ದ ಕೊಂಕಣಿಗಳಲ್ಲಿ ನಮ್ಮ ಮಾತೃ ಭಾಷೆಯ ಬಗ್ಗೆ ಅಭಿಮಾನ ಜಾಗೃತವಾಗಿತ್ತು. ಯಾವುದೇ ಭಾಷೆ ಬದುಕಿ ಉಳಿಯಬೇಕಾದರೆ, ಮಕ್ಕಳಿಗೆ ಎಳೆಯರಿದ್ದಾಗಲೇ ಶಾಲೆಗಳಲ್ಲಿ ಕಲಿಸುವುದು ಅಗತ್ಯ. ಅದನ್ನು ಮನಗಂಡ ನಾನು ಮಂಗಳೂರ ಕೆನರಾ ಹೈಸ್ಕೂಲಿನ ಮುಖ್ಯಸ್ಥರಾಗಿದ್ದ ಶ್ರೀ ಕೇಪುಳ ದಿನೇಶ ನಾಯಕರನ್ನು ಭೇಟಿಯಾಗಿ ವಿಷಯವನ್ನು ಪ್ರಸ್ತಾಪ ಮಾಡಿ, ಕೆನರಾ ಹೈಸ್ಕೂಲಿನಲ್ಲಿ ವಿದ್ಯಾರ್ಥಿಗಳಿಗೆ ಹಿಂದಿ ಪ್ರಚಾರ ಸಭಾ ನಡೆಸುವ ಕ್ಲಾಸುಗಳ ಮಾದರಿಯಲ್ಲಿ ಕೊಂಕಣಿ ಶಿಕ್ಷಣ ಪ್ರಾರಂಭಿಸಬೇಕೆಂದು ಕೇಳಿಕೊಂಡೆ. ಖ್ಯಾತ ಕೊಂಕಣಿ

ಕವಿ ಸಾಹಿತಿ ಸಂಗೀತಕಾರರಾಗಿದ್ದ ಹಿರಿಯರಾದ ಶ್ರೀ ಬಿ.ವಿ. ಬಾಳಿಗರೂ ನನ್ನೊಡನಿದ್ದರು. ನಮ್ಮ ಯೋಜನೆಯನ್ನು ಒಪ್ಪಿಕೊಂಡ ಶ್ರೀನಾಯಕರು ತಮ್ಮ ಸಂಸ್ಥೆಯ ಶಾಲೆಗಳಲ್ಲಿ ಕೊಂಕಣಿ ತರಗತಿಯನ್ನು ಪ್ರಾರಂಭಿಸಲು ಒಪ್ಪಿ ಅದಕ್ಕೆ ಬೇಕಾದ ವ್ಯವಸ್ಥೆ ಮಾಡಲು, ಬೇಕಾದ ನಿಧಿಯನ್ನು ವಿನಿಯೋಗಿಸಲು ಒಪ್ಪಿದರು. ಬಳಿಕ ನಾವು ಕೊಂಕಣಿ ಕ್ಲಾಸುಗಳನ್ನು ನಡೆಸುವ ಪದ್ಧತಿ, ಪಠ್ಯ ಪುಸ್ತಕಗಳ ಬಗ್ಗೆ ತಿಳುವಳಿಕೆ ಪಡಕೊಂಡು ಬರಲು ಗೋವೆಗೆ ಕಳುಹಿಸಿಕೊಟ್ಟೆ ಹಾಗೂ ಕೊಂಕಣಿ ಪಠ್ಯ ಪುಸ್ತಕಗಳನ್ನು ತರಿಸಿದೆ.

ಕೊಂಕಣಿ ಇಂಡೋ ಆರ್ಯನ ಭಾಷೆಗಳಲ್ಲಿ ಒಂದು (ಸಂಸ್ಕೃತ, ಹಿಂದಿ, ನೇಪಾಳಿ, ಮರಾಠಿ, ರಾಜಸ್ತಾನಿ ಇತರ 5 ಭಾಷೆಗಳಾಗಿವೆ). ಅದರಿಂದ ಕೊಂಕಣಿಯ ಸ್ವಾಭಾವಿಕ ಹಾಗೂ ರಾಷ್ಟ್ರೀಯ ಮಾನ್ಯತೆಯಿರುವ ಹಾಗೂ ಗೋವೆಯ ಅಧಿಕೃತ ರಾಜ್ಯ ಭಾಷೆಯಾಗಿ ಕೊಂಕಣಿಗೆ ದೇವನಾಗರಿ ಲಿಪಿಯನ್ನು ಸಹಜ ಲಿಪಿಯಾಗಿ ಮತ್ತು ನಮ್ಮ ಕರ್ನಾಟಕ ರಾಜ್ಯದ ಕನ್ನಡ ಲಿಪಿ ಹೀಗೆ ಎರಡೂ ಲಿಪಿಗಳಲ್ಲಿಯೂ ಪಠ್ಯಪುಸ್ತಕ ತಯಾರಿಸಿ ಕೆನರಾ ಹೈಸ್ಕೂಲ ಮೈನ ಮತ್ತು ಉರ್ವ ಶಾಲೆಗಳಲ್ಲಿ ಕೊಂಕಣಿ ಕ್ಲಾಸುಗಳನ್ನು 1994ರಿಂದಲೇ ಪ್ರಾರಂಭಿಸಿದೆವು. ಈ ಕ್ಲಾಸುಗಳಿಗೆ ತುಳು ಕನ್ನಡ ಮಾತೃಭಾಷೆಯ ಮಕ್ಕಳೂ ಸೇರುತ್ತಿದ್ದರೆಂಬುದು ವಿಶೇಷ.

ನಂತರ ನಾನು ಕೊಂಕಣಿ ಅಕಾಡೆಮಿಯ ಅಧ್ಯಕ್ಷನಾದ ಮೇಲೆ ಕೊಂಕಣಿ ಭಾಷಾ ಪಠ್ಯ ಪುಸ್ತಕಗಳನ್ನು ಪಾಠ ಮಾಡಲು ಉಪಾಧ್ಯಾಯರುಗಳಿಗೆ ಕಾರ್ಯಾಗಾರಗಳನ್ನು 3-4 ಸಲ ಮಂಗಳೂರಿನ ನಲಂದಾ ಶಾಲೆಯಲ್ಲಿ ಕರ್ನಾಟಕ ರಾಜ್ಯ ಕೊಂಕಣಿ ಭಾಷಾ ಅಲ್ಪ ಸಂಖ್ಯಾಕ ಶಾಲಾಡಳಿತಗಳ ಸಂಘದ ನೆರವಿನಿಂದ ಏರ್ಪಾಡು ಮಾಡಿದೆ. ಕೆಥೋಲಿಕ ಬೋರ್ಡ ಆಫ್ ಎಜ್ಯುಕೇಶನ್‌ನವರ ಸಹಕಾರವೂ ಸಿಕ್ಕಿತ್ತು.

ಈಗ ಕರ್ನಾಟಕ ಸರಕಾರ 2005ರಿಂದ ಶಾಲೆಗಳಲ್ಲಿ 6ನೇ ಕ್ಲಾಸಿನಿಂದ ಕೊಂಕಣಿಯನ್ನು 3ನೇ ಇಚ್ಛಿಕ ಭಾಷೆಯಾಗಿ ಕಲಿಸಲು ಒಪ್ಪಿದ್ದು, ದೇವನಾಗರಿ ಮತ್ತು ಕನ್ನಡ ಲಿಪಿಗಳಲ್ಲಿ ಪಠ್ಯಪುಸ್ತಕಗಳನ್ನು ಕರ್ನಾಟಕ ಸರಕಾರದ ವಿದ್ಯಾ ಇಲಾಖೆ ಛಾಪಿಸಿ (ಪ್ರಿಂಟ್ ಮಾಡಿ) ಶಾಲೆಗಳಿಗೆ ವಿತರಣೆ ಮಾಡುತ್ತದೆ.

2002ರಲ್ಲಿ ಮಂಗಳೂರಿನಲ್ಲಿ 23ನೇ ಅಖಿಲ ಭಾರತ ಕೊಂಕಣಿ ಅಧಿವೇಶನವನ್ನು ಕೊಂಕಣಿ ಪ್ರತಿಷ್ಠಾನದ ವತಿಯಿಂದ ಸಂಘಟಿಸಿದ್ದೆ. ಗೋವಾದ ಹಿರಿಯ ಕೊಂಕಣಿ ಮುಂದಾಳುಗಳಾದ ಮತ್ತು ಗೋವಾ ವಿಶ್ವವಿದ್ಯಾಲಯದ "ಕೊಂಕಣಿ ವಿಶ್ವ ಕೋಶ" (Konkani Encyclopedia)ದ ಮುಖ್ಯ ಸಂಪಾದಕರಾಗಿದ್ದ ಡಾ. ತಾನಾಜಿ ಹಳರಣಕರ ಅವರು ಅಧ್ಯಕ್ಷರಾಗಿದ್ದರು.

ಮುಂದೆ 2004ರಲ್ಲಿ ಅಖಿಲ ಭಾರತ ಕೊಂಕಣಿ ಪರಿಷತ್ತಿನ ಅಧ್ಯಕ್ಷನನ್ನಾಗಿ ನನ್ನನ್ನು ಆರಿಸಿದರು ಮತ್ತು ಕೇರಳದ ಕಲ್ಲಿಕೋಟೆ (Kozhikode)ಯಲ್ಲಿ ದರುಗಿದ 24ನೇ ಅಖಿಲ ಭಾರತ ಕೊಂಕಣಿ ಅಧಿವೇಶನದಲ್ಲಿ ತುಂಮಬಿದ ಸಹಸ್ರಾರು ಪ್ರತಿನಿಧಿಗಳ ಮುಂದೆ ಅಧ್ಯಕ್ಷ

ಸ್ಥಾನ ವಹಿಸಿಕೊಂಡು ಕಾರ್ಯನಿರ್ವಹಿಸಿದೆ.

200.....ನೇ ಇಸವಿಯಲ್ಲಿ ಕೊಂಕಣಿ ಚಳುವಳಿಯ ಪಿತನೆಂದು ಖ್ಯಾತಿವೆತ್ತ ಶೆಣ್ಯೆ ಗೊಂಯ ಬಾಬ (ವಾಮನ ರಘುನಾಥ ವರ್ದೆ ವಾಲಾವಲಿಕಾರ) ಅವರ 125ನೇ ಜನ್ಮದಿನದ ಆಚರಣೆಯನ್ನು ಗೋವೆಯಲ್ಲಿ ಹಮ್ಮಿಕೊಳ್ಳಲಾಗಿತ್ತು. ನಮ್ಮ ಕೊಂಕಣಿ ಭಾಸ ಆನಿ ಸಂಸ್ಕೃತಿ ಪ್ರತಿಷ್ಠಾನದ ವತಿಯಿಂದಲೂ 'ಶೆಣ್ಯೆ ಗೊಂಯಬಾಬ ಜೀವಿತ ಆನಿ ಕಾರ್ಯಂ' ಎಂಬ ಪುಸ್ತಕವನ್ನು ಶಾಲಾ ಕಾಲೇಜು ಮಕ್ಕಳಿಗಾಗಿ ಬರೆದು, 5000 ಪ್ರತಿಗಳನ್ನು ಛಾಪಿಸಿ, ಕರ್ನಾಟಕ ರಾಜ್ಯದ ಉತ್ತರ ಕನ್ನಡ ಜಿಲ್ಲೆ, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆ, ಮೈಸೂರು, ಬೆಂಗಳೂರು, ಬೆಳಗಾಂ, ಹುಬ್ಬಳ್ಳಿ, ಧಾರವಾಡ, ದಾವಣಗೆರೆ, ಶಿವಮೊಗ್ಗ, ಚಿಕ್ಕಮಗಳೂರಿನಲ್ಲಿರುವ ಕೊಂಕಣಿ ಭಾಷಾ ವಿದ್ಯಾರ್ಥಿಗಳಿಗೆ ಹಂಚಿ ಅಲ್ಲಲ್ಲ ಶೆಣ್ಯೆಗೊಂಯಬಾಬರ ಬಗ್ಗೆ ಪರಿಸಂವಾದ, ಗೋಷ್ಠಿ, ವಿದ್ಯಾರ್ಥಿಗಳಲ್ಲಿ ಸ್ಪರ್ಧೆಯನ್ನು ಏರ್ಪಡಿಸಿದೆ. ಅದರಿಂದಾಗಿ ಕರ್ನಾಟಕ ರಾಜ್ಯದ ಎಳೆಯರು ಮತ್ತು ಸಾಮಾನ್ಯ ಕೊಂಕಣಿ ಜನರೆಲ್ಲರೂ ಶೆಣ್ಯೆ ಗೊಂಯಬಾಬರ ಕೊಂಕಣಿ ಸೇವೆ, ಅವರ ತ್ಯಾಗ, ಅವರ ಸಾಹಿತ್ಯ ರಚನೆ ಅವರ ಕಾರ್ಯ ಸಾಧನೆಗಳ ಬಗ್ಗೆ ವಿಸ್ತೃತ ಮಾಹಿತಿ ಮತ್ತು ಪ್ರಚಾರ ಸಿಗುವಂತೆ ಪ್ರಯತ್ನ ಮಾಡಲಾಯಿತು.

2005ರಲ್ಲಿ ಕುಮಟಾದಲ್ಲಿ ಅಖಿಲ ಭಾರತ ಕೊಂಕಣಿ ಸಾಹಿತ್ಯ ಸಮ್ಮೇಳನವೂ ಜರುಗಿತು. ಖ್ಯಾತ ಕೊಂಕಣಿ ಸಾಹಿತಿ ಶ್ರೀ ಮಹಾಬಲೇಶ್ವರ ಸೈಲ ಅವರು ಅಧ್ಯಕ್ಷರಾಗಿದ್ದರು. ಕುಮಟಾದ ಹಿರಿಯ ಕೊಂಕಣಿ ಪುಢಾರಿ ಶ್ರೀ ನಾಗೇಶ ಶಾನುಭಾಗ, ಶ್ರೀ ಅರುಣ ಉಭಯಕರ ಹಾಗೂ ತರುಣರಾದ ಶ್ರೀ ಮುರಳೀಧರ ಪ್ರಭು, ಡಾ. ಶಿವರಾಮ ಕಾಮತ, ಶ್ರೀಮತಿ ಉಷಾ ರಾಣೆ ಮುಂತಾದವರ ನೇತೃತ್ವದಲ್ಲಿ ಸಮ್ಮೇಳನ ಯಶಸ್ವಿಯಾಗಿ ಜರುಗಿತು. ಖ್ಯಾತ ಕನ್ನಡ ಸಾಹಿತಿ ಡಾ. ಚಂದ್ರಶೇಖರ ಕಂಬಾರರವರು ಉದ್ಘಾಟಕರಾಗಿ ಬಂದಿದ್ದರು. ರಾಜ್ಯ ಸರಕಾರದಲ್ಲಿ ಮಂತ್ರಿವರ್ಯರಾಗಿದ್ದ ಶ್ರೀ ಆರ್.ವ್ಹಿ. ದೇಶಪಾಂಡೆ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಬಳಿಕ 2006ರಲ್ಲಿ ಗೋವೆ ರಾಜಧಾನಿ ಪಣಜಿಯಲ್ಲಿ ಅಖಿಲ ಭಾರತ ಕೊಂಕಣಿ ಪರಿಷದ ರೌಪ್ಯಮಹೋತ್ಸವ ಅಧಿವೇಶನ ಜರುಗಿತು.

2006ರಲ್ಲಿ ನನ್ನ ವಿಶ್ವ ಕೊಂಕಣಿ ದರ್ಶನ (World Konkani Vision)ಪ್ರಕಟವಾಗಿ ಅದನ್ನು ಅಮೇರಿಕಾದಲ್ಲಿ ಜರುಗಿದ ಉತ್ತರ ಅಮೇರಿಕಾ ಕೊಂಕಣಿ ಅಧಿವೇಶನ (North American Konkani Convention) ಸಂದರ್ಭದಲ್ಲಿ ಬಿಡುಗಡೆ ಮಾಡಲಾಯಿತು.

ಪ್ರಥಮ ವಿಶ್ವ ಕೊಂಕಣಿ ಸಮ್ಮೇಳನ

ಅಂತೆಯೇ 1994 ಜನವರಿ ತಿಂಗಳಲ್ಲಿ ಮಂಗಳೂರು ತಾಜಮಹಲ ಹೋಟೆಲಿನ ಸಭಾಗೃಹದಲ್ಲಿ ಕೊಂಕಣಿ ಭಾಷೆಗಾಗಿ ದುಡಿದ ಲೇಖಕರು, ಸಾಧಕರನ್ನು ಸನ್ಮಾನಿಸುವ

ಕಾರ್ಯಕ್ರಮವಿತ್ತು. ಪ್ರಖ್ಯಾತ ಕೊಂಕಣಿ ಮಹಿಳೆ ಹಾಗೂ ಕೇಂದ್ರ ಸರಕಾರದಲ್ಲಿ ಮಂತ್ರಿಗಳಾಗಿದ್ದ ಶ್ರೀಮತಿ ಮಾರ್ಗರೇಟ ಆಳ್ವ, ಹಿರಿಯರಾದ ಕೆ.ಕೆ. ಪೈಯವರೂ ವೇದಿಕೆಯಲ್ಲಿದ್ದರು. ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಪ್ರಾಂಶುಪಾಲ, ಉತ್ತಮ ವಾಗ್ಮಿ ಡಾ. ಬಿ.ಎಂ. ಹೆಗ್ಡೆಯವರು ಅಧ್ಯಕ್ಷತೆ ವಹಿಸಿದ್ದರು. ಡಾ. ಹೆಗ್ಡೆಯವರ ಮನೆಮಾತು ತುಳು ಆಗಿದ್ದರೂ ಅವರ ಸಂಪರ್ಕ ವಲಯದ ಪ್ರಭಾವದಿಂದಾಗಿ ಒಳ್ಳೆಯ ಕೊಂಕಣಿ ಮಾತುಗಾರರೂ ಆಗಿದ್ದರು. ಡಾ. ಹೆಗ್ಡೆಯವರು ತಮ್ಮ ಭಾಷಣದಲ್ಲಿ 'ನಾನು ಜಗತ್ತಿನಲ್ಲೆಲ್ಲಾ ತಿರುಗಿದ್ದೇನೆ. ಯಾವ ದೇಶಕ್ಕೆ ಹೋದರೂ ಅಲ್ಲಿ ಕೊಂಕಣಿ ಜನರನ್ನು ಕಾಣುತ್ತಲಿದ್ದೇನೆ. ವಿಶ್ವ ಸಮ್ಮೇಳನ ಮಾಡುವ ಸಾಧ್ಯತೆಯಿದ್ದರೆ ಅದರ ಮೊದಲ ಯೋಗ್ಯತೆ ಕೊಂಕಣಿಗಳಿಗೆ ಇದೆ'' ಎಂದು ಉದ್ಗಾರ ತೆಗೆದರು. ಅಲ್ಲಿಯೇ ಇದ್ದ ನನಗೆ ಏನೋ ಒಂದು ಆವೇಶ ಬಂದಂತಾಯ್ತು. ಅಲ್ಲಿಯೇ ವೇದಿಕೆಯಲ್ಲಿದ್ದ ಹಿರಿಯರಾದ ಶ್ರೀ. ಕೆ.ಕೆ. ಪೈಯವರ ಕಿವಿಯಲ್ಲಿ ನನ್ನ ಅನಿಸಿಕೆ ತಿಳಿಸಿದೆ. 'ನೋಡೊ! ನಿನಗೆ ಸಾಧ್ಯವೆಂದೆನಿಸಿದರೆ ಎಲ್ಲರೆದುರು ಘೋಷಿಸಿ ಬಿಡು' ಎಂದರು. ಅವರ ಆಶೀರ್ವಾದದ ಅಭಯ ಸಿಕ್ಕಿದ್ದರಿಂದ, ಡಾ. ಹೆಗ್ಗಡೆಯವರ ಭಾಷಣದ ಬಳಿಕ 'ನಾನು ವೇದಿಕೆಯಿಂದ ಎದ್ದು, 'ನಾವು ಮಂಗಳೂರಿನಲ್ಲಿ ವಿಶ್ವ ಕೊಂಕಣಿ ಸಮ್ಮೇಳನ ನಡೆಸುತ್ತೇವೆ' ಎಂದು ಘೋಷಿಸಿದೆ. ಡಾ. ಹೆಗ್ಗಡೆಯವರು ಅದು ಯಾವ ಹೊತ್ತಿನಲ್ಲಿ ಶಕುನ ನುಡಿದರೋ ಗೊತ್ತಿಲ್ಲ. 1995 ದಶಂಬರ 16 ರಿಂದ 22ರ ತನಕ 7 ದಿನಗಳ ಕಾಲ ಪ್ರಥಮ ವಿಶ್ವ ಕೊಂಕಣಿ ಸಮ್ಮೇಳನ ಅಭೂತಪೂರ್ವಕವಾಗಿ ಅದ್ಭುತವಾಗಿ ಎಲ್ಲರ ನಿರೀಕ್ಷೆಗೆ ಮೀರಿ ಜರುಗಿತು.

ಕೊಂಕಣಿ ಭಾಷಾ ಮಂಡಳದ ಅಧ್ಯಕ್ಷನ ನೆಲೆಯಲ್ಲಿ ನಾನು ಮುಖ್ಯ ಸಂಚಾಲಕನಾಗಿ ಸಂಘಟನಾ ಕಾರ್ಯದಲ್ಲಿ ಮುಂದಾಳಾಗಿ ಭಾಗವಹಿಸುವ ಅವಕಾಶ ಅದು ನನ್ನ ಭಾಗ್ಯವೂ ಹೌದು - ನನ್ನ ಪಾಲಿಗೆ ಬಂತು. ಸಂಘಟನಾ ಸಮಿತಿಯ ಗೌರವ ಚೆಯರ್ ಪರ್ಸನ್ (chairperson) ಆಗಿನ ಕೇಂದ್ರಮಂತ್ರಿ ಶ್ರೀಮತಿ ಮಾರ್ಗರೇಟ್ ಆಳ್ವಾ ಹಾಗೂ ಅಧ್ಯಕ್ಷರಾಗಿ ಶ್ರೀ. ಕೆ.ಕೆ. ಪೈಗಳವರಿದ್ದರು ಹಾಗೂ ವಿವಿಧ ಕ್ಷೇತ್ರಗಳಲ್ಲಿ ಮುಂದಾಳುತ್ವ ವಹಿಸಿ ಅನುಭವ ಗಳಿಸಿದ 8-10 ಕೊಂಕಣಿ ಸಂಘಟಕರು ವಿವಿಧ ಕಾರ್ಯಗಳಿಗಾಗಿ ಸಂಚಾಲಕರಾಗಿ ನಿಯುಕ್ತರಾಗಿದ್ದ ಒಂದು ಸಂಘಟನಾ ಸಮಿತಿ (Core Committee) ನೇಮಕವಾಗಿತ್ತು.

ದೇಶದಾದ್ಯಂತ 75 ಪ್ರಾದೇಶಿಕ ಸಮಿತಿಗಳನ್ನು (Regional committee) ಕೊಂಕಣಿ ಭಾಷಿಕರು ಹೆಚ್ಚಿನ ಸಂಖ್ಯೆಯಲ್ಲಿದ್ದ ಶಹರುಗಳಲ್ಲಿ, ಊರುಗಳಲ್ಲಿ ಸಂಘಟಿಸಲಾಗಿತ್ತು. ಈ ಪ್ರಾದೇಶಿಕ ಸಮಿತಿಗಳು ತಮ್ಮ ಊರು, ಸಮುದಾಯಗಳಲ್ಲಿ ವಿಶ್ವ ಕೊಂಕಣಿ ಸಮ್ಮೇಳನದ ಬಗ್ಗೆ ತಿಳುವಳಿಕೆ ನೀಡಿ, ಪ್ರತಿನಿಧಿಗಳನ್ನು (Delegates) ನೋಂದಾವಣೆ ಮಾಡುವುದು, ಪತ್ರಿಕೆಗಳಲ್ಲಿ ಪ್ರಚಾರ, ಧನಸಂಗ್ರಹ, ಸ್ಮರಣಿಕೆಗೆ ಜಾಹೀರಾತು ಸಂಗ್ರಹ ಮಾಡುವುದು ಮುಂತಾದ ಕಾರ್ಯಗಳನ್ನು ಸಂಘಟಿಸಬೇಕಾಗಿತ್ತು ಮತ್ತು ಈ 75 ಪ್ರಾದೇಶಿಕ ಸಮಿತಿಗಳು (8 ವಿದೇಶಗಳಲ್ಲಿ) ಮತ್ತು ಮುಖಂಡರು ಶ್ರಮಿಸಿ ಉತ್ತಮ ಕಾರ್ಯ ನಿರ್ವಹಿಸಿದ್ದರಿಂದ ಪ್ರಥಮ

ವಿಶ್ವ ಕೊಂಕಣಿ ಸಮ್ಮೇಳನಕ್ಕೆ ದೇಶದಾದ್ಯಂತದಿಂದ 5000 ಪ್ರತಿನಿಧಿಗಳಲ್ಲದೇ ಸುಮಾರು ೪೫ ಮಂದಿ ಗಲ್ಫ್ ದೇಶಗಳಿಂದ ಉತ್ತರ ಅಮೇರಿಕಾ, ಆಸ್ಟ್ರೇಲಿಯಾಗಳಿಂದ ಪ್ರತಿನಿಧಿಗಳಾಗಿ ಬಂದು ಭಾಗವಹಿಸಿದರು.

ಆ ಕಾಲದಲ್ಲಿ ಕರ್ನಾಟಕ ಸರಕಾರದಲ್ಲಿ ಮಂತ್ರಿಗಳಾಗಿದ್ದ ಶ್ರೀ. ಆರ್. ವಿ. ದೇಶಪಾಂಡೆಯವರು ಸಮ್ಮೇಳನಕ್ಕ ರೂ. 7 ಲಕ್ಷ ದೇಣಿಗೆಯಾಗಿ ಕೊಡಿಸಿದರಷ್ಟೇ ಅಲ್ಲ, ಆಗ ಮುಖ್ಯಮಂತ್ರಿಗಳಾಗಿದ್ದ ಶ್ರೀ. ಹೆಚ್ ಡಿ. ದೇವೇಗೌಡರನ್ನು ಉದ್ಘಾಟನಗೆ ಕರೆದುಕೊಂಡು ಬಂದರು. ಕೇಂದ್ರ ಸರಕಾರದ ಮಂತ್ರಿಗಳಾಗಿದ್ದ ಕೊಂಕಣಿ ಮುಂದಾಳು ಮಾನ್ಯ ಶ್ರೀಮತಿ ಮಾರ್ಗರೇಟ್ ಆಳ್ವಾರವರು ಅಧ್ಯಕ್ಷ ಸ್ಥಾನವಹಿಸಿದ್ದರು. ಕೇಂದ್ರ ಸರಕಾರದಲ್ಲಿ ರೈಲ್ವೆ ಮಂತ್ರಿಗಳಾಗಿದ್ದ ಶ್ರೀ ಸುರೇಶ ಕಲ್ಮಾಡಿ, ರಾಜ್ಯ ಮಂತ್ರಿ ಶ್ರೀ ಕೆ. ಜಯಪ್ರಕಾಶ ಹೆಗ್ಡೆ, ಮಂಗಳೂರು ಶಾಸಕ ಶ್ರೀ ಎನ್. ಯೋಗೀಶ ಭಟ್ಟ, ಶ್ರೀ ಕೆ.ಕೆ. ಪೈಯವರು ವೇದಿಕೆಯಲ್ಲಿದ್ದು ಉದ್ಘಾಟನಾ ಸಮಾರಂಭ ಅತ್ಯಪೂರ್ವವಾಗಿ ಮಂಗಳಾ ಕ್ರೀಡಾಂಗಣದಲ್ಲಿ ಜರುಗಿತ್ತು. ಮರುದಿನ ಡಾ. ಶಿವರಾಮ ಕಾರಂತರು ಪರಿಸಂವಾದ (ಗೋಷ್ಠಿ)ಗಳನ್ನು ಉದ್ಘಾಟಿಸಲು ಬಂದಿದ್ದರು. ಲೋಕಸಭಾ ಸದಸ್ಯ ಮಾನ್ಯ ಶ್ರೀ ಸುರೇಶ ಪಿ. ಪ್ರಭುಗಳವರೂ ಬಂದಿದ್ದರು. ಸಮಾರೋಪ ಸಮಾರಂಭ ಕೆಥೋಲಿಕ್ ಧಾರ್ಮಿಕ ಪ್ರಾಂತದ ಧರ್ಮಾಧ್ಯಕ್ಷರಾಗಿದ್ದ ಮತ್ತು ಕೊಂಕಣಿ ಭಾಷೆಯ ಪ್ರಬಲ ಪ್ರತಿಪಾದಕರಾಗಿದ್ದ ಅತೀ ವಂದನೀಯ ಡಾ. ಬೆಸಿಲ್ ಡಿ' ಸೋಜರವರು ಪ್ರಥಮ ವಿಶ್ವ ಕೊಂಕಣಿ ಸಮ್ಮೇಳನಕ್ಕೆ ಬೀಜಮಂತ್ರ ಹಾಕಿದ ಡಾ. ಬಿ.ಎಂ. ಹೆಗ್ಡೆ ಮತ್ತು ಕೇಂದ್ರ ಮಂತ್ರಿ ಆಸ್ಕರ್ ಫೆರ್ನಾಂಡಿಸರವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಅಲ್ಲದೇ ನನಗೆ ತಿಳಿಸದೇ ಸಮಿತಿಯವರು ನನಗೆ 'ವಿಶ್ವ ಕೊಂಕಣಿ ಸರದಾರ' ಬಿರುದನ್ನು ಇತ್ತು ಸನ್ಮಾನಿಸಿದ್ದರು. ದೇಶ ವಿದೇಶಗಳಿಂದ ಬಂದ ಪ್ರತಿನಿಧಿಗಳು ಎದ್ದು ನಿಂತು ಗೌರವ ಸೂಚಿಸಿದರು.

ಸಮಾರೋಪ ಸಮಾರಂಭದಲ್ಲಿ ನಾನು 'ವಿಶ್ವ ಕೊಂಕಣಿ ಕೇಂದ್ರ' ಯೋಜನೆಯನ್ನು ವಿವರಿಸಿದಾಗ ನನ್ನ ಗೊತ್ತುವಳಿ ಸರ್ವಾನುಮತಿಯಿಂದ ಪಾಸು ಮಾಡಲಾಗಿತ್ತು. ಅಂದಿನ ನನ್ನ ಕನಸು ಇಂದು ನನಸಗಿರುವುದು ನನಗೆ ಬಂದ ಅತೀ ದೊಡ್ಡ ಗೌರವವೆಂದು ಭಾವಿಸಿದ್ದೇನೆ. ನನ್ನ ಸಾಧನೆಗೆ 'ಕೊಂಕಣಿ ಭೀಷ್ಮ' ಶ್ರೀ ಕೆ.ಕೆ. ಪೈಯವರ ತುಂಬು ಹೃದಯದ ಆಶೀರ್ವಾದ ನನಗೆ ಯಾವಾಗಲು ಶ್ರೀ ರಕ್ಷೆಯಾಗಿದೆ. ಅಲ್ಲದೇ ಕೊಂಕಣಿ ಮಹಾದಾನಿಗಳಾದ ಶ್ರೀ ಪಿ. ದಯಾನಂದ ಪೈ ಮತ್ತು ಶ್ರೀ ರೋನಾಲ್ಡ ಕೊಲಾಸೊರವರು ಕೊಂಕಣಿ ಜಾಥಾ ಚಳುವಳಿಯ ದಿನಗಳಿಂದ ಇಂದಿನವರೆಗೆ ಕೊಟ್ಟ 'ಉದಾರ ಹಸ್ತ' ಈ ಸಾಧನೆ ಮಾಡಲು ನನ್ನನ್ನು ಯಾವಾಗಲೂ ಪ್ರಚೋದಿಸುತ್ತದೆ ಎಂದು ಹೇಳ ಬಯಸುತ್ತೇನೆ.

ವಿಶ್ವ ಕೊಂಕಣಿ ಸಮ್ಮೇಳನದ ಹಿಂದೆಯೇ ನಾನು ಕೊಂಕಣಿ ಭಾಷಾ ಮಂಡಳದ ಸಾಮಾನ್ಯ ಸದಸ್ಯರ ಸಭೆ ಕರೆದು 'ಕೊಂಕಣಿ ಭಾಸ ಆನಿ ಸಂಸ್ಕೃತಿ ಪ್ರತಿಷ್ಠಾನ' (Konkani

Language and Cultural Foundation) ಸಂಸ್ಥೆಯನ್ನು ಹುಟ್ಟು ಹಾಕಿದೆ ಮತ್ತು ವಿಶ್ವ ಕೊಂಕಣಿ ಕೇಂದ್ರ ಕಟ್ಟಲು ಬೇಕಾದ ಸ್ಥಳ, ಧನ ಸಂಗ್ರಹ ಮುಂತಾದ ಕಾರ್ಯಗಳಿಗೆ ಯೋಜನೆ ಹಾಕಿದೆ.

ವಿಶ್ವ ಕೊಂಕಣಿ ಸಮ್ಮೇಳನದ ಯಶಸ್ಸಿನಿಂದಾಗಿ ಉತ್ತೇಜಿತರಾದ ಉತ್ತರ ಅಮೇರಿಕಾದ ಕೊಂಕಣಿಗಳು ನ್ಯೂ ಜರ್ಸಿಯಲ್ಲಿ ಪ್ರಥಮ ಉತ್ತರ ಅಮೇರಿಕಾದ ಕೊಂಕಣಿ ಸಮ್ಮೇಳನ ಕೈಗೊಳ್ಳಲು ಮುಂದಾದರು. ಮಂಗಳೂರಿನಲ್ಲಿ ಜರುಗುವ ವಿಶ್ವ ಕೊಂಕಣಿ ಸಮ್ಮೇಳನದ ವಿಷಯವಾಗಿ ತನ್ನ 'ಖಬರ' ತ್ರೈಮಾಸಿಕದಲ್ಲಿ ವಿಸ್ತಾರವಾಗಿ ಪ್ರಚಾರ ಕೊಡುತ್ತಲಿದ್ದ ಸಂಪಾದಕ ಶ್ರೀ ವಸಂತ ಭಟ್ಟರವರು "ದ ರೂವಾರಿಯಾಗಿದ್ದರು ಮತ್ತು ನಾನು ಸಮ್ಮೇಳನವನ್ನು ಉದ್ಘಾಟಿಸಬೇಕೆಂದು ಆಹ್ವಾನಿಸಿದರು. ನಾನು ಮತ್ತು ನನ್ನ ಸಹೋದ್ಯೋಗಿಗಳಾಗಿದ್ದ ಕುಡ್ಪಿ ಜಗದೀಶ ಶೆಣೈ ಮತ್ತು ಶ್ರೀ ಎರಿಕ್ ಒಝೇರಿಯೋ ವೇದಿಕೆಯಲ್ಲಿ ಹಾಜರಿದ್ದೆವು.

ಮಂಗಳೂರಿನಲ್ಲಿದ್ದಾಗ 3 ಪತ್ರಿಕೆಗಳನ್ನು ನಡೆಸುತ್ತಾ ಬಳಿಕ ಅಮೇರಿಕಾ ಸೇರಿ ಅಲ್ಲಿ ಲಾಯನ್ಸ್ ಜಿಲ್ಲಾ ಗವರ್ನರ್ ಆಗಿದ್ದ ಲಾ. ಆಸ್ಟಿನ್ ಡಿ' ಸೋಜಾ ಪ್ರಭು ಅವರು ಕಲಾ ಸಂಪದ ಲಾಯನ್ಸ್ ಕ್ಲಬ್‌ಗೆ ನಮ್ಮನ್ನು ಆಹ್ವಾನಿಸಿ ಗೌರವಿಸಿದ್ದರು ಅದರ ಬಳಿಕ ಒಂದು ತಿಂಗಳ ಪ್ರವಾಸ ಕಾಲದಲ್ಲಿ ಸುಮಾರು 10 ರಾಜ್ಯಗಳಿಗೆ ನಾವು ಭೇಟಿಯನ್ನಿತ್ತೆವು ಮತ್ತು ಕೊಂಕಣಿ ಭಾಷೆ, ಸಾಹಿತ್ಯ ಸಂಸ್ಕೃತಿ ಕಲೆಗಳು ಹಾಗೂ ಕೊಂಕಣಿ ಲೋಕವೇದಗಳ ಬಗ್ಗೆ ನಾವು ಹೋದ ಕಡೆಗಳಲ್ಲಿ ಬಂದು ಸೇರುತ್ತಲಿದ್ದ ಕೊಂಕಣಿ ಕುಟುಂಬಗಳಿಗೆ ಮಾಹಿತಿಯನ್ನಿತ್ತು ವಿಶ್ವ ಕೊಂಕಣಿ ಕೇಂದ್ರ ಯೋಜನೆಯ ಬಗ್ಗೆಯೂ ತಿಳುವಳಿಕೆ ನೀಡಿದೆವು.

ಅಲ್ಲಿಂದ ಇಂಗ್ಲೆಂಡಿಗೆ ಹೋಗಿ ಲಂಡನ್ನಿನಲ್ಲಿ ಕೂಡಾ ಕೊಂಕಣಿ ಭಾಷೆಯನ್ನಾಡುವ ಕೊಂಕಣಿಗಳ ಸಭೆ ಸಮಾರಂಭಗಳಲ್ಲಿ ಭಾಗಿಯಾಗಿದ್ದೆವು. ಅಲ್ಲಿಯ ಕೊಂಕಣಿಗಳು ನಮಗೆ ಬಕ್ಕಿಂಗಹಾಮ ಪೇಲೇಸ್, ಮೆಡಮ ತುಸ್ಸಾಡ್ಸ (ಮಯಣ ಪ್ರತಿಮೆಗಳ) ಮ್ಯುಸಿಯಂ, 10 ಡೌನಿಂಗ್ ಸ್ಟ್ರೀಟನಲ್ಲಿರುವ ಬ್ರಿಟನ್ ಮುಖ್ಯಮಂತ್ರಿಗಳ ನಿವಾಸ ಹಾಗೂ ಹಲವಾರು ಚಾರಿತ್ರಿಕ ಕಟ್ಟಡ, ಪ್ರದೇಶಗಳಿಗೆ ಭೇಟಿ ಕೊಡುವ ವ್ಯವಸ್ಥೆ ಮಾಡಿದ್ದರು. ಅಲ್ಲಿ ಹಿಂದೆ ಚರ್ಚ್ ಆಗಿದ್ದ ಪ್ರಾರ್ಥನಾ ಮಂದಿರದಲ್ಲಿ ಈಗ ಭಾರತೀಯ ವಿದ್ಯಾ ಭವನವಿದೆ. ಅಲ್ಲಿಗೂ ಹೋಗಿ ಬಂದಿದ್ದೆವು. ಬಳಿಕ ನೇರವಾಗಿ ಭಾರತಕ್ಕೆ ಹಿಂತಿರುಗಿದೆವು.

ಮುಂದೆ 2004ರಲ್ಲಿ ನಾನು ಅಖಿಲ ಭಾರತ ಕೊಂಕಣಿ ಪರಿಷದ ಅಧ್ಯಕ್ಷನಾದ ಮೇಲೆ ಮತ್ತೊಮ್ಮೆ ನನ್ನನ್ನು 5ನೇ 'ನಾಕಾ' Naka ಸಮ್ಮೇಳನಕ್ಕೆ ಭಾಷಣಕ್ಕಾಗಿ ಆಹ್ವಾನಿಸಿದ್ದರು. ಹಾಗೆಯೇ ನಾನು ಅಮೇರಿಕಾಕ್ಕೆ ಶ್ರೀ ಕುಡ್ಪಿ ಜಗದೀಶ ಶೆಣೈ ಮತ್ತು ಶ್ರೀ ಎಂ. ರಘುನಾಥ ಶೇಟ್‌ರವರೊಟ್ಟಿಗೆ ತೆರಳಿ 'ನಾಕಾ' ಅಧಿವೇಶನದಲ್ಲಿ ಭಾಷಣ ಮಾಡಿ ಬಳಿಕ ಸುಮಾರು 10 ರಾಜ್ಯಗಳಿಗೂ ಅಲ್ಲದೇ ವಿಶೇಷವಾಗಿ ಕೆನಡಾ ದೇಶಕ್ಕೂ ತೆರಳಿ ಅಲ್ಲಿ ಕೊಂಕಣಿಗಳನ್ನು ಉದ್ದೇಶಿಸಿ ಭಾಷಣ ಮಾಡಿದ್ದೆ ಮತ್ತು ನಾವು ಕಟ್ಟಲಿರುವ 'ವಿಶ್ವ ಕೊಂಕಣಿ ಕೇಂದ್ರ'ದ

ವಿಚಾರವಾಗಿಯೂ ಭಾಷಣ ಮಾಡಿ ಬಂದೆವು. ಅಂತೂ ನಮ್ಮ ಯೋಜನೆಗಳಿಗೆ ತುಂಬಾ ಯಶಸ್ಸು ಸಿಕ್ಕಿತು ಅಲ್ಲದೇ ಆರ್ಥಿಕ ನೆರವು ಕೂಡಾ ಬಂತು.

ಪ್ರಥಮ ವಿಶ್ವ ಸಾರಸ್ವತ ಸಮ್ಮೇಳನ

ಅಖಿಲ ಭಾರತ ಸಾರಸ್ವತ ಸಾಂಸ್ಕೃತಿಕ ಸಂಘ (All India Saraswat Cultural Organisation) ಸುಮಾರು 1970ರ ದಶಕದಲ್ಲಿ ಮುಂಬಯಿಯಲ್ಲಿ ಸಾರಸ್ವತ ಧರ್ಮಪೀಠಾಧೀಶರುಗಳ ಆಶೀರ್ವಾದ ಪಡೆದು ಪ್ರಾರಂಭಿಸಲ್ಪಟ್ಟಿತ್ತು. ಖ್ಯಾತ ಸುಪ್ರೀಂ ಕೋರ್ಟ್ ವಕೀಲರೂ, ಇನಕಮ್ ಟ್ಯಾಕ್ಸ್ ತಜ್ಞರೂ ಆಗಿರುವ ಶ್ರೀ ಎಸ್.ವಿ. ಪಿಕಳೆ ಸಂಸ್ಥೆಯ ರೂವಾರಿಗಳು. ಹಿಂದೆ 1970ರ ದಶಕಗಳಲ್ಲಿ ಅಖಿಲ ಭಾರತ ಮಟ್ಟದ ಅಧಿವೇಶನಗಳನ್ನು ಮುಂಬಯಿ, ದಿಲ್ಲಿ ಸಮಾಜದ ಗುರುಗಳ ಉಪಸ್ಥಿತಿಯಲ್ಲಿ ಸಂಘಟಿಸಲಾಗಿತ್ತು. ಬಳಿಕ ಹಲವು ವರ್ಷ ಸಂಘದ ಕಾರ್ಯ ಚಟುವಟಿಕೆಗಳು ಮುಂಬಯಿಯಲ್ಲಿಯೇ ಜರುಗುತ್ತಿದ್ದವು.

1992ನೇ ಇಸವಿಯಲ್ಲಿ ಸಂಘದ ವತಿಯಿಂದ 'ವಿಶ್ವ ಸಾರಸ್ವತ ಸಮ್ಮೇಳನ' ಮುಂಬಯಿಯಲ್ಲಿ ಜರುಗಿಸುವದೆಂದು ಜಾಹೀರು ಪಡಿಸಲಾಗಿತ್ತು. ಆದರೆ ಕಾರಣಾಂತರಗಳಿಂದ ಅಧಿವೇಶನವನ್ನು ಮುಂದೂಡಿ 1993ರಲ್ಲಿ ಜರುಗಿಸುವುದೆಂದು ನಿರ್ಧರಿಸಲಾಗಿತ್ತು. ಅದಕ್ಕೂ ಕಾಲ ಕೂಡಿ ಬರಲಿಲ್ಲವೆಂದು ಕಾಣುತ್ತದೆ.

1995ರಲ್ಲಿ ನಾವು ಮಂಗಳೂರಲ್ಲಿ ಪ್ರಥಮ ವಿಶ್ವ ಕೊಂಕಣಿ ಸಮ್ಮೇಳನವನ್ನು ಸಂಘಟಿಸಿದಾಗ, ನನ್ನ ಸಂಘಟನಾ ಸಾಮರ್ಥ್ಯವನ್ನು ಹತ್ತಿರದಿಂದ ನೋಡಿದ ಶ್ರೀ ಎಸ್.ವಿ. ಪಿಕಳೆಯವರು (ಅವರು ಸಮ್ಮೇಳನದ 7 ದಿನಗಳಲ್ಲಿಯೂ ಮಂಗಳೂರಿನಲ್ಲಿದ್ದು ಹಾಜರಾಗಿದ್ದರು) 1997ರಲ್ಲಿ ನನಗೆ ಮುಂಬಯಿಗೆ ಕರೆಯಿಸಿ, ಅವರು ಯೋಚಿಸಿದ ವಿಶ್ವ ಸಾರಸ್ವತ ಸಮ್ಮೇಳನವನ್ನು ಮುಂಬಯಿಯಲ್ಲಿ ನಡೆಸಲಾಗದ್ದಕ್ಕೆ ವಿಷಾದ ವ್ಯಕ್ತಪಡಿಸಿದರು ಮತ್ತು ಸಮ್ಮೇಳವನ್ನು ಮಂಗಳೂರಿನಲ್ಲಿ ಜರುಗಿಸುವಂತೆ ಮತ್ತು ನಾನು ಮುಖ್ಯ ಸಂಚಾಲಕನಾಗಿ ಕಾರ್ಯನಿರ್ವಹಿಸಿ, ಯಶಸ್ವಿಯಾಗುವಂತೆ ಮಾಡಬೇಕೆಂದು ಕೇಳಿಕೊಂಡರು. ನಾನು ಮಂಗಳೂರಿಗೆ ಹಿಂತಿರುಗಿ ಬಂದು ಮಣಿಪಾಲದಲ್ಲಿ ಶ್ರೀ ಕೆ. ಕೆ. ಪೈ.ಯವರಿಗೆ ಶ್ರೀ ಪಿಕಳೆಯವ ಆಹ್ವಾನದ ಬಗ್ಗೆ ತಿಳಿಸಿದೆ. ಅವರು ತಮ್ಮ ಸಮ್ಮತಿಯನ್ನು ಸೂಚಿಸಿದ ಬಳಿಕ ಶ್ರೀ ಪಿ. ರವೀಂದ್ರ ನಾಯಕ ಉಡುಪಿ, ಕಸ್ತೂರಿ ಮಂಗೇಶ ಪೈ, ಶ್ರೀ ಪಿ. ದಯಾನಂದ ಪೈ, ಕುದ್ವ ಜಗದೀಶ ಶೆಣೈ ಮುಂತಾದವರನ್ನು ಸಂಪರ್ಕಿಸಿದ ಬಳಿಕ ಮಂಗಳೂರಿನಲ್ಲಿ ಒಂದು ಸಭೆಯನ್ನು ಕರೆದು ವಿಷಯ ಪ್ರಸ್ತಾವನೆ ಮಾಡಿದೆ. ಸಭೆಯಲ್ಲಿ ನೆರೆದವರೆಲ್ಲರೂ ವಿಶ್ವ ಸಾರಸ್ವತ ಸಮ್ಮೇಳನವನ್ನು ಮಂಗಳೂರಿನಲ್ಲಿ ಜರುಗಿಸಲು ಸಮ್ಮತಿ ಸೂಚಿಸಿ ಪ್ರಥಮ ವಿಶ್ವ ಕೊಂಕಣಿ ಸಮ್ಮೇಳನದಂತೆಯೇ ವಿಶ್ವ ಸಾರಸ್ವತ ಸಮ್ಮೇಳನವನ್ನು ವಿಜೃಂಭಣೆಯಿಂದ ಮತ್ತು ಅರ್ಥಪೂರ್ಣವಾಗಿ ಯಶಸ್ವಿಯಾಗಿ ಜರುಗಿಸಬೇಕೆಂದು ನಿರ್ಧರಿಸಿದೆವು. ಅದರ ಬಳಿಕ ನಾನು ಮುಂಬಯಿಗೆ ತೆರಳಿ ಅಖಿಲ ಭಾರತ ಸಾರಸ್ವತ ಸಾಂಸ್ಕೃತಿಕ ಸಂಘದ ಸಭೆಯುಲ್ಲಿ

ಸಮ್ಮೇಳನ ಸಂಘಟನೆಯ ಕಾರ್ಯಸೂಚಿಯನ್ನು ವಿವರಿಸಿದೆ, ಅದಕ್ಕೆ ಅವರೆಲ್ಲರೂ ಒಪ್ಪಿದರು.

ಬಳಿಕ ಹಿರಿಯರಾದ ಶ್ರೀ ಕೆ.ಕೆ. ಪೈಯವರು ಗೌರವ ಅಧ್ಯಕ್ಷರಾಗಿ ಶ್ರೀ ಎಸ್.ವಿ. ಪಿಕಳೆಯವರು ಅಧ್ಯಕ್ಷರಾಗಿ ಮತ್ತು ನಾನು ಸಮ್ಮೇಳನದ ಮುಖ್ಯ ಸಂಚಾಲಕನಾಗಿ ಹಾಗೂ ಇತರ ಹಲವಾರು ಪ್ರಮುಖರಿಂದ ಒಡಗೂಡಿದ ಒಂದು ಕಾರ್ಯಕಾರೀ ಸಮಿತಿ ರಚಿತವಾಯಿತು. ಸಿಂಡಿಕೇಟ್ ಬ್ಯಾಂಕಿನ ಡೆ. ಜನರಲ್ ಮೆನೇಜರ್ ಆಗಿ ನಿವೃತ್ತರಾದ, ಖ್ಯಾತ ಇಂಗ್ಲೀಷ್ ಕನ್ನಡ ಕಾದಂಬರಿಕಾರ ಶ್ರೀ ಕೆ.ಜಿ. ಮಲ್ಯಾರ ಒಡಗೂಡಿ ಉತ್ತರ ಹಿಂದೂಸ್ಥಾನದಲ್ಲಿರುವ ಕಾಶ್ಮೀರೀ ಪಂಡಿತರು, ನವದೆಹಲಿ, ಪಂಜಾಬ್, ಗುಜರಾತ, ಕಛ್, ಮಧ್ಯಪ್ರದೇಶ, ಕೊಲ್ಲಾಪುರ ಮುಂತಾದ ಕಡೆ ಅಧಿಕ ಸಂಖ್ಯೆಯಲ್ಲಿರುವ ಪ್ರದೇಶಗಳಿಗೆ ಭೇಟಿ ಕೊಟ್ಟು ಪ್ರಾದೇಶಿಕ ಸಮಿತಿಗಳನ್ನು ರಚಿಸಿದೆವು. ಹಾಗೆಯೇ ಬಿ. ದಾಮೋದರ ಪ್ರಭು ಮತ್ತು ಕುಡ್ವಿ ಜಗದೀಶ ಶೆಣ್ಯೆಂಯವರು ಕೇರಳ ಮುಂತಾದೆಡೆ ಹೋಗಿ ಪ್ರಾದೇಶಿಕ ಸಮಿತಿಗಳನ್ನು ರಚಿಸಿದ್ದರು.

ಪ್ರಥಮ ವಿಶ್ವ ಸಾರಸ್ವತ ಸಮ್ಮೇಳನದಲ್ಲಿ ಮುಖ್ಯವಾಗಿ ಸಾರಸ್ವತ ಸಮಾಜದ ನಾಲ್ಕು ಪ್ರಮುಖ ಧರ್ಮ ಪೀಠಗಳ ಗುರುಗಳಾದ ಶ್ರೀ ಕಾಶೀಮಠ ಸಂಸ್ಥಾನದ ಶ್ರೀ ಸುದೀಂದ್ರತೀರ್ಥ ಸ್ವಾಮೀಜಿ, ಶ್ರೀ ಗೋಕರ್ಣ ಪರ್ತಗಾಳಿ ಮಠದ ಶ್ರೀ ವಿದ್ಯಾಧಿರಾಜ ತೀರ್ಥ ವಡೇರ ಸ್ವಾಮೀಜಿ, ಶ್ರೀ ಕೈವಲ್ಯ ಮಠದ ಶ್ರೀ ಸಚ್ಚಿದಾನಂದ ಸರಸ್ವತೀ ಸ್ವಾಮೀಜಿ ಮತ್ತು ಶಿಷ್ಯ ಶ್ರೀ ಶಿವಾನಂದ ಸರಸ್ವತೀ ಸ್ವಾಮೀಜಿ ಹಾಗೂ ಶಿರಾಲಿ ಚಿತ್ರಾಪುರ ಮಠದ ಶ್ರೀ ಸದ್ಯೋಜಾತ ಶಂಕರಾಶ್ರಮ ಸ್ವಾಮೀಜಿ ಉಪಸ್ಥಿತರಿದ್ದರು. ದೇಶದಲ್ಲೆಡೆಗಳಿಂದ, ವಿವಿಧ ಭಾಷೆಯನ್ನಾಡುವ ಬೇರೆ ಬೇರೆ ಸಂಪ್ರದಾಯಗಳ ಸಾರಸ್ವತರು ಚಾರಿತ್ರಿಕವಾಗಿ ಪ್ರಥಮ ಬಾರಿಗೆ ಒಂದಾಗಿ 4 ದಿನಗಳ ಕಾಲ ಉಪಯುಕ್ತವಾಗಿ ಕಾಲ ಕಳೆದರು. ಸಮ್ಮೇಳನದ ಕೊನೆಯಲ್ಲಿ ನಾಲ್ಕೂ ಮಠದ ಸ್ವಾಮೀಜಿಯವರ ಸಮ್ಮುಖದಲ್ಲಿ 'ವಿಶ್ವ ಸಾರಸ್ವತ ಸರದಾರ' ಬಿರುದು ಕೊಡಲಾಯಿತು.

ಈ ಒಂದು ವಿಶ್ವ ಸಮ್ಮೇಳನದ ದೆಸೆಯಿಂದ ನನಗೆ ಸಾರಸ್ವತರ ಹಲವಾರು ಪ್ರಮುಖರ, ಸಮಾಜಗಳ ಸಂಪರ್ಕವಾಯಿತು. ಇದು ನನ್ನ ಸಂಘಟನಾ ಶಕ್ತಿಯನ್ನು ಬೆಳಗಿಸಲು ನನಗೆ ಒದಗಿ ಬಂದ ಬಹು ದೊಡ್ಡ ಅವಕಾಶ.

ವಿಶ್ವ ಕೊಂಕಣಿ ಕೇಂದ್ರ - ಒಂದು ದರ್ಶನ

2001ರಲ್ಲಿ ನಾವು ವಿಶ್ವ ಕೊಂಕಣಿ ಕೇಂದ್ರಕ್ಕಾಗಿ ಶಕ್ತಿನಗರದಲ್ಲಿ 3 ಎಕರೆ ಜಮೀನನ್ನು ಖರೀದಿಸಿದ್ದೆವು. ಖರೀದಿ ರಿಜಿಸ್ಟ್ರೇಶನಗಾಗಿ ಸ್ಟೆಂಪ ಖರ್ಚಿನಲ್ಲಿ ಕರ್ನಾಟಕ ಸರಕಾರದಿಂದ 50% ರಿಯಾಯಿತಿ ಸಿಕ್ಕಿತು. ಅಲ್ಲದೇ 3 ಎಕರೆ ಸ್ಥಳವನ್ನು ಭೂ ಕನ್ವರ್ಶನಗಾಗಿ 100% ರಿಯಾಯಿತಿ ಸಿಕ್ಕಿತ್ತು. ಆಗ ಕರ್ನಾಟಕ ರಾಜ್ಯ ಮಂತ್ರಿಮಂಡಳದಲ್ಲಿದ್ದ ಮಾನ್ಯ ಶ್ರೀ ಆರ್. ವ್ಹಿ. ದೇಶಪಾಂಡೆಯವರಿಂದಾಗಿ ಸರಕಾರದಿಂದ ಈ ಸೌಲಭ್ಯಗಳು ಸಿಕ್ಕಿದ್ದವು.

ಆದಾಗಲೇ ಕಾರ್ಪೊರೇಶನ್ ಬ್ಯಾಂಕಿನಿಂದ ರೂ. 20.00 ಲಕ್ಷ ಧನಸಹಾಯ 'ವಿಶ್ವ ಕೊಂಕಣಿ ಮ್ಯೂಸಿಯಂ'ಗಾಗಿ ಮಂಜೂರಾಗಿತ್ತು. ಬಳಿಕ ಕೆನರಾ ಬ್ಯಾಂಕ್ ರೂ. 25.00 ಲಕ್ಷ ಆಡಳಿತ ಕಚೇರಿಗಾಗಿ, ಅಬುದಾಭಿಯ ಶ್ರೀ ಎಸ್.ಎಂ. ರಾವ್ ಸಹೋದರರಿಂದ ವಿಶ್ವ ಕೊಂಕಣಿ ಲ್ಯಾಬ್ರೇರಿಗೆ ರೂ.25.00 ಲಕ್ಷದ ಕೊಡುಗೆಗಳು ಉದಾರವಾಗಿ ಬಂದಿದ್ದವು.

ವಿಶ್ವ ಕೊಂಕಣಿ ಕೇಂದ್ರ, ಉದ್ಘಾಟನೆಯಾದ ಮೇಲೆ ಅಮೇರಿಕಾ ಕೊಂಕಣಿಗಳು ಭಾರತಕ್ಕೆ ಬಂದಾಗ ವಿಶ್ವ ಕೊಂಕಣಿ ಕೇಂದ್ರಕ್ಕೂ ಭೇಟಿ ಕೊಡುತ್ತಾರೆ ಮತ್ತು ಕೊಂಕಣಿ ಪುಸ್ತಕಗಳನ್ನೂ ಸಂಗೀತ ನೃತ್ಯಗಳ ಸಿ.ಡಿ.ಗಳನ್ನು ಖರೀದಿಸುತ್ತಾರೆ.

ಶ್ರೀ ಪಿ. ದಯಾನಂದ ಪೈಯವರು, ಶ್ರೀ ಅರ್.ವ್ಹಿ. ದೇಶಪಾಂಡೆ, ಕೇಂದ್ರ ಮಂತ್ರಿ ಆಸ್ಕರ್ ಫೆರ್ನಾಂಡಿಸ್, ಕೊಂಕಣಿ ಭಾಷಾ ಮಂಡಳದ ಅಧ್ಯಕ್ಷ ಫಾ. ಎರಿಕ್ ಕ್ರಾಸ್ತಾ, ಶ್ರೀ ಬ್ಲೇಸಿಯಸ್ ಎಂ. ಡಿ ಸೋಜ, ಶಾಸಕ ಶ್ರೀ ಎನ್. ಯೋಗೀಶ ಭಟ್ಟ, ಮುಂಬಯಿಯ ಶ್ರೀ ಎನ್.ಎಸ್. ರಾವ್ ಇವರ ಸಮ್ಮುಖದಲ್ಲಿ ವಿಶ್ವ ಕೆಂಕಣಿ ಕೇಂದ್ರಕ್ಕೆ ಶಿಲಾನ್ಯಾಸ ಮಾಡಿದರು. ಶ್ರೀ ಪಿ. ದಯಾನಂದ ಪೈ ಮೊದಲಿಗೆ ರೂ.25.00 ಲಕ್ಷ ದೇಣಿಗೆಯನ್ನು ಘೋಷಿಸಿದರೂ ಬಳಿಕ ಅವರು ಮತ್ತು ಅವರ ತಮ್ಮ ರೂ. 1.00 ಕೋಟಿ (ರೂಪಾಯಿ ಒಂದು ಕೋಟಿ) ಕೊಡಲು ಮುಂದೆ ಬಂದರು ವಿಶ್ವ ಕೊಂಕಣಿ ಕೇಂದ್ರದ ಮುಖ್ಯ ದಾತಾರರಾದರು. ಕೊಂಕಣಿ ಭಾಷೆ, ಸಂಸ್ಕೃತಿಗಳ ಬಗ್ಗೆ ಅಪಾರ ಪ್ರೀತಿ ಬೆಳೆಸಿಕೊಂಡು ಬಂದಿರುವ ಅಲ್ಲದೇ ನನ್ನ ಎಲ್ಲಾ ಕೊಂಕಣಿ ಮತ್ತು ಸಾಮಾಜಿಕ ಕಾರ್ಯಗಳ ಬಗ್ಗೆ ಅಪಾರ ಮೆಚ್ಚುಗೆಯನ್ನು ವ್ಯಕ್ತಗೊಳಿಸುವ ಬೆಂಗಳೂರಿನ ಪ್ರಸಿದ್ಧ ಎನ್.ಆರ್.ಐ. ಶ್ರೀ ರೋನಾಲ್ಡ್ ಕೊಲಾಸೊ ಅವರು ಕೊಂಕಣಿ ಭಾಷಾ ಸಂಸ್ಥಾನ (World Institute of Konkani Language, Research & Studies) ವಿಭಾಗದ ಬಗ್ಗೆ ರೂ. 30.00 ಲಕ್ಷ ಕೊಡಲು ಮುಂದೆ ಬಂದರು. ಅವರು ಯಾವಾಗಲೂ ನನ್ನನ್ನು ಕುಟುಂಬದ ಹಿರಿಯನಂತೆ ಕಾಣುತ್ತಲಿದ್ದಾರೆ.

ಅದಾಗಲೇ ಕಾರ್ಪೊರೇಶನ್ ಬ್ಯಾಂಕಿನಿಂದ ರೂ. 20.00 ಲಕ್ಷ ಧನ ಸಹಾಯ ವಿಶ್ವ ಕೊಂಕಣಿ ಮ್ಯುಸಿಯುಂಗಾಗಿ ಮಂಜೂರಾಗಿತ್ತು. ಬಳಿಡಿಕ ಕೆನರಾ ಬ್ಯಾಂಕ್ ರೂ. 25.00 ಲಕ್ಷ ಆಡಳಿತ ಕಚೇರಿಗಾಗಿ, ಅಬುಧಾಬಿಯ ಶ್ರೀ ಎಸ್.ಎಂ.ರಾವ್ ಸಹೋದರರಿಂದ ವಿಶ್ವ ಕೊಂಕಣಿ ಲೈಬ್ರೇರಿಗೆ ರೂ. 25.00 ಲಕ್ಷದ ಕೊಡುಗೆಗಳು ಉದಾರವಾಗಿ ಬಂದಿದ್ದವು.

ಮೈಸೂರಿನಲ್ಲಿರುವ ಬಂಟವಾಳ ಮೂಲದ ಮಂಗಳೂರು ಗಣೇಶ ಬೀಡಿಯ ಮುಖ್ಯಸ್ಥರೂ, ದಾನಿಗಳೂ ಆಗಿರುವ ಶ್ರೀ ಎಂ. ಜಗನ್ನಾಥ ಶೆಣೈಯವರು, ವಿಶ್ವ ಕೊಂಕಣಿ ಕೇಂದ್ರದ Mini Convention Theatre ಬಗ್ಗೆ ರೂ. 25.00 ಲಕ್ಷ ಕೊಟ್ಟು ಸಹಕರಿಸಲು ಒಪ್ಪಿದರು.

ನನ್ನ ಎಲ್ಲಾ ಕೊಂಕಣಿ ಕಾರ್ಯಗಳಲ್ಲಿ ನನಗೆ ಪ್ರೋತ್ಸಾಹ ಕೊಡುತ್ತಿರುವ ಪುತ್ತೂರು ಸೋಜಾ ಕುಟುಂಬದವರು ವಿಶ್ವ ಕೊಂಕಣಿ ಕೇಂದ್ರದ ಪರಿಸಂವಾದ ಕೊಠಡಿ (Seminar

Hall) ಗಾಗಿ ರೂ. 10.00 ಲಕ್ಷ ಕೊಡಲು ಮುಂದೆ ಬಂದರು.

ಅಲ್ಲದೇ ಐ.ಸಿ.ಐ.ಸಿ.ಐ. ಬ್ಯಾಂಕಿನಿಂದ ಅಧ್ಯಕ್ಷ ಶ್ರೀ ಕೆ.ವಿ. ಕಾಮತ್, ಬ್ಯಾಂಕ್ ಆಫ್ ಮಹಾರಾಷ್ಟ್ರದ ಅಧ್ಯಕ್ಷ ಶ್ರೀ ಎಲೆನ್ ಸಿ.ಎ. ಪಿರೇರಾ, ಡಾ। ಟಿ.ಎಂ.ಎ. ಪೈ ಫೌಂಡೇಶನ್, ಮುಂಬಯಿಯ ಸಾರಸ್ವತ ಸಮಾಜದ ಹಿರಿಯರಾದ ಶ್ರೀ ಎನ್.ಎಸ್.ರಾವ್., ಶ್ರೀ ಜಿ. ವ್ಹಿ. ಮಾಸೂರಕರ್, ದುಬಾಯಿಯ ಶ್ರೀ ರಾಮದಾಸ ಕಿಣಿ, ಮಂಗಳೂರಿನ ಎಸ್.ಎಲ್.ಶೇಟ್ ಜ್ಯುವೆಲ್ಲರ್ಸ್ ಮುಂತಾದ ಮಹನೀಯರು ರೂ. 5.00 ಲಕ್ಷ ಕೊಡಲು ಮುಂದೆ ಬಂದದ್ದರಿಂದ 'ವಿಶ್ವ ಕೊಂಕಣಿ ಕೇಂದ್ರ' ಕಟ್ಟಡ ಕಾರ್ಯ ಮುಂದುವರೆಸಿಕೊಂಡು ಬರಲು ಸುಲಭವಾಯಿತು.

ಧನಸಂಗ್ರಹ ಹಾಗೂ ಇತರ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಕೋಶಾಧ್ಯಕ್ಷ ಶ್ರೀ ಕುಡ್ಪಿ ಜಗದೀಶ ಶೆಣ್ಯೆ, ವೆಂಕಟೇಶ್ ಎನ್.ಬಾಳಿಗಾ, ಪ್ರದೀಪ ಜಿ.ಪೈ, ವಿಲಿಯಂ ಡಿ'ಸೋಜ, ಎಂ. ರಘುನಾಥ ಶೇಟ್, ಅಮೇರಿಕಾದಲ್ಲಿ ಶ್ರೀ ವಸಂತ ಭಟ್ಟ, ಬಸ್ತಿ ಗಣಪತಿ ಶೆಣ್ಯೆ, ಯು.ಎ.ಇ.ಯಲ್ಲಿ ಶ್ರೀ ಗೋಕುಲನಾಥ ಪ್ರಭು, ಉಲ್ಲಾಸ ಡಿ'ಸೋಜ, ಪಯ್ಯನೂರ ರಮೇಶ ಪೈ, ರಾಮದಾಸ ಕಿಣಿ, ಮುಂಬಯಿಯ ಖ್ಯಾತ ಕೊಂಕಣಿ ಕವಿ ಜೆ.ಬಿ. ಸಿಕ್ವೇರಾ ನೆರವಾಗಿದ್ದಾರೆ. ಅವರೆಲ್ಲರ ಸಹಕಾರದಿಂದ ಕಟ್ಟಡ ಕಾರ್ಯಕ್ಕೆ ಧನ ಸಹಾಯದ ಹೊಳೆ ಹರಿದು ಬಂತು. ವಿಶೇಷವಾಗಿ ನಮ್ಮ ಕೊಂಕಣಿ ಪ್ರತಿಷ್ಠಾನದ ಚೆಯರ್‌ಮೆನ್ ಎಮಿರಿಟಸ್ ಸನ್ಮಾನ್ಯ ಶ್ರೀ ಆರ್.ವ್ಹಿ. ದೇಶಪಾಂಡೆಯವರ ಶಿಫಾರಸಿನಿಂದ ಗೋವಾ ಸರಕಾರ ರೂ. 25.00 ಲಕ್ಷ ದೇಣಿಗೆ ಕೊಡಲು ಮುಂದೆ ಬಂತು. ಗೋವಾ ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ದಿಗಂಬರ ಕಾಮತರವರು ವಿಶ್ವ ಕೊಂಕಣಿ ಕೇಂದ್ರದ ಉದ್ಘಾಟಕರಾಗಿ ಬಂದಾಗ ದೇಣಿಗೆಯನ್ನು ಘೋಷಿಸಿದ್ದರು.

ಇನ್ನೊಂದು ಅವಿಸ್ಮರಣೀಯ ಘಟನೆ ಮತ್ತು ರೋಮಾಂಚಕ ಅನುಭವ. ಇದೇ 2009 ಸಪ್ತಂಬರ ತಿಂಗಳಲ್ಲಿ ಮಂಗಳೂರಿನಲ್ಲಿ ದೇಶದ ಸಹಕಾರೀ ಕ್ಷೇತ್ರದ ಅತೀ ದೊಡ್ಡ ಬ್ಯಾಂಕ್ ಸಾರಸ್ವತ ಕೊ - ಅಪರೇಟಿವ್ ಬ್ಯಾಂಕಿನ 4 ಶಾಖೆಗಳು ಪ್ರಥಮವಾಗಿ ಒಂದೇ ದಿನ ಉದ್ಘಾಟನೆಯಾದವು. ಅದರ ಉದ್ಘಾಟನಾ ಸಮಾರಂಭಕ್ಕೆ ಬಂದ ಬ್ಯಾಂಕಿನ ಚೇಯರ್‌ಮ್ಯಾನ್ ಶ್ರೀ ಏಕನಾಥ ಕೆ. ಠಾಕೂರರವರನ್ನು ನಾವು ವಿಶ್ವ ಕೊಂಕಣಿ ಕೇಂದ್ರ ಸಂದರ್ಶನ ನೀಡಬೇಕೆಂದು ವಿನಂತಿಸಿದ್ದೆವು. ಶ್ರೀ ಠಾಕೂರರಲ್ಲದೇ ಬ್ಯಾಂಕಿನ ಮೆನೆಜಿಂಗ್ ಡೈರೆಕ್ಟರ್ ಶ್ರೀ ಪಿ.ಜಿ. ಕಾಮತ್ ಮತ್ತು ಇತರ ಉನ್ನತ ಅಧಿಕಾರಿಗಳೂ ಬಂದಿದ್ದರು. ಅವರನ್ನು ನಾವು ಸ್ವಾಗತಿಸಿದೆವು ಮತ್ತು ವಿಶ್ವ ಕೊಂಕಣಿ ಕೇಂದ್ರವನ್ನು ಅವರು ಕೂಲಂಕುಶವಾಗಿ ನೋಡಿ, ಕೊಂಕಣಿ ಭಾಷೆಯ ಬೆಳವಣಿಗೆಗೆ ನಾವು ಕೈಗೊಂಡ ಯೋಜನೆಗಳು ನಮ್ಮ ದರ್ಶನ ಬಗ್ಗೆ ವಿವರಗಳನ್ನು ತಿಳಿದುಕೊಂಡು ತುಂಬಾ ಮೆಚ್ಚುಗೆ ಸೂಚಿಸಿದರು ಮತ್ತು ವಿಶ್ವ ಕೊಂಕಣಿ ಕೇಂದ್ರಕ್ಕೆ ಸಾರಸ್ವತ ಬ್ಯಾಂಕಿನಿಂದ ರೂ. 20.00 ಲಕ್ಷ ಕೊಡುವೆನಾಗಿ ಸ್ವಪ್ರೇರಣೆಯಿಂದ ಘೋಷಿಸಿದರು ಮಾತ್ರವಲ್ಲ ಡಿಸೆಂಬರ್ 5ರಂದು ನಾನು, ಕಾರ್ಯದರ್ಶಿ ಶ್ರೀ ವೆಂಕಟೇಶ್ ಎನ್.

ಬಾಳಿಗರನ್ನು ಮುಂಬಯಿಗೆ ಕರೆಸಿಕೊಂಡು ಅವರ ಆಫೀಸಿನಲ್ಲಿ ಕೂಡಿದ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ನಮ್ಮನ್ನು ತುಂಬಾ ಆದರದಿಂದ ಸ್ವಾಗತಿಸಿ, ನಮಗೆ ಶಾಲು, ಹೂಮಾಲೆ, ಫಲತಂಬೂಲ, ಸ್ಮರಣಿಕೆ ಕೊಟ್ಟು ಸನ್ಮಾನ ಮಾಡಿ ರೂ. 20.00 ಲಕ್ಷದ ಬ್ಯಾಂಕ್ ಡಿ.ಡಿ. ಹಸ್ತಾಂತರಿಸಿದರು. ಇದು ನನಗೆ ಜೀವಮಾನದಲ್ಲಿಯೇ ನೂತನ ಅನುಭವ. ನಮಗೆ ಅಷ್ಟು ದೊಡ್ಡ ಮೊತ್ತದ ದೇಣಿಗೆ ಕೊಟ್ಟು ನಮ್ಮನ್ನು ಸನ್ಮಾನಿಸುವುದೆಂದರೆ ಅದು ನಮ್ಮ ಮೇಲೆ ಇರುವ ದೇವರ ದಯೆಯೆಂದು ನನ್ನ ವಿಶ್ವಾಸ.

ಅದಾದ ಕೆಲವೇ ದಿನಗಳ ಬಳಿಕ ನಮ್ಮ ಸಂಸ್ಥೆಯ ಸಕ್ರಿಯ ಸದಸ್ಯ ಶ್ರೀ ಪ್ರದೀಪ ಪೈಯವರ ಸತತ ಸಂಪರ್ಕಗಳಿಂದ ಜಗದ್ವಿಖ್ಯಾತ ಇನ್ಫೋಸಿಸ್ ಸಂಸ್ಥೆಯ ಮಾನವ ಸಂಪನ್ಮೂಲಗಳ ನಿರ್ದೇಶಕ ಶ್ರೀ ಟಿ. ವಿ. ಮೋಹನದಾಸ್ ಪೈಯವರು ವಿಶ್ವ ಕೊಂಕಣಿ ಕೇಂದ್ರಕ್ಕೆ ಭೇಟಿ ಇತ್ತರು. ಬರೇ 30 ನಿಮಿಷಗಳ ಅವಧಿ ಕೊಟ್ಟಿದ್ದರೂ, ಅವರು ವಿಶ್ವ ಕೊಂಕಣಿ ಕೇಂದ್ರದಲ್ಲಿ 70 ನಿಮಿಷಗಳನ್ನು ನಮ್ಮೊಂದಿಗೆ ಕಳೆದರು. ನಾನು ವಿಶ್ವ ಕೊಂಕಣಿ ಕೇಂದ್ರದ ಕಟ್ಟಡ, ಅದರಲ್ಲಿಯ ವಿವಿಧ ಕಕ್ಷಗಳು, ನಮ್ಮ ಸಾಧನೆಗಳನ್ನು ಕೂಲಂಕುಶವಾಗಿ ಅವರಿಗೆ ವಿವರಿಸಿದೆ. ನಮ್ಮಲ್ಲಿಯ ವಿಶ್ವ ಕೊಂಕಣಿ ಲೈಬ್ರೇರಿಯ ಪುಸ್ತಕ ಸಂಗ್ರಹ, ಹಸ್ತ ಪ್ರತಿಗಳ ರಕ್ಷಣೆಗೆ ಇರುವ ವಿಧಾನಗಳು ತಿಳಿದುಕೊಂಡು, ತಾನು ತನ್ನ ತಾಯಿ 'ಶ್ರೀಮತಿ ಟಿ. ವಿಮಲಾ ಪೈ'ಯವರ ಹೆಸರಿನಲ್ಲಿ ಕೊಂಕಣಿ ಸಾಹಿತ್ಯ ಕ್ಷೇತ್ರದ ಲೇಖಕರಿಗೆ /ಪ್ರಕಾಶನಕ್ಕೆ ವರ್ಷಂಪ್ರತಿ ರೂ. ಒಂದು ಲಕ್ಷದ ಪುರಸ್ಕಾರ (ಪ್ರಶಸ್ತಿ) ವನ್ನು 10 ವರ್ಷಗಳವರೇಗೆ ಕೊಡುವುದಾಗಿ (ii) ವಿಶ್ವ ಕೊಂಕಣಿ ಭಾಷಾ ಸಂಸ್ಥಾನ (World Institute of Konkani Language Research & Studies) ಸಹಾಯ ಮಾಡುವುದಾಗಿ, (iii) ತನ್ನ ತಂದೆ ಮತ್ತು ತಾಯಿಯವರ ಹೆಸರಿನಲ್ಲಿ 'T.V. Raman Pai & Vimalav Pai Hostel' 18 ಕೋಣೆಗಳ ಸುಸಜ್ಜಿತ ಹಾಸ್ಟೆಲನ್ನು ಕಟ್ಟಿಸಿಕೊಡುವುದಾಗಿ ತಿಳಿಸಿದರು. ಇದರಿಂದಾಗಿ ವಿಶ್ವ ಕೊಂಕಣಿ ಕೇಂದ್ರದ ಬಗ್ಗೆ ನನ್ನ ದರ್ಶನ ಅಥವಾ ಕನಸಿನ ಎರಡನೆ ಹಂತ ನನಸಾಗುವ ಕಾಲ ಒದಗಿ ಬಂದಿದೆಯಾಗಿ ನನ್ನ ನಂಬುಗೆ. ಬಹುಶಃ ಕೊಂಕಣಿ ಜಗತ್ತಿನ ದಾನ ಚಕ್ರವರ್ತಿಗಳು ಒಬ್ಬೊಬ್ಬರಾಗಿ ನನ್ನ ದರ್ಶನ (VISION) ಕಾರ್ಯರೂಪಗೊಳಿಸುವುದಕ್ಕೆ ನನ್ನೊಡನೆ ಸೇರುತ್ತಲಿದ್ದಾರೆ. ಮತ್ತು ನನ್ನ ತಪಸ್ಸಿಗೆ ದೇವರು ಮೆಚ್ಚಿದ್ದಾನೆ ಎಂದು ನನ್ನ ಧೃಢ ವಿಶ್ವಾಸ.

ಇನ್ನೂ ವಿಶ್ವ ಕೊಂಕಣಿ ಭಾಷಾ ಸಂಸ್ಥಾನದಿಂದ ಕೊಂಕಣಿ ಭಾಷೆ, ಬೇರೆ ಬೇರೆ ಸಮಾಜಗಳು, ಸಂಪ್ರದಾಯಗಳು, ಸಂಸ್ಕಾರಗಳ ಬಗ್ಗೆ ಪ್ರಾಚೀನ ಇತಿಹಾಸ, ದಾಯ್ಜ (Heritage) ಗಳ ಬಗ್ಗೆ ದೃಶ್ಯ ಶ್ರಾವ್ಯ ಪ್ರಮಾಣೀಕರಣ, ದಾಖಲೀಕರಣಗೊಳಿಸುವ (Audio Video Documentation) ಕಾರ್ಯ, ನಮ್ಮ ಹಿರಿಯರು ಗೋವೆಯಿಂದ ಉತ್ತರ ದಕ್ಷಿಣಗಳಿಗೆ ಹಂಚಿ ಹೋದ ಹೆಜ್ಜೆ ಗುರುತುಗಳನ್ನು ವಿವಿಧ ಪ್ರದೇಶಗಳಲ್ಲಿ ಅವರು ಸಾಧಿಸಿದ ಪವಾಡ ಸದೃಶ ಮೇರುಗಳನ್ನು ಚಿತ್ರ, ಪ್ರತಿಮೆಗಳ ಮೂಲಕ ಸಾದೃಶ್ಯವಾಗಿ ತೋರಿಸುವ 'ನಾವು

ಕೊಂಕಣಿಗಳು' ಪ್ರದರ್ಶನ ವಿಭಾಗ (Sound and light) ಸ್ಥಾಪನೆ ಕುರಿತಾದ ಯೋಜನೆಗಳಿವೆ.

ಅಲ್ಲದೇ ವಿಶ್ವ ಕೊಂಕಣಿ ಸಮ್ಮೇಳನ - ದ್ವಿತೀಯ, 2010 ದಶಂಬರ 3ನೇ ವಾರದಲ್ಲಿ ಮಂಗಳೂರಿನಲ್ಲಿ ಸಂಘಟಿಸುವ ಸಂಕಲ್ಪವಿದೆ. ಈ ಯಶಸ್ಸುಗಳು ಹಿಂಬಾಲಿಸಿ ಬರುವಾಗ ಇದೆಲ್ಲವನ್ನು ಕಾಣಲು, ನಮ್ಮ ಮೆಚ್ಚಿ ಬೆನ್ನು ತಟ್ಟುತ್ತಿದ್ದ ಹಿರಿಯರಾದ ಕೆ.ಕೆ. ಪೈ ಮಾಮ್ ಬದುಕಿದ್ದು ನಮ್ಮೊಡನೆ ಈ ಸಂತಸದ ಕ್ಷಣಗಳನ್ನು ಸವಿಯುತ್ತಲಿರಬೇಕೆಂದು ಬಯಸುವ ನನ್ನ ಮನಸ್ಸು ಹೃದಯಗಳು 'ಪೈಮಾಮ್ ಇನ್ನಿನಿಸು ನೀ ಬದುಕಬೇಕಿತ್ತು' ಎಂದು ಮೊರೆಯಿಡುತ್ತಿವೆ.

ಕೊಂಕಣಿ ಭಾಷೆ, ಸಾಹಿತ್ಯ ಕಲೆ ಸಂಸ್ಕೃತಿಗಳ ಬಗ್ಗೆ ಆಕಾಶದ ಎಷ್ಟು ಎತ್ತರದವರೇಗೂ ಏಣಿಯನ್ನು ಏರಿಸುವಷ್ಟು ಮೈಯಲ್ಲಿ ಕಸುವಿದೆ. ಅದಕ್ಕೆ ದೈವಾನುಬಲ ಮತ್ತು ಸಮಾಜದ ಗುರುಗಳ ಶುಭಾರ್ಶಿವಾದವಿದೆ ಎಂಬ ನಂಬುಗೆಯಿಂದಲೇ ಮುಂದುವರಿಯುತ್ತಲಿದ್ದೇನೆ. 'ನನ್ನ ಬದುಕು' ಬರೆದ ವಿಧಾತನ ಪುಸ್ತಕದಲ್ಲಿ ಇನ್ನು ಎಷ್ಟು ಪುಟಗಳಿವೆಯೆನೋ ಅವನೇ ಬಲ್ಲ. ಅದರ ಬಗ್ಗೆ ಚಿಂತಿಸುವ, ಮೆಲುಕಾಡುವ ಸಮಯ ಇದಲ್ಲ ಎಂದೆನಿಸುತ್ತದೆ. ಯಾಕೆಂದರೆ ಇನ್ನು ಉಳಿದುದನ್ನು ಸಾಧಿಸುವಲ್ಲಿ, ನನ್ನ ಹೆಗಲ ಮೇಲೆ ಇರುವ ವಜ್ಜೆಗೆ ಹೆಗಲು ಕೊಡುವ ಸಂಗಾತಿಗಳು ಮಂಗಳೂರು ಬೆಂಗಳೂರು ಮುಂಬಯಿಗಳಲ್ಲಾಗಲೀ ಅಥವಾ ಜಗತ್ತಿನಲ್ಲೆಡೆಗಳಲ್ಲಿ ಇದ್ದಾರೆ. ನನ್ನ ಪಯಣದಲ್ಲಿ ನನ್ನೊಡನೆ ಹೆಜ್ಜೆಯಿಡುವ ವಿಶ್ವಾಸೀ ಪಡೆಯಿದೆ. ಇದರಿಂದಾಗಿ ನನಗೆ ಯಾವುದೇ ಸಾಧನೆಗಳು, ಪ್ರಯತ್ನಗಳು ಕಷ್ಟವೆಂದೆನಿಸುವುದಿಲ್ಲ. ನಾನು ಕೈಗೊಂಡಿರುವ ನನ್ನ ಮಾತೃಭಾಷೆಯ ಕೈಂಕರ್ಯ, ಜಗತ್ತಿನಲ್ಲೆಡೆ ಕೊಂಕಣಿ ಭಾಷೆಗೆ ಜಾಗತಿಕ ಮಾನ ಮರ್ಯಾದೆ ಪುರಸ್ಕಾರಗಳಿಸುವ ಸಾಧನವಾಗುವ ದಿಶೆಯಲ್ಲಿ ನನ್ನ ನಡೆ ಸಾಗಿದೆಯೆಂದೇ ನಾನು ನಂಬಿದ್ದೇನೆ.

ನನ್ನ ಹಿಂದೆ, ಮಾರ್ಗದರ್ಶನ ನೀಡುವ ಉನ್ನತ ಮಟ್ಟದ ಗುರುಹಿರಿಯರಿದ್ದರು. ಮುಂದೆ ಅವರು ಹಾಕಿಕೊಟ್ಟ ಮಹತ್ವಾಕಾಂಕ್ಷೆಯ ಗುರಿಗಳಿವೆ. ಹೀಗಾಗಿ ಸಾಗಿದೆ ನನ್ನ ಧೀರ ಯಶಸ್ಸುಗಳ ನಡೆ.

ದೇವು ಬರೆಂ ಕೊರೊ.

ಬಂಟ್ವಾಳದಲ್ಲಿ ನಾನು ನನ್ನ ಪ್ರಾಥಮಿಕ ವಿದ್ಯಾಭ್ಯಾಸವನ್ನು ಪೂರೈಸಿರುವುದರಿಂದ ನನ್ನ ಪೂಜ್ಯ ತಂದೆಯವರಿಗೆ ಪರಿಚಿತರಾಗಿದ್ದ ಬಂಟ್ವಾಳದ ಕೆಲವು ನಾಗರಿಕರಲ್ಲಿ ಶ್ರೀ ಬಸ್ತಿ ವಾಮನ ಶೆಣೈಯವರು ಒಬ್ಬರಾಗಿದ್ದಾರೆ.

ಸಮಾಜ ಸೇವಕರೂ, ಸಾತ್ವಿಕರೂ ಆದ ಶ್ರೀ ಶೆಣೈ ಅವರು ಅನೇಕ ಧಾರ್ಮಿಕ, ಸಾಹಿತ್ಯ ಹಾಗೂ ಸಾಮಾಜಿಕ ಸಂಘಟನೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಭಾಷೆ, ಸಾಹಿತ್ಯ, ಸಂಸ್ಕೃತಿಯ ಬಗ್ಗೆ ಸದಾ ತುಡಿತ ಇರುವ ಶ್ರೀಯುತರ ಸಮರ್ಪಣಾ ಮನೋಭಾವದ ಸೇವೆ ಶ್ಲಾಘನೀಯವಾಗಿದೆ.

ಸದಾ ಹಸನ್ಮುಖರಾಗಿಯೇ ಇರುವ ಶ್ರೀ ಶೆಣೈಯವರು ಯಾವುದೇ ಸಭೆ ಸಮಾರಂಭಗಳಲ್ಲಿ ಆತ್ಮೀಯತೆಯಿಂದ ಭಾಗವಹಿಸುತ್ತಾರೆ. ತುಳು ಭಾಷೆ ಮತ್ತು ಕೊಂಕಣಿ ಭಾಷೆ ಇವೆರಡೂ ಕರ್ನಾಟಕದಲ್ಲಿ ಅಲ್ಪಸಂಖ್ಯಾಕ ಭಾಷೆಗಳಾಗಿವೆ. ಕ್ಷಿಪ್ರ ಗತಿಯಲ್ಲಿ ಬದಲಾಗುತ್ತಿರುವ ಇಂದಿನ ಆಧುನಿಕ ಸಮಾಜದಲ್ಲಿ ತಮ್ಮ ವ್ಯಕ್ತಿತ್ವವನ್ನು ಉಳಿಸಿಕೊಳ್ಳುವುದೇ ದೊಡ್ಡ ಸಾಹಸ ಮತ್ತು ಅನಿವಾರ್ಯವಾಗಿದೆ.

ಶ್ರೀ ಶೆಣೈಯವರು ಕೊಂಕಣಿ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ಅನೇಕ ಕೊಂಕಣಿ ಸಮ್ಮೇಳನಗಳನ್ನು ಯಶಸ್ವಿಯಾಗಿ ನಡೆಸಿರುವುದಲ್ಲದೇ ಕೊಂಕಣಿ ಭಾಷೆಯನ್ನು ರಾಷ್ಟ್ರ ಮಟ್ಟದಲ್ಲಿ ಗುರುತಿಸುವಂತೆ ಮಾಡುವಲ್ಲಿ ಹೆಚ್ಚಿನ ಪ್ರಯತ್ನ ಮಾಡಿ ಅದರಲ್ಲಿ ಯಶಸ್ಸನ್ನು ಸಾಧಿಸಿದ್ದಾರೆ.

ರಾಜರ್ಷಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರು